# ರಾಜಶೇಖರ ಹತಗುಂದಿಯವರ ಅಂಕಣ ಸಾಹಿತ್ಯ

(ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ ಬೀದರ ಇವರಿಗೆ ಎಂ.ಫಿಲ್
ಅಂಶಿಕ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕರು

ಸುಜಾತಾ ಮೋಹನರಾವ ಅಲಮೇಲಕರ

ಮಾರ್ಗದರ್ಶಕರು

ಡಾ. ಶ್ರೀಶೈಲ್ ನಾಗರಾಳ

ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ ಬೀದರ



ಕನ್ನಡ ವಿಶ್ವ ವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩೨೭೬

೨೦೧೨-೧೩

1041

# ರಾಜಶೇಖರ ಹತಗುಂದಿಯವರ ಅಂಕಣ ಸಾಹಿತ್ಯ

(ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ ಬೀದರ ಇವರಿಗೆ ಎಂ.ಫಿಲ್. ಅಂಶಿಕ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕರು
ಸುಜಾತಾ ಮೋಹನರಾವ ಅಲಮೇಲಕರ

ಮಾರ್ಗದರ್ಶಕರು
ಡಾ. ಶ್ರೀಶೈಲ್ ನಾಗರಾಳ
ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ ಬೀದರ

ಕನ್ನಡ ವಿಶ್ವ ವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩೨೭೬
೨೦೧೨-೧೩

# ಪ್ರಮಾಣ ಪತ್ರ

**ಸುಜಾತಾ ಮೋಹನರಾವ ಆಲಮೇಲ್‌ಕರ** ಇವರು ಕನ್ನಡ ವಿಶ್ವವಿದ್ಯಾಲಯ ದಿಂದ ಮಾನ್ಯತೆ ಪಡೆದ ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ ಸಂಶೋಧನ ಕೇಂದ್ರ ಬೀದರನಲ್ಲಿ ಅಧ್ಯಯನ ಕೈಗೊಂಡು **"ರಾಜಶೇಖರ ಹತಗುಂದಿಯವರ ಅಂಕಣ ಸಾಹಿತ್ಯ"** ಎಂಬ ನಿಬಂಧವನ್ನು ಎಂ.ಫಿಲ್. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಇದು ಇವರ ಮೂಲ ನಿಬಂಧ ವಾಗಿದ್ದು, ಈ ಮೊದಲು ಇದು ಇಡಿಯಾಗಿ ಇಲ್ಲವೇ ಬಿಡಿಯಾಗಿ, ಎಲ್ಲಿಯೂ ಪ್ರಕಟ ವಾಗಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ.

ಸ್ಥಳ: ಬೀದರ

ದಿನಾಂಕ: 18/7/13

ಡಾ.ಶ್ರೀಶೈಲ ನಾಗರಾಳ

ಮಾರ್ಗದರ್ಶಕರು

ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ, ಬೀದರ

# ಘೋಷಣಾ ಪತ್ರ

**ರಾಜಶೇಖರ ಹತಗುಂದಿಯವರ** ಅಂಕಣ ಸಾಹಿತ್ಯ ಎಂಬ ನಿಬಂಧವನ್ನು ನಾನು **ಡಾ. ಶ್ರೀಶೈಲ ನಾಗರಾಳ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದು, ಇದನ್ನು ಇಡಿಯಾಗಿ ಇಲ್ಲವೇ ಬಿಡಿಯಾಗಿ ಎಲ್ಲಿಯೂ ಪ್ರಕಟಿಸಿಲ್ಲವೆಂದು ಪ್ರಮಾಣೀಕರಿಸುತ್ತಾ, ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ಪದವಿಗಾಗಿ ಈ ನಿಬಂಧವನ್ನು ಸಾದರ ಪಡಿಸುತ್ತಿದ್ದೇನೆ.

ಸ್ಥಳ: ಬೀದರ

ದಿನಾಂಕ: 18/7/13

**ಸುಜಾತಾ ಮೋಹನರಾವ ಆಲಮೇಲ್‌ಕರ**

ಸಂಶೋಧನಾ ವಿದ್ಯಾರ್ಥಿ,

ಕ.ರಾ.ಶಿ.ಸಂಸ್ಥೆಯ ಸ್ನಾತಕೋತ್ತರ ಸಂಶೋಧನಾ ಕೇಂದ್ರ, ಬೀದರ



ರಾಜಶೇಖರ ಹತಗುಂದಿ

ಸಂಪಾದಕರು 'ಅಗ್ನಿ' ವಾರಪತ್ರಿಕೆ ಬೆಂಗಳೂರು



# ಪರಿವಿಡಿ

# ಅಧ್ಯಾಯ–1

# ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

# ಅಧ್ಯಾಯ – ೧

## ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

### ೧.೧ ಪೀಠಿಕೆ :

ಹೊಸಗನ್ನಡ ಸಾಹಿತ್ಯಕ್ಕೆ ಸುಮಾರು ಒಂದು ಶತಮಾನದಷ್ಟು ಇತಿಹಾಸವಿದೆ. ಕಳೆದ ಇಪ್ಪತ್ತನೆಯ ಶತಮಾನದ ಆರಂಭದಿಂದ ಹೊಸಗನ್ನಡ ನವೋದಯ, ಪ್ರಗತಿಶೀಲ ನವ್ಯ ಮತ್ತು ದಲಿತ ಬಂಡಾಯ ಸಾಹಿತ್ಯ ಚಳುವಳಿಯ ಕಾಲಘಟ್ಟಗಳ ಸನ್ನಿವೇಶಗಳನ್ನು ನಿರ್ಮಾಣ ಮಾಡಿಕೊಳ್ಳುತ್ತ ಸುದೀರ್ಘವಾಗಿ ಬೆಳೆದಿದೆ.

ಮಹಾಕಾವ್ಯ, ಕಥೆ, ಕಾದಂಬರಿ,ಪ್ರಬಂದ, ನಾಟಕ, ಪ್ರವಾಸ ಕಥನ, ಅತ್ಮ ಚರಿತ್ರೆಯಂತೆ ಅಂಕಣ ಸಾಹಿತ್ಯವು ಒಂದು ಪ್ರಕಾರವಾಗಿದೆ. ಕಾಲಮಾನಕ್ಕೆ ತಕ್ಕಂತೆ ಕಿರಿದರಲ್ಲಿ ಹಿರಿದರ್ಥವನ್ನು ತುಂಬುವ, ಕಡಿಮೆ ಅವಧಿಯಲ್ಲಿ ಸಾಹಿತ್ಯ ಲೋಕದ ಪ್ರಮುಖ ಬೆಳವಣಿಗೆಯನ್ನು ದಾಖಲಿಸುವುದು ಅಂಕಣ ಸಾಹಿತ್ಯ. 'ಅಂಕಣ ಸಾಹಿತ್ಯವೆಂಬುದು' ಪತ್ರಿಕಾ ಸಾಹಿತ್ಯದ ಅನುಷಂಗಿಕ ಫಲ. ಪತ್ರಿಕೆಯಲ್ಲಿ ನಿದಿಷ್ಟ ಶಿರೋನಾಮೆಯ ಅಡಿಯಲ್ಲಿ ನಿಯತವಾಗಿ ಕಾಣಿಸಿಕೊಳ್ಳುವ ಕಿರು ಲೇಖನವೇ ಅಂಕಣ ಬರಹವಾಗಿದೆ. ಅಂಕಣದ ಪಿತಾಮಹರೆಂದು ಸಿದ್ದವನಹಳ್ಳಿ ಕೃಷ್ಣ ಶರ್ಮರು ಒಂದು ವ್ಯವಸ್ಥಿತ ರೀತಿಯಲ್ಲಿ ಜೋಡಿಸಿ ಅಂಕಣವನ್ನು ಡಾ. ಹಾ.ಮಾ.ನಾಯಕರು ಬರೆದರು. ಇವರು ಅಂಕಣ ಸಾಹಿತ್ಯ ಕುರಿತು ಹೀಗೆ ಹೇಳಿದ್ದಾರೆ. "ಇಂಗ್ಲೀಷಿನಲ್ಲಿ ಯಾವುದನ್ನು ಕಾಲಮ ರೈಟಿಂಗ್" ಎನ್ನುತ್ತೇವೆ ಅದನ್ನು ಕನ್ನಡ ರೂಪವೇ ಅಂಕಣ ಸಾಹಿತ್ಯ. ವರ್ತಮಾನ ಪತ್ರಿಕೆಗೆ ಸಮಕಾಲೀನ ಸ್ಥಿತಿಗತಿಗಳನ್ನು ವ್ಯಾಖ್ಯಾನಿಸುವ ಸ್ಥಿರ ಶೀರ್ಷಿಕೆಯ ಲೇಖನ ಮಾಲೆಯನ್ನು ಬರೆಯುವವನು ಅಂಕಣಕಾರನೆಂದು ಬ್ರಿಟಾನಿಕ ವಿಶ್ವಕೋಶದಲ್ಲಿ ಹೇಳಲಾಗಿದೆ.

ರಾಜಶೇಖರ ಹತಗುಂದಿಯವರು ಸರಳ ಸಜ್ಜನಿಕೆಯ ನಿರಾಡಂಬರದ ವ್ಯಕ್ತಿತ್ವ ಇವರದಾಗಿದೆ. ಹೋರಾಟದ ಬದುಕು, ಮಿಂಚಿನ ಪ್ರತಿಭೆ, ಪರಿಶ್ರಮ ಪ್ರವೃತ್ತಿಯುಳ್ಳವರು ಸಧ್ಯ ಬೆಂಗಳೂರಿನಲ್ಲಿ 'ಅಗ್ನಿ' ವಾರ ಪತ್ರಿಕೆಯ ಸಂಪಾದಕರಾಗಿದ್ದಾರೆ. ಈ ಪತ್ರಿಕೆಯಲ್ಲಿ ಕಾಲಾನುಸಾರವಾಗಿ ಬರೆದ ಅಂಕಣ ಬರಹಗಳನ್ನು ಅವರು 'ಎಡ ಹೊತ್ತಿನ ಪಯಣ' ಮತ್ತು 'ಬಯಲು ಹುಡಿ' ಎಂಬ ಗ್ರಂಥಗಳ ರೂಪದಲ್ಲಿ ಪ್ರಕಟಿಸಿರುವರು.

ಈ ಅಂಕಣಗಳು ವರ್ತಮಾನದ ರಾಜಕೀಯ ನಡತೆಯನ್ನು ವಿಶ್ಲೇಷಿಸುತ್ತದೆ. ಮತಿಯ ಚಟುವಟಿಕೆಗಳ ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುತ್ತದೆ. ಸಾಮಾಜಿಕ ಆರ್ಥಿಕ ನೀತಿಯ ಒತ್ತಾಯವನ್ನು ಮಂಡಿಸುತ್ತದೆ. ಹತಗುಂದಿಯವರಿಗೆ ಲಂಕೇಶ, ಗಾಂಧಿ, ಲೋಹಿಯಾ ಹಾಗೂ ಅಂಬೇಡ್ಕರ್ ಪ್ರಭಾವದಿಂದ ಇವರು ಕೂಡಾ ನೇರ, ನಿಷ್ಠುರ ಟೀಕೆಗಳಿಯುತ್ತಾರೆ. ಇವರ ಅಂಕಣ ಸಾಹಿತ್ಯದಲ್ಲಿ ತಾತ್ಕಾಲಿಕ ತುಡಿತಗಳು ಪ್ರತಿರೋಧಗಳು, ಸಂಕಟಗಳು ಹೀಗೆ ಸಮಾಜದ ನಿತ್ಯ ಸಂಗತಿಗಳ ವೃತ್ತಾಂತಗಳನ್ನು ಮಂಡಿಸುತ್ತಾರೆ.

**೧.೨ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ :**

ರಾಜಶೇಖರ ಹತಗುಂದಿಯವರು ೨೦೦೭ ರಲ್ಲಿ 'ಅಗ್ನಿ' ವಾರಪತ್ರಿಕೆಯ ಸಂಪಾದಕರಾದರು. ಇವರ ಪ್ರಕಟಿತ ಅಂಕಣಗಳನ್ನು 'ಎಡಹೊತ್ತಿನ ಪಯಣ' ಹಾಗೂ 'ಬಯಲು ಹುಡಿ' ಎಂಬ ಕೃತಿಗಳಾಗಿ ಬಿಡುಗಡೆಯಾಗಿವೆ. ತೀಕ್ಷ್ಣತೆ ಮತ್ತು ಸೂಕ್ಷ್ಮತೆಯನ್ನು ಕಾಳಜಿಪೂರ್ವಕವಾಗಿ ಬಳಸಿಕೊಂಡು ಬರವಣಿಗೆ ಇವರದಾಗಿದೆ. ಇವರು ಲಂಕೇಶ, ಅಂಬೇಡ್ಕರ್, ಗಾಂಧೀ, ಲೋಹಿಯಾ ಇವರ ಪ್ರಭಾವಕ್ಕೊಳಗಾಗಿ ಅಂಕಣ ಬರೆಯಲು ಸ್ಫೂರ್ತಿ ಬಂದಿತು. ಈ ಅಂಕಣಗಳು ರಅಜಕೀಯ, ಸಾಮಾಜಿಕ, ಸಾಂಸ್ಕೃತಿಕ ಭಾಷೆ ಮತ್ತು ಶೈಲಿ ಮುಂತಾದ ವಿಷಯಗಳನ್ನು ಒಳಗೊಂಡಿದೆ ಎಂದು ಹೇಳಬಹುದು.

ಕನ್ನಡದಲ್ಲಿ ಅಂಕಣ ಬರಹಗಳ ಆಯಾಮವನ್ನು ವಿಸ್ತರಿಸಿದ್ದಾರೆ. ಅಂಕಣಗಳನ್ನು ವ್ಯವಸ್ಥಿತವಾಗಿ ರೂಪಿಸಿ ಸಾರಾಂಶದೊಂದಿಗೆ ಪ್ರಮಾಣಿಕವಾಗಿ ಪ್ರತಿಕ್ರೀಯಿಸುತ್ತಾರೆ. ಲಂಕೇಶರ ಟೀಕೆ–ಟಿಪ್ಪಣೆಯನ್ನು, ಕುತುಕೋಟಿಯವರ ವಿಮರ್ಶೆಯನ್ನು, ಗಾಂಧೀ ಚಿಂತನೆಯನ್ನು, ಲೋಹಿಯಾ ಬರಹಗಳನ್ನು, ಅಂಬೇಡ್ಕರ್ ಲೇಖನಗಳನ್ನು ರಾತ್ರಿಯೆಲ್ಲಾ ಓದಿ ಒಂದು ಸುದೀರ್ಘ ಅಂಕಣಗಳಣ್ನು ಬರೆದು ಆಯಾಮವನ್ನು ವಿಸ್ತರಿಸಿದ್ದಾರೆಂದು ಹೇಳಬಯಸುತ್ತೇನೆ.

**ವೈವಿಯಮಯವಾದ ವಿಷಯಗಳನ್ನು ಒಳಗೊಂಡಿದೆ ;** ಅನೇಕ ಮಹಾನ ವ್ಯಕ್ತಿಗಳಕೃತಿಗಳನ್ನು ಓದಿ ಹೆಚ್ಚೆಚ್ಚು ಸ್ಪಂದನಶೀಲರನ್ನಾಗಿ ಮಾಡಿದೆ. ರೈತರ ಆತ್ಮಹತ್ಯೆ, ಸಮಾಜದ ಒಳನೋಟಗಳನ್ನು ಕುರಿತು ಬರೆದಿದ್ದಾರೆ. ಗಡಿ ಸಮಸ್ಯೆ, ನೀರಾವರಿ ಯೋಜನೆಗಳು, ಬೆಲೆ ಏರಿಕೆ, ಭಯೋತ್ಪಾದನೆ,

ರಾಜಕಾರಣ, ಮೌಢ್ಯಾಚರಣೆ, ಕೋಮು ಗಲಭೆ ಹೀಗೆ ಮುಂತಾದ ವಿಷಯಗಳನ್ನು ಕುರಿತು ಅಂಕಣ ಬರೆದಿದ್ದಾರೆ.

**ಸಮಕಾಲೀನತೆಗೆ ನಿಖರವಾಗಿ ಸ್ಪಂಧಿಸಿದ್ದಾರೆ :** ವರ್ತಮಾನದ ಅಗು ಹೋಗುಗಳ ಬಗ್ಗೆ ನಿಖರವಾಗಿ ಬರಹಕ್ಕೆ ಒಗ್ಗೂಡಿಸಿಕೊಳ್ಳದಿದ್ದರೆ ಬರಹಕ್ಕೆ ಅರ್ಥವಿರುವದಿಲ್ಲ, ಪ್ರಾಮಾಣಿಕವಾಗಿ ಅನಿಸಿದ್ದನ್ನು ಹೇಳಲು ಹತಗುಂದಿ ಪೇಚಾಡುವುದಿಲ್ಲ.

**ಸಾಮಾಜಿಕ ಎಚ್ಚರ ಸಾಂಸ್ಕೃತಿಕ ಕಾಳಜಿ ಸೂಕ್ಷ್ಮವಾದ ಪರಿಶೀಲನೆ ಈ ಅಂಕಣಗಳ ಜೀವದ್ರವ್ಯವಾಗಿದೆ :** ಜನ ಸಾಮಾನ್ಯರ ತೊಂದರೆ ತಾಪತ್ರಯಗಳಣ್ನು ಗಮನಿಸಿದ್ದಾರೆ. ಜನರ ಕನಿಷ್ಠ ನೆಮ್ಮದಿಯೂ ಹೇಗೆ ನಾಶಗೊಳ್ಳುತ್ತದೆ ಎನ್ನುವುದು ಅವರ ಬರಹದಲ್ಲಿ ಮುಖ್ಯವಾಗಿ ಬಿಂಬಿಸುತ್ತದೆ. ಇದೇ ರೀತಿ ಸಾಂಸ್ಕೃತಿಕ ವಿಚಾರಗಳನ್ನು ಕುರಿತು ಅಂಕಣಗಳನ್ನು ಪರಿಶೀಲನೆ ಮಾಡಿದ್ದಾರೆ.

**ಕಳೆದ ಒಂದು ದಶಕದ ಕರ್ನಾಟಕದ ಸಾಂಸ್ಕೃತಿಕ ವಿದ್ಯಮಾನಗಳಿಗೆ ಇವು ಕನ್ನಡಿ ಹಿಡಿದಿವೆ:** ಹಿಂದಿನ ಅನೇಕ ಸಮಸ್ಯೆಗಳಿಗೆ ಒಂದು ಮಾರ್ಗದರ್ಶನದಂತೆ ಹತಗುಂದಿಯವರ ಅಂಕಣಗಳು ಮಾರ್ಗದರ್ಶಿಯಾಗಿವೆ ಎಂದರೆ ತಪ್ಪಾಗಲಾರದು.

**ಭಾಷೆ ಮತ್ತು ಶೈಲಿಯ ದೃಷ್ಟಿಯಿಂದ ಅನನ್ಯವಾದ ಹಾದಿ ತುಳಿದಿದೆ :** ಹತಗುಂದಿಯವರ ಬರವಣಿಗೆ ಭಾಷೆ ಮತ್ತು ಶೈಲಿ ತುಂಬಾ ವಿಭಿನ್ನವಾಗಿ ಜನ ಸಾಮಾನ್ಯರ ತೊಂದರೆ ಗಮನದಲ್ಲಿಟ್ಟುಕೊಂಡು ಅಂಕಣ ಬರೆಯುತ್ತಾರೆ. ಇವರ ಬರಹಗಳಲ್ಲಿ ವೈಚಾರಿಕ ಪ್ರಜ್ಞೆ ಮಾನವೀಯ ಮೌಲ್ಯ, ಮಾನವೀಯ ಸ್ಪರ್ಶವಿದೆಯೆಂದು ಹೇಳಬಹುದು.

ಈ ಎಲ್ಲಾ ಕಾರಣಗಳಿಂದ ಅವರ ಅಂಕಣಗಳನ್ನು ಓದುವುದು ಅಧ್ಯಯನಕ್ಕೆ ಒಳಪಡಿಸಿ ಸಂಶೋಧನೆ ಮಾಡುವುದು ಮುಖ್ಯವೆಂದು ಭಾವಿಸುತ್ತೇನೆ. ಇದನ್ನು ನಾನು ಎಂ.ಫಿಲ್ ಸಂಶೋಧನೆಗಾಗಿ ಕೈಗೊಳ್ಳುತ್ತಿದ್ದೇನೆ.

ಕನ್ನಡ ಅಂಕಣ ಸಾಹಿತ್ಯಕ್ಕೆ ಸರಿಸುಮಾರು ಅರ್ಧ ಶತಮಾನಕ್ಕೂ ಹೆಚ್ಚಿನ ಚರಿತ್ರೆಯಿದೆ. ಹೊಸಗನ್ನಡದ ಅನೇಕ ಸಾಹಿತ್ಯಿಕ ಘಟ್ಟಗಳಲ್ಲಿ ವಿವಿಧ ಅಂಕಣಕಾರರು ಆಗಿ ಹೋದರು.

ಅವರಲ್ಲಿ ಪ್ರಮುಖವಾಗಿ ಹತಗುಂದಿಯರವರ ಈ ಅಂಕಣ ಸಾಹಿತ್ಯವನ್ನು ಸಂಶೋಧನೆಯ ಅಧ್ಯಯನಕ್ಕಾಗಿ ಎತ್ತಿಕೊಂಡಿದ್ದೇನೆ.

'ಬಯಲು ಹುಡಿ' ಯ ಬರಹಗಳು ಪ್ರಧಾನವಾಗಿ ಮೂರು ನೆಲೆಗಳಲ್ಲಿ ಮುಖಾ ಮುಖಿಯಾಗುತ್ತದೆ. ಮೊದಲಿಗೆ ಈ ಬರಹಗಳು ಕರ್ನಾಟಕದ ವರ್ತಮಾನದ ರಾಜಕೀಯ ನಡತೆಯನ್ನು ವಿಶ್ಲೇಷಿಸುತ್ತದೆ. ಎರಡನೆಯದಾಗಿ ಮಲೆಯವಾಡಿ ಚಟುವಟಿಕೆಗಳ ವಿರುದ್ಧ ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿಯುತ್ತದೆ. ಮೂರನೇಯದಾಗಿ ಸಾಮಾಜಿಕ, ಆರ್ಥಿಕ, ನೀತಿಯ ಒತ್ತಾಯದ ಮಂಡಿಸುತ್ತದೆ. ಇಡೀಯಾಗಿ ನೋಡಿದರೆ ಈ ಬರಹಗಳು ರಾಜಕೀಯ ಅರ್ಥಶಾಸ್ತ್ರದ ಕಟು ವಿಮರ್ಶೆಯಂತೆ ಕಾಣುತ್ತವೆ. ಹತಗುಂದಿಯ ನೇರ ನಿಷ್ಠುರ ಟೀಕೆಯ ಬರಹಗಳಲ್ಲಿ ಕರ್ನಾಟಕ ಭವಿಷ್ಯದ ಬಗೆಗಿನ ಕಾಳಜಿ ಪ್ರಧಾನವಾಗಿದೆ.

ಕನ್ನಡ ಸಾಹಿತ್ಯವು ತನ್ನ ಧೋರಣೆ, ವಸ್ತು, ಭಾಷೆ, ರೂಪ, ಛಂದಸ್ಸು ಈ ಮೊದಲಾದವುಗಳಲ್ಲಿ ಹೊಸ ಹೆಜ್ಜೆಯನ್ನಿಡುತ್ತಾ ನವೋದಯ, ನವ್ಯ, ದಲಿತ, ಬಂಡಾಯ ಹೀಗೆ ಹಲವಾರು ಘಟ್ಟಗಳನ್ನು ಕನ್ನಡ ಸಾಹಿತ್ಯದಲ್ಲಿ ನೋಡುತ್ತೇವೆ.

ಹೀಗೆ ಹೊಸಗನ್ನಡದ ಸಾಹಿತ್ಯದಲ್ಲಿ ಒಂದಾದ ಅಂಕಣ ಸಾಹಿತ್ಯ ಕೂಡಾ ಇತ್ತೀಚಿನ ವ್ಯಾಪ್ತಿಯಲ್ಲಿ ನಾವು ಕಾಣುತ್ತೇವೆ. ಅದರಲ್ಲಿ ರಾಜಶೇಖರ ಹತಗುಂದಿಯವರ ಅಂಕಣ ಸಾಹಿತ್ಯವನ್ನು ಇಂದಿನ ಜನತೆಗೆ ಮಾರ್ಗದರ್ಶನದಂತಾಗಿದೆ ಎಂದು ಹೇಳಬಹುದು.

**೧.೩. ಅಧ್ಯಯನದ ವಿಧಾನ :**

ರಾಜಶೇಖರ ಹತಗುಂದಿಯವರ ಅಂಕಣ ಸಾಹಿತ್ಯವನ್ನು ನಾನು ಸಂಶೋಧನೆಗೆ ಅಯ್ಕೆ ಮಾಡಿಕೊಂಡಿದ್ದೇನೆ. ಇವರು ಈಗ ಅಗ್ನಿ ವಾರ ಪತ್ರಿಕೆಯ ಸಂಪಾದಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅಂಕಣ ಒಂದು ಸಾಹಿತ್ಯಿಕ ಪ್ರಕಾರವಾಗಿದ್ದು ವರ್ತಮಾನದ ಆಗು ಹೋಗುಗಳನ್ನು ಪತ್ರಿಕೆಗಳಲ್ಲಿ ರಾಜಕೀಯ ವಿಷಯಗಳು, ಸಮಾಜದ ದುಷ್ಕರ್ಮಗಳು, ಭ್ರಷ್ಟಾಚಾರ ಹೀಗೆ ಮುಂತಾದ ವಿಷಯಗಳನ್ನು ಅಂಕಣದಲ್ಲಿ ನೇರ, ನಿಷ್ಠುರವಾಗಿ ಅಂಕಣಗಳಲ್ಲಿ ಬರೆಯುತ್ತಾರೆ.

ರಾಜಶೇಖರ ಹತಗುಂದಿಯವರ ಅಂಕಣವನ್ನು ನಾನು 'ಬಯಲು ಹುಡಿ' ಮತ್ತು 'ಎಡಹೊತ್ತಿನ ಪಯಣ' ಎಂಬ ಕೃತಿಗಳಲ್ಲಿ ಇದುವರೆಗಿನ ಅಂಕಣಗಳನ್ನು ಪ್ರಕಟಿಸಿದ್ದನ್ನು ಅಧ್ಯಯನದ

ಮೂಲ ಸಾಮಗ್ರಿಯನ್ನಾಗಿ ಮಾಡಿಕೊಂಡು ವಿಶ್ಲೇಷಣಾವಿಧಾನದ ಮೂಲಕ ಅನೇಕ ಗ್ರಂತಾಲಯಗಳಿಗೆ ಭೇಟಿ ಕೊಡುವುದರ ಮೂಲಕ ಅಂಕಣಕಾರರ ಅಂಕಣಗಳು. ಹೀಗೆ ಇತಿಹಾಸ ಹಲವಾರು ಆಕರಗಳ ಸಂಗ್ರಹಣೆ ಮೂಲಕ ವಿಶ್ಲೇಷಣೆ ಮಾಡಿದ್ದೇನೆ. ಇದರ ಜೊತೆಗೆ ಹತಗುಂದಿಯವರ ಬಗ್ಗೆ ಮಾಹಿತಿ ಸಂಗ್ರಹಗೋಸ್ಕರ ಅನೇಕ ಅಂಕಣಕಾರರನ್ನು, ವಿದ್ವಾಂಸರನ್ನು, ತಜ್ಞರನ್ನು ಸಂದರ್ಶನ ಮಾಡುವುದರ ಮೂಲಕ ಕ್ಷೇತ್ರ ಕಾರ್ಯವನ್ನು ಕೈಗೊಂಡಿದ್ದೇನೆ.

ಈ ರೀತಿಯಾಗಿ ವಿಷಯ ವಿಶ್ಲೇಷಣೆ ಹಾಗೂ ಕ್ಷೇತ್ರ ಕಾರ್ಯ ಕೈಗೊಳ್ಳುವ ಮೂಲಕ ಈ ಅಧ್ಯಯನ ವಿಧಾನ ಅಳವಡಿಸಿಕೊಂಡಿದ್ದೇನೆ.

**೧.೪ ಅಧ್ಯಯನದ ಸ್ವರೂಪ :**

ಸಾಹಿತ್ಯದ ಪ್ರಕಾರಗಳಲ್ಲಿ 'ಅಂಕಣ ಸಾಹಿತ್ಯ'ವು ಕೂಡಾ ಒಂದು ಸಾಹತ್ಯವಾಗಿದೆ. ಸರಕಾರದಲ್ಲಿ ನ್ಯಾಯಾಂಗ, ಕಾರ್ಯಾಂಗ, ಶಾಸಕಾಂಗ ಈ ಮೂರು ಅಂಗಗಳ ಜೊತೆಗೆ ಇದೊಂದು ನಾಲ್ಕನೇ ಅಂಗವಾಗಿ ಕೆಲಸ ಮಾಡುತ್ತಿದೆ. ಅನೇಕ ಅಂಕಣಕಾರರನ್ನು ನಾವುಇದುವರೆಗೂ ನೋಡಿದ್ದೇವೆ. ಅವರಲ್ಲಿ ರಾಜಶೇಖರ ಹತಗುಂದಿಯವರ ಅಂಕಣ ಸಾಹಿತ್ಯವನ್ನು ನಾನು ಅಧ್ಯಯನಕ್ಕೆ ಒಳಪಡಿಸಿಕೊಂಡಿದ್ದೇನೆ. ಅವುಗಳು ಈಕೆಳಗಿನಂತಿವೆ.

**ಅದ್ಯಾಯ–೧ :**

ಅಧ್ಯಯನದ ಉದ್ದೇಶ ವ್ಯಾಪ್ತಿ ಮತ್ತು ಸ್ವರೂಪ ಇದರಲ್ಲಿ ರಾಜಶೇಖರ ಹತಗುಂದಿಯವರ ಅಂಕಣ ಸಾಹಿತ್ಯವ ವಿಷಯವನ್ನು ಒಳಗೊಂಡಿದೆ.

**ಅದ್ಯಾಯ–೨ :**

ರಾಜಶೇಖರ ಹತಗುಂದಿಯವರ ಜೀವನದ ಸಂಕ್ಷಿಪ್ತಪರಿಚಯ ಇದರಲ್ಲಿ ಹತಗುಂದಿಯವರ ಬಾಲ್ಯ, ಶಿಕ್ಷಣ, ಅವರ ವೃತ್ತಿ ಸಾಹಿತ್ಯ ಮತ್ತು ಶೈಕ್ಷಣಿಕ ಚಟುವಟಿಕೆಗಳನ್ನೊಳಗೊಂಡಿದೆ.

**ಅಧ್ಯಾಯ–೩ :**

ಕನ್ನಡ ಅಂಕಣ ಸಾಹಿತ್ಯ ಪರಂಪರೆ – ಬೆಳವಣಿಗೆ ಈ ಅಂಕಣ ಸಾಹಿತ್ಯದಲ್ಲಿ ಮೊದಲು ಅಂಕಣ ಸಾಹಿತ್ಯದ ಲಕ್ಷಣಗಳು, ಅಂಕಣ ಸಾಹಿತ್ಯದ ಪ್ರಕಾರಗಳು, ಅಂಕಣ ಸಾಹಿತ್ಯದ ಬೆಳವಣಿಗೆ ಕೊನೆಯದಾಗಿ ಉಪಸಂಹಾರ. ಈ ಎಲ್ಲ ವಿಷಯಗಳನ್ನು ಅವಲೋಕಿಸಲಾಗಿದೆ.

**ಅಧ್ಯಾಯ –೪ :**

ರಾಜಶೇಖರ ಹತಗುಂದಿಯವರ ಅಂಕಣ ಬರಹಗಳು ಅದರಲ್ಲಿ ಪ್ರಮುಖವಾದವುಗಳು ಈ ಕೆಳಗಿನಂತಿವೆ.

ಅ) ಪ್ರಚಲಿತ ರಾಜಕೀಯ ವಿದ್ಯಮಾನಗಳು.

ಬ) ಸಾಹಿತ್ಯ ಮತ್ತು ಕಲೆ

ಕ) ಸಾಮಾಜಿಕ ವಿಚಾರಗಳು.

ಡ) ಸಾಂಸ್ಕೃತಿಕ ಅಂಶಗಳು.

ಇ) ಭಾಷೆ ಮತ್ತು ಶೈಲಿ ಇತ್ಯಾದಿ.

ಇವೆಲ್ಲವುಗಳನ್ನು ಕುರಿತು ಪ್ರಾದೇಶಿಕ ಧ್ವನಿ ಎತ್ತಿದ್ದಾರೆ. ಮರೆಯಾಗುತ್ತಿರುವ ರಾಜಕೀಯ ಮೌಲ್ಯಗಳು ಹೆಚ್ಚಾಗಿರುವ ಭ್ರಷ್ಟಾಚಾರ ನಿಸಂಕೋಚವಾಗಿ ಧೈರ್ಯದಿಂದ ಬರೆದಿದ ಅಂಕಣಗಳನ್ನು ಈ ಅಧ್ಯಯನಕ್ಕೆ ಒಳಪಡಿಸಿಕೊಂಡಿದ್ದೇನೆ.

**ಅಧ್ಯಾಯ–೫ :**

ಆಧುನಿಕ ಸಾಹಿತ್ಯಕ್ಕೆ ರಾಜಶೇಖರ ಹತಗುಂದಿಯವರ ಕೊಡುಗೆ ಕುರಿತು ಈ ಅಧ್ಯಯದಲ್ಲಿ ವಿವರಿಸಲಾಗಿದೆ.

**ಅದ್ಯಾಯ–೬ :**

ಕೊನೆಯ ಅಧ್ಯಾಯವಾದ ಆರನೇ ಅಧ್ಯಯನವಾದ ಸಮಾರೋಪದಲ್ಲಿ ರಾಜಶೇಖರ ಹತಗುಂದಿಯವರ ಅಂಕಣ ಬರಹಗಳು ಸಮಾಜಕ್ಕೆ, ದೇಶಕ್ಕೆ ಎಷ್ಟರ ಮಟ್ಟಿಗೆ ಉಪಯುಕ್ತವಾಗಿದೆ ಎಂಬುದನ್ನು ತಿಳಿಯಬಹುದಾಗಿದೆ.

**ಅನುಬಂಧ :**

ಅನುಬಂಧದಲ್ಲಿ ರಾಜಶೇಖರ ಹತಗುಂದಿಯವರ ಜೀವನ ಘಟನಾವಳಿಗಳ ಸಂಕ್ಷಿಪ್ತ ಪಟ್ಟಿಯನ್ನು ನೀಡಲಾಗಿದೆ. ಕೃತಿಗಳು, ಬಹುಮಾನ, ಪ್ರಶಸ್ತಿಗಳ ಪಟ್ಟಿ, ಭಾವಚಿತ್ರಗಳು ಹಾಗೂ ಗ್ರಂಥಋಣ.

# ಅಧ್ಯಾಯ-2

# ರಾಜಶೇಖರ ಹತಗುಂದಿಯವರ ಜೀವನದ ಸಂಕ್ಷಿಪ್ತ ಪರಿಚಯ

2.1 ಬಾಲ್ಯ

2.2 ಶಿಕ್ಷಣ

2.3 ವಿವಾಹ

2.4 ವೃತ್ತಿ ಜೀವನ ಪ್ರಾರಂಭ

2.5 ಸಾಹಿತ್ಯ ಮತ್ತು ಶೈಕ್ಷಣಿಕ ಚಟುವಟಿಕೆ

2.6 ಹಲವು ವಿದ್ವಾಂಸರೊಂದಿಗೆ ಹತಗುಂದಿಯವರನ್ನು ಕುರಿತು ಸಂದರ್ಶನ

# ಅಧ್ಯಾಯ – ೨

## ರಾಜಶೇಖರ ಹತಗುಂದಿಯವರ ಜೀವನದ ಸಂಕ್ಷಿಪ್ತ ಪರಿಚಯ

### ೨.೧ ಬಾಲ್ಯ :

ರಾಜಶೇಖರ ಹತಗುಂದಿಯವರು ೨೬.೧೧.೧೯೬೬ ರಂದು ಗುಲಬರ್ಗಾ ತಾಲ್ಲೂಕಿನ ಹತಗುಂದಿ ಎಂಬ ಗ್ರಾಮದಲ್ಲಿ ಜನಿಸಿದರು. ಇವರ ತಂದೆ ಚಿದಂಬರರಾವ ತಾಯಿ ಶ್ರೀಮತಿ ಕಸ್ತೂರಿಬಾಯಿಯವರಾಗಿದ್ದು ಅವರಿಗೆ ರಾಜಶೇಖರ ಹಾಗೂ ವಿಜಯಕುಮಾರ ಎನ್ನುವ ಇಬ್ಬರು ಮಕ್ಕಳಿದ್ದಾರೆ. ಅದರಲ್ಲಿ ರಾಜಶೇಖರ ಅವರು ಹಿರಿಯ ಮಗನಾಗಿದ್ದರು. ಎರಡನೆಯ ಮಗನೆಂದರೆ ವಿಜಯಕುಮಾರ.

ಚಿಕ್ಕವರಾಗಿದ್ದಾಗ ಇವರಿಗೆ ಬಡತನ ಕಾಡುತ್ತಿತ್ತು. ಹೀಗಾಗಿ ಇವರು ಕಷ್ಟದಲ್ಲಿಯೇ ತಮ್ಮ ಜೀವನ ಕಳೆದರೆಂದು ಹೇಳಬಹುದು. ಇವರಿಗೆ ಕಿತ್ತು ತಿನ್ನುವ ಬಡತನವಿದ್ದ ಕಾರಣ ದಾಯಾದಿಗಳು ಇವರನ್ನು ತುಂಬಾ ಕೀಳು ಭಾವನೆಯಿಂದ ಕಾಣುತ್ತಿದ್ದರು. ಆದ್ದರಿಂದ ಅವರು ಇದ್ದ ಬಿದ್ದ ಸ್ವಲ್ಪ ಆಸ್ತಿಯನ್ನು ಮಾರಿಕೊಂಡು ದಾಯದಿಗಳನ್ನು ತೊರೆದು ಚಿತ್ತಾಪೂರ ತಾಲ್ಲೂಕಿನ ಭಂಕೂರಿಗೆ ಬಂದು ನೆಲೆಸಿದರು. ತಂದೆ ಯಾವುದೇ ಕೆಲಸಕ್ಕೆ ಸೇರದೇ ಇದ್ದಾಗ, ತಾಯಿ ಕೆಲಸ ಮಾಡಿ ಕಷ್ಟಪಟ್ಟು ಮಕ್ಕಳನ್ನು ಸಾಕಿ ದೊಡ್ಡವರನ್ನಾಗಿ ಮಾಡಿದರು.

ಹತಗುಂದಿಯವರು ಬಾಲ್ಯದಲ್ಲಿಯೇ ಹಠವಾದಿಯಾಗಿದ್ದರೆಂದು ಹೇಳಬಹುದು. ಏಕೆಂದರೆ ಅವರು ಹಿಡಿದ ಕೆಲಸವನ್ನು ಪೂರ್ತಿ ಮಾಡುವವರೆಗೂ ಬಿಡುತ್ತಿರಲಿಲ್ಲ. ಶಾಲೆಯಲ್ಲಿ ಶಿಕ್ಷಕರು ಹೇಳಿದ ಪಾಠವನ್ನು ಹಿಂದೆ ಕುಳಿತು ಆಲಿಸಿ ಅದನ್ನು ಸರಿಯಾಗಿ ಓದಿ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಗಳಿಸುತ್ತಿದ್ದರು. ಬಡತನವಿದ್ದರೂ ಅವರಿಗೆ ವಿದ್ಯಾಬ್ಯಾಸದಲ್ಲಿ ತುಂಬಾ ಆಸಕ್ತಿ ಇತ್ತು.

### ೨.೨ ಶಿಕ್ಷಣ :

ರಾಜಶೇಖರ ಹತಗುಂದಿಯವರು ಹುಟ್ಟೂರಾದ ಹತಗುಂದಿಯಲ್ಲಿನ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಒಂದನೇ ತರಗತಿಯಿಂದ ನಾಲ್ಕನೇ ತರಗತಿಯವರೆಗೆ ಓದಿದ್ದರು.

ಐದನೆ ತರಗತಿಯಿಂದ ಒಂಬತ್ತನೇ ತರಗತಿಯವರೆಗೆ ಗುಲಬರ್ಗಾ ತಾಲ್ಲೂಕಿನ ಸಾವಳಗಿಯ ಸರಕಾರಿ ಶಾಲೆಯಲ್ಲಿ ಓದಿದರು. ಮುಂದೆ ೧೦ನೇ ತರಗತಿಗಳನ್ನು ಚಿತ್ತಾಪೂರ ತಾಲೂಕಿನ ಭಂಕೂರಿನಲ್ಲಿ ಓದಿದರು. ಮುಂದೆ ವಿಜ್ಞಾನ ವಿಷಯವನ್ನು ತೆಗೆದುಕೊಂಡು ಶಹಾಬಾದ್‌ನ ಎಸ್.ಎಸ್.ಮರಗೋಳ ಕಾಲೇಜಿನಲ್ಲಿ ಪಿ.ಯು.ಸಿ. ಎರಡು ವರ್ಷ ಮುಗಿಸಿ ನಂತರ ಡಿಪ್ಲೋಮಾ ಇನ್ ಸಿವಿಲ್ ಇಂಜಿನಿಯರಿಂಗ್‌ನ್ನು ಬಳ್ಳಾರಿಯ ಸರಕಾರಿಪಾಲಿಟೆಕ್ನಿಕ್ ಕಾಲೇಜಿನಲ್ಲಿ ಮಾಡಿದರು.

ರಾಜಶೇಖರ ಅವರಿಗೆ ಮೊದಲಿನಿಂದಲೂ ಕನ್ನಡ ಸಾಹಿತ್ಯದ ಬಗ್ಗೆ ತುಂಬಾ ಅಸಕ್ತಿಯಿತ್ತು ಹೀಗಾಗಿ ವಿದ್ಯಾರ್ಥಿ ದೆಸೆಯಲ್ಲಿಯೇ ಅವರು ಹಲವಾರು ಕಥೆ ಕಾದಂಬರಿಗಳನ್ನು ಓದಿ ಅನೇಕ ವಿದ್ವಾಂಸರ ಕೂಡ ಅವರು ಚರ್ಚೆಯನ್ನು ಮಾಡುತ್ತಿದ್ದರು.

**೨.೨ ಸಂಸಾರಿಕ ಜೀವನ :**

ರಾಜಶೇಖರ ಅವರು ಶಹಾಬಾದಿನಲ್ಲಿ ಪಿ.ಯು.ಸಿ. ಓದುತ್ತಿದ್ದಾಗ ಗಂಗಮ್ಮನವರ ಪರಿಚಯವಾಗಿ ಅದು ಮುಂದೆ ಪ್ರೀತಿಗೆ ತಿರುಗಿತು. ನಂತರ ಗಂಗಮ್ಮನವರನ್ನು ಬಾಳ ಸಂಗಾತಿಯಾಗಿ ಮಾಡಿಕೊಂಡು ೧೯೯೧ ರಲ್ಲಿ ತಮ್ಮ ವೈವಾಹಿಕ ಜೀವನಕ್ಕೆ ಕಾಲಿಟ್ಟರು. ತುಂಬಾ ಸೌಮ್ಯ ಸ್ವಭಾವದ ಸರಳ ಸಜ್ಜನಿಕೆಯ ಪ್ರತಿರೂಪವಾದ ಗಂಗಮ್ಮನವರು ರಾಜಶೇಖರ ಅವರು ಬದುಕಿನ ಪ್ರತಿ ಹಂತದಲ್ಲಿಯೂ ರಾಜಶೇಖರ ಅವರಿಗೆ ನೇರವಾಗಿ ಅವರ ಸಾಹಿತ್ಯಿಕ ಚಟುವಟಿಕೆಗಳಿಗೆ ತುಂಬಾ ಪ್ರೋತ್ಸಾಹ ನೀಡುತ್ತಾ ಬಂದರು. ಕವಿ ಬೇಂದ್ರೆಯವರು ಹೇಳುವಂತೆ ಅವರದು ಸಮರಸ ಜೀವನ.

'ನಾನು ಬಡವಿ' ಆತ ಬಡವ
ಒಲವೇ ನಮ್ಮ ಬದುಕು ಎನ್ನುವಂತೆ'

ಬಡತನದ ಬವಣೆಯಲ್ಲಿ ಸುಖ ಸಾಂಸಾರ ನಡೆಸಿದ ಮಹಾ ಸಾಧ್ವಿತನ ಅವರದು. ರಾಜಶೇಖರ ಹತಗುಂದಿಯವರಿಗೆ ಇಬ್ಬರು ಮಕ್ಕಳು ಅವರಲ್ಲಿ ಹಿರಿಯವರು ರಶ್ಮಿ ಮತ್ತು ಕಿರಿಯವನು ರಕ್ಷಿತ ಹೀಗೆ ಚಿಕ್ಕ ಸುಖಿ ಸಂಸಾರ ಅವರದ್ದಾಗಿದೆ. ಪತ್ನಿ ಗಂಗಮ್ಮ ಅವರು ಈಗ ಸರಕಾರಿ ಪ್ರಾಥಮಿಕ ಶಾಲಾ ಶಿಕ್ಷಕಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

## ೨.೪ ವೃತ್ತಿ ಜೀವನ ಪ್ರಾರಂಭ :

ರಾಜಶೇಖರ ಹತಗುಂದಿಯವರು ಬಳ್ಳಾರಿಯಲ್ಲಿ ತಮ್ಮ 'ಡಿಪ್ಲೋಮಾ' ಶಿಕ್ಷಣ ಮುಗಿದ ನಂತರ ಶಹಾಪುರದ ಕೆ.ವಿ.ಶೆಟ್ಟಿ ಕಂಪನಿಗೆ ಕೆಲಸಕ್ಕೆಂದು ಸೇರಿದರು ಅಲ್ಲಿನ ದುರಾಡಳಿತ ಹಾಗೂ ಅವ್ಯವಹಾರ ಇವರಿಗೆ ಸರಿಬರದಕಾರಣ ಅವರು ಅದನ್ನು ತೊರೆದು ಭಂಕೂರಿಗೆ ಮರಳಿ ಬಂದರು.

ಊರಲ್ಲಿಯೇ ಬಂದು ಕೆಲವು ತಿಂಗಳುಗಳು ಉಳಿದು ಅಲ್ಲಲ್ಲಿ ಕೆಲಸಕ್ಕಾಗಿ ಪರದಾಡಿದರು. ಕೊನೆಗೆ ಗೋವಾಕ್ಕೆ ಹೋದರು. ಅಲ್ಲಿಯೂ ಕೂಡಾ ಯಾವ ಒಳ್ಳೆ ಕೆಲಸ ಸಿಗದ ಕಾರಣ ಪುನಃ ಊರಿಗೆ ಮರಳಿ ಬಂದರು. ಇದರ ನಂತರ ಮೈಸೂರಿನ ಮುಕ್ತ ವಿಶ್ವವಿದ್ಯಾಲಯದಿಂದ ಕನ್ನಡ ಎಂ.ಎ. ಪದವಿಪಡೆದುಕೊಂಡರು, ೧೯೮೭ ರಲ್ಲಿ 'ಕಲಬುರ್ಗಿವಾಣಿ' ಎಂ.ಎ., ಕನ್ನಡ ದೈನಿಕ ಪತ್ರಿಕೆಯಲ್ಲಿ ಉಪ ಸಂಪಾದಕರಾಗಿ ಕೆಲಸಕ್ಕೆ ಸೇರಿಕೊಂಡರು ಜೇವರ್ಗಿಯ ಕೇದಾರಲಿಂಗಯ್ಯನವರು ಕಲಬುರ್ಗಿವಾಣಿಯ ಸಂಪಾದಕರಾಗಿದ್ದರು. ಇವರು ಹತಗುಂದಿಯವರ ಕೆಲಸ, ಶಿಸ್ತು ಕಂಡು ಮುಂದೆ ಇಡೀ ಪತ್ರಿಕೆ ನಡೆಸುವ ಸಂಪೂರ್ಣ ಜವಾಬ್ದಾರಿಯನ್ನು ಅವರಿಗೆ ವಹಿಸಿಕೊಟ್ಟರು. ಈ ಉದ್ಯೋಗದಿಂದ ಅವರಜೀವನಕ್ಕೆ ಅಷ್ಟು ಅಸರೆಯಾಯಿತು. ಅಲ್ಲಿ ಸುಮಾರು ೧೯೯೮ ರ ವರೆಗೆ ಸೇವೆ ಸಲ್ಲಿಸಿದರು.

ನಂತರ ೧೯೯೮ ರಲ್ಲಿ 'ಜನವಾಹಿನಿ' ದೈನಿಕ ಪತ್ರಿಕೆಯಲ್ಲಿ ಕೆಲವೇ ತಿಂಗಳುಗಳಲ್ಲಿ ಈ ಪತ್ರಿಕೆ ನಿಂತು ಹೋಯಿತು. ಇದರಿಂದ ರಾಜಶೇಖರ ಅವರು ಮತ್ತೆ ಉದ್ಯೋಗಕ್ಕೆ ಅಲ್ಲಲ್ಲಿ ಅರ್ಜಿ ಹಾಕುವುದಕ್ಕೆ ತೊಡಗಿದರು.

ಮುಂದೆ ೧೯೯೯ ರಲ್ಲಿ ಬೆಂಗಳೂರಿನ ಶ್ರೀಧರ ಅವರ 'ಅಗ್ನಿ' ವಾರಪತ್ರಿಕೆಗೆ ಸೇರಿ ಅಲ್ಲಿ ಅವರು ಹೈದ್ರಾಬಾದ ಕರ್ನಾಟಕ ವರದಿಗಾರರೆಂದು ಕೆಲಸಕ್ಕೆ ತೊಡಗಿದರು. ಆಗ 'ಅಗ್ನಿ' ಸಂಪಾದಕರಾದ ಶ್ರೀಧರವರು ಹತಗುಂದಿಯವರನ್ನು ಪ್ರೋತ್ಸಾಹ, ಉತ್ತೇಜನದಿಂದ ಅವರ ಬರಹಕ್ಕೆ ಮತ್ತಷ್ಟು ಬೆಳವಣಿಗೆ ಹಂತವನ್ನು ಒದಗಿಸಿಕೊಟ್ಟರು. ಅಗ್ನಿ ಶ್ರೀದರ ಅವರು ತೋರಿದ ಪ್ರೀತಿ, ವಿಶ್ವಾಸ ಇಲ್ಲಿನ ಸಂಪಾದಕೀಯ ಬರಹಗಳಿಗೆ ಶಕ್ತಿ ನೀಡಿವೆ.

ಪ್ರತಿವಾರ ಒಂದೊಂದು ಪ್ರಚಲಿತ ವಿಷಯವನ್ನು ಇಟ್ಟುಕೊಂಡು ಅಂಕಣವನ್ನು ಬರೆಯುತ್ತಿದ್ದರು. ಅವುಗಳನ್ನೇ ಅವರು ಬಯಲು ಹುಡಿ ಮತ್ತು ಎಡ ಹೊತ್ತಿನ ಪಯಣ ಎಂಬ ಎರಡು ಸಂಕಲನಗಳು ಪ್ರಕಟಗೊಂಡಿವೆ. ಈ ಅಂಕಣ ಬರಹಗಳಿಗೆಹತಗುಂದಿಯವರ ಮೇಲೆ ಪಿ. ಲಂಕೇಶ, ಗಾಂಧಿ ಲೋಹಿಯಾ ಅಂಬೇಡ್ಕರ್ ಮುಂತಾದವರ ಪ್ರಭಾವವಿದೆ. ಆದ್ದರಿಂದಲೇ ಹತಗುಂದಿಯವರು ಪ್ರತಿ ಹಂತದಲ್ಲೂ ವಿರೋಧ ಪಕ್ಷಗಳ ಒಬ್ಬ ಕ್ರೀಯಾಶೀಲ ಸದಸ್ಯರಂತೆ ಆಡಳಿತ ಪಕ್ಷದ ಮೇಲೆ ಪ್ರಹಾರ ಮಾಡುತ್ತಾರೆ.

ಅಭಿವೃದ್ಧಿ ಹೆಸರಿನಲ್ಲಿ ನಡೆಯುವ ಆರ್ಥಿಕ ದರೋಡೆಯ ಬಗ್ಗೆ ಹತಗುಂದಿಯವರಿಗೆ ತೀವ್ರ ಅಸಹನೆಯಿದೆ. ಬಸವಣ್ಣನವರ ಕ್ರಾಂತಿಯ ಪ್ರಜ್ಞೆ ಹತಗುಂದಿಯ ಬರಹದಲ್ಲಿ ಜಾತ್ಯಾತೀತ ಭಾವವಾಗಿ ಹರಡಿಕೊಂಡಿದೆ. ಅದಲ್ಲದೇ ಸ್ವಯಂ ಸಮುದಾಯಗಳು ಎಚ್ಚೆತ್ತಾಗ ಇಂತಹ ಬರಹಗಳು ಪೂರಕವಾಗಿ ನಿಲ್ಲುತ್ತವೆ. ಈ ಮಟ್ಟಿಗೆ ಹತಗುಂದಿಯ 'ಬಯಲು ಹುಡಿಯ' ನಿರೂಪಣೆಗಳು ಜನಪರ ದನಿಗಳು.

ಚನ್ನಣ್ಣ ವಾಲಿಕಾರವರ ಸಂದರ್ಶನ ಕೈಗೊಂಡಾಗ ರಾಜಶೇಖರ ಹತಗುಂದಿಯವರನ್ನು ಕುರಿತು ಹೇಳಿದ್ದು 'ಸರಳ ಹಾಗೂ ಜನಪರ ವ್ಯಕ್ತಿಯಾಗಿದ್ದಾರೆ. ರಾಜಕೀಯ ವಿಷಯಗಳನ್ನು ಕುರಿತು ಹೆಚ್ಚಾಗಿ ಬರೆಯುತ್ತಾರೆ. ಅಂಕಣಗಳು ತುಂಬಾ ಪ್ರಭಾವಶಾಲಿಯಾಗಿವೆ ಎಂದರು. ಹತಗುಂದಿ ಬರೆದ ಕಥೆಗಳು, ಕಥಾ ಸಂಕಲನವಾದ 'ಕಾಳ ಬೆಳದಿಂಗಳ ಸಿರಿ' ನನ್ನ ಮನಸ್ಸು ಸೆಳೆದಿದೆ ಎಂದರು.

**೨.೪ ರಾಜಶೇಖರ ಹತಗುಂದಿಯವರ ಸಾಹಿತ್ಯ ಮತ್ತು ಶೈಕ್ಷಣಿಕ ಚಟುವಟಿಕೆಗಳು :**

ರಾಜಶೇಖರ ಹತಗುಂದಿಯವರು ಹಲವಾರು ಸಾಹಿತ್ಯಿಕ ವಿಚಾರಗೋಷ್ಠಿಯಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸುತ್ತಿದ್ದರು.

ಹತಗುಂದಿಯವರ ಒಡನಾಡಿ ಇನ್ನೋರ್ವ ಪತ್ರಕರ್ತರಾದ ಬಿ.ವ್ಹಿ. ಚಕ್ರವತಿಯವರು – 'ರಾಜಶೇಖರ ಹತಗುಂದಿಯವರ ಊರಾದ ಚಿತ್ತಾಪೂರ ತಾಲ್ಲೂಕಿನ ಭಂಕೂರಿನಲ್ಲಿ ದಲಿತ ಚಳುವಳಿಯಲ್ಲಿ ಕೆಲಸ ಮಾಡುತ್ತಿದ್ದರಂತೆ.ಸುರೇಶ ಮೆಂಗನ್‌ರವರಿಂದ ರಾಜಶೇಖರ

ಹತಗುಂದಿಯವರೊಂದಿಗೆ ಸ್ನೇಹವಾಯಿತು ಹತಗುಂದಿ ಮತ್ತು ತಮ್ಮ ನಡುವಿನ ಸುದೀರ್ಘ ಸ್ನೇಹವನ್ನು ಕುರಿತು ಸಂದರ್ಶನದಲ್ಲಿ ವ್ಯಕ್ತಪಡಿಸಿದ್ದಾರೆ.

ಹತಗುಂದಿಯವರು ಸಾಮಾಜಿಕ ಚಿಂತನೆ ಮಾಡುತ್ತಿದ್ದರು. ಜೊತೆಗೆ ಜಾತೀಯತೆಯ ಯಾವುದೇ ಕೆಟ್ಟ ಭಾವನೆ ಇರಲಿಲ್ಲ. ಸ್ನೇಹಪರ ಜೀವಿಯಾಗಿದ್ದರು. ಬಡತನದಿಂದ ಬೆಳೆದು ಬಂದು ಇಷ್ಟೊಂದು ಉನ್ನತ ಸ್ಥಾನಕ್ಕೇರಿದರೂ ಅವರಲ್ಲಿ ಅಹಂ ಎಂಬ ಭಾವನೆ ನನಗೆ ಎಂದೂ ಕಂಡಿಲ್ಲ ಎನ್ನುತ್ತಾರೆ.

ಅವರು ಸವಭಾವತಃ ಹಠವಾದಿ ಹಾಗೂ ಛಲಗಾರ. ಜನರನ್ನು ಹುರಿದುಂಬಿಸತಕ್ಕಂಥ ಮನಸ್ಸಿಗೆ ಮುಟ್ಟುವ ಹಾಗೆ ಅಂಕಣಗಳನ್ನು ನೇರ, ನಿಷ್ಠುರತೆಯಿಂದ ಯಾವ ಮುಲಾಜಿಲ್ಲದೆ ಇವರು ಬರೆಯುತ್ತಾರೆ ಎಂದು ಹೇಳುವರು. ಕೊನೆಯದಾಗಿ ಸಾಹಿತ್ಯ ಪ್ರೇಮಿ ಕಳಕಳಿ ವ್ಯಕ್ತಿ ಸ್ನೇಹ ಪ್ರೇಮಿ ನನ್ನ ಗೆಳೆಯ ಎಂದರು.

ಕರ್ನಾಟಕ ಸಾಹಿತ್ಯ ಅಕಾಡೆಮಿಯ ವತಿಯಿಂದ ಯುವ ಬರಹಗಾರರಿಗೆ ಕಥಾ ಕಾವ್ಯ ಕಮ್ಮಟಗಳನ್ನು ಆಯೋಜಿಸಿದರು. ರಾಜಶೇಖರ ಹತಗುಂದಿಯವರು ಕಥೆಗಳನ್ನು ಬರೆಯುವುದರಲ್ಲಿ ಇವರು ಹೆಸರು ಗಳಿಸಿದ್ದರು. ಅಷ್ಟೇ ಅಲ್ಲದೆ ಕಥೆಗಳಿಗೆ ಬಹುಮಾನ ಪ್ರಶಸ್ತಿ ಕೂಡ ದೊರಕಿವೆ. ಪ್ರಜಾವಾಣಿ ಕಥಾ ಸ್ಪರ್ಧೆಯಲ್ಲಿ ಬಹುಮಾನ ದೊರಕಿದೆ ಹಾಗೂ ದತ್ತಿ ಕಥಾ ಸ್ಪರ್ಧೆಯಲ್ಲಿ ಚಿನ್ನದ ಪದಕ ಪಡೆದುಕೊಂಡಿದ್ದಾರೆ. ಕೋಮು ಸೌಹಾರ್ದ ಚಟುವಟಿಕೆಯಲ್ಲಿ ಬಾಗಿಯಾಗಿರುವರು. ಹಲವಾರು ವಿಚಾರ ಸಂಕೀರ್ಣಗಳನ್ನು ಆಯೋಜಿಸಿ ಆಶಯ ಭಾಷಣ ಮಾಡಿದ್ದಾರೆ.

ಸಾಹಿತ್ಯ ಚಟುವಟಿಕೆಯಲ್ಲಿ ಬಹಳಷ್ಟು ಜನರನ್ನು ತೊಡಗಿಸಿಕೊಳ್ಳಬೇಕು ಎಂದು ಕೆ. ನೀಲಾರವರು ಹೇಳಿದರೆ, ರಾಜಶೇಖರ ಹತಗುಂದಿಯವರ ಸಾಮಾಜಿಕ ನಿಲವು ಅವರ ದೃಷ್ಟಿಕೋನ ತುಂಬಾ ಮಹತ್ವದ್ದಾಗಿದೆ ಎಂದರು.

ಜಾತ್ಯತೀತ ನಿಲವು ಹಾಗೂ ಜಾತೀಯ ಹೆಸರಿನ ದೌರ್ಜನ್ಯತೆಯನ್ನು ತಡೆಗಟ್ಟುವುದು ಇವರ ನೆಲವು ಸ್ವಾಭಿಮಾನದಿಂದ ಬದುಕಬೇಕೆಂಬ ಆಶಯ ಇವರದಾಗಿದೆ. ಸಮಾಜದಲ್ಲಾಗತಕ್ಕಂಥ ಧರ್ಮದ ಹೆಸರಿನ ದಂಗೆ ಒಪ್ಪುವದಿಲ್ಲ.

ಹತಗುಂದಿಯವರ ವ್ಯಕ್ತಿತ್ವವನ್ನು ಕುರಿತು ಕೂಡಾ ಕೆಲವು ಮಾತುಗಳನ್ನು ಹೇಳಿದರು. 'ಮೃದು ಸ್ವಭಾವದವರು ಸ್ನೇಹ ಬಯಸುವ ಜೀವಿಯಾಗಿದ್ದಾರೆ.ಸಮಯ ಸಾಧಕ ಧಿಕ್ಕರಿಸಿರುತ್ತಾರೆ. ಸಾಹಿತ್ಯದ ರಾಜಕಾರಣ ಅವಥು ಇಲ್ಲಿಯವರೆಗೂ ಮಾಡಿಲ್ಲ, ಅಕ್ಷರ ದಂಧೆ ಕೂಡಾ ಮಾಡದ ವ್ಯಕ್ತಿತ್ವ ಇವರದಾಗಿದೆ. ಅಂದರೆ ಇವರು ದುಡ್ಡಿಗಾಗಿ ಬರೆಯುವದಿಲ್ಲ. ದುಡ್ಡಿಗೆಂದು ಆಸೆ ಪಟ್ಟವರಲ್ಲ, ಸಮಯಕ್ಕೆ ಅನುಸಾರವಾಗಿ ಬರೆಯುತ್ತಾರೆ. ಅವರು ಎಂಥ ದೊಡ್ಡ ವ್ಯಕ್ತಿ ಇದ್ದರೂಕೂಡ ತಪ್ಪು ಮಾಡಿದರೆ ಅವರನ್ನು ಬಿಡದೇ ಅವರ ವಿರುದ್ಧ ಧ್ವನಿ ಎತ್ತುವ ಹಾಗೂ ಜನರ ಮುಂದೆ ಇಡುವ ಸಾಹಸ ಇವರದಾಗಿದೆ ಎಂದರು.

ಇಂದಿನ ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ಪ್ರತಿ ಶುಕ್ರವಾರ 'ನೆಲದ ನಂಟು' ಎಂಬ ಶೀರ್ಷಿಕೆಯಡಿಯಲ್ಲಿ ಅಂಕಣ ಬರೆಯಲು ನನಗೆ ಹತಗುಂದಿಯವರ ಸ್ಫೂರ್ತಿ ಸಹಕಾರ ಸಿಕ್ಕಿದೆ ಎಂದು ಮಹಿಳಾ ಹೋರಾಟಗಾರ್ತಿ ಕೆ.ನೀಲಾ ಅವರು ಹೇಳುತ್ತಾರೆ.

ಶೈಕ್ಷಣಿಕ ಸುಧಾರಣೆಯ ಕುರಿತು ಹಲವಾರು ಲೇಖನಗಳನ್ನು ಬರೆದು ವಿಚಾರ ಸಂಕೀರ್ಣಗಳನ್ನು ಆಯೋಜಿಸಿದ್ದಾರೆ. ಹತಗುಂದಿಯವರು ಹಲವಾರು ವಿಷಯಗಳನ್ನು ಕುರಿತು ಲೇಖನ ಬರೆಯುತ್ತಿದ್ದರು. ಅದರಲ್ಲಿ ಶೈಕ್ಷಣಿಕಕ್ಕೆ ಸಂಬಂಧಿಸಿದಂತೆ ಹಲವಾರು ಲೇಖನಗಳನ್ನು ಬರೆದಿದ್ದಾರೆ. ಶಾಂತರಸರಂತಹ ಹಿರಿಯ ಬರಹಗಾರರು ಕೂಡಾ ಇವರ ಬರವಣಿಗೆ ಮೆಚ್ಚಿದ್ದರು. ಅಷ್ಟೇ ಅಲ್ಲದೆ ಅಂಕಣಕಾರರಾದ ವೀರಣ್ಣ ದಂಡೆಯವರು ತಮ್ಮ ಜಾನಪದದ ಕೃತಿಯೊಂದರ ಬಿಡುಗಡೆ ಹೊತ್ತಿನಲ್ಲಿ ಕೃತಿ ಕುರಿತು ಹತಗುಂದಿಯವರಿಂದ ಮಾತನಾಡಿಸಿದರು. ಅಂದರೆ ಯಾವುದೇ ಕೃತಿಗೆ ಹತ್ತಿರದಿಂದ ಹತಗುಂದಿಯವರು ಪ್ರತಿಕ್ರಿಯಿಸುವ ಶಕ್ತಿ ಹೊಂದಿದ್ದರೆಂದು ಹೇಳಬಹುದು.

ಸೃಜನಶೀಲ ಬರಹವಲ್ಲದೆ ಸಾಂಸ್ಕೃತಿಕ ಸಾಮಾಜಿಕ ಸಂಗತಿಗಳ ಕುರಿತು ಅನೇಕ ಲೇಖನಗಳನ್ನು ಬರೆದು ಪ್ರಕಟಿಸಿರುವರು. ಹತಗುಂದಿಯವರು ರಾಜಕಾರಣಿಗಳನ್ನು, ಕೋಮುವಾದಿಗಳನ್ನು, ಚಳುವಳಿಗಾರರನ್ನು, ವರದಕ್ಷಿಣೆ ಪೀಡಿತರನ್ನು ಅಧ್ಯಾಪಕರನ್ನು ಅಧಿಕಾರಿಗಳನ್ನು ಹೀಗೆ ಹಲವಾರು ಜನರನ್ನು ಕುರಿತು ನಿಷ್ಠುರವಾಗಿ ಬರೆಯುತ್ತಿದ್ದರು. ಹಲವಾರು ಶೈಕ್ಷಣಿಕ ಸಮಿತಿಯಲ್ಲಿ ಕ್ರೀಯಾಶೀಲವಾಗಿ ಕಾರ್ಯ ನಿರ್ವಹಿಸಿದ್ದಾರೆ.

ವಿಕ್ರಮ ವೀಸಾಜೀಯವರು ಹೇಳಿರುವಂತೆ ರಾಜಶೇಖರ ಹತಗುಂದಿಯವರಿಗೆ ತೀರಾ ಆತ್ಮೀಯ ಹಾಗೂ ಸಮೀಪವಿರುವ ವ್ಯಕ್ತಿ ವಿಕ್ರಮ ವಿಸಾಜಿ ಆಗಿದ್ದಾರೆ. ಇವರು ಕೇಂದ್ರ ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ೧೯೯೭ ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಇವರ ಭೇಟಿಯಾಗಿ ಹತಗುಂದಿಯವರ ಕನ್ನಡ ಸಾಹಿತ್ಯದಲ್ಲಿ ಆಸಕ್ತಿ ಓದು ಸತತ ಪ್ರಯತ್ನ ಸೂಕ್ಷ್ಮವಾದ ಗ್ರಹಣ ಶಕ್ತಿ ಇವೆಲ್ಲವುಗಳನ್ನು ಅವರಲ್ಲಿ ಕಂಡರು. ಹತಗುಂದಿಯವರ ಅಂಕಣಗಳಲ್ಲಿ ವಿಸಾಜಿಯವರಿಗೆ 'ತಾರೆ ಜಮೀನ ಪರ್' ಎಂಬುದು ತುಂಬಾ ಇಷ್ಟವಾಗಿದೆ. ಅಂದರೆ ಮಕ್ಕಳೆ ಭೂಮಿಯ ಮೇಲಿನ ನಕ್ಷತ್ರಗಳಿದ್ದ ಹಾಗೆ. ಇದು ಚಲನಚಿತ್ರ ರೂಪದಲ್ಲಿ ಸರಳ,ಸುಂದರ, ಹಾಗೂ ಕಲಾತ್ಮಕ ಮೌಲ್ಯಗಳನ್ನೊಳಗೊಂಡಿವೆ ಎಂದರು. 'ಬುದ್ದನ ನಾಡಿನಲ್ಲಿ' ಪ್ರವಸ ಕಥನ ಕೂಡಾ ತುಂಬಾ ಚೆನ್ನಾಗಿ ಬರೆದಿದ್ದಾರೆ ಎಂದು ಹೇಳಿದರು. ವಿಕ್ರಮ ವಿಸಾಜಿಯವರು 'ಬಯಲು ಹುಡಿ' ಕೃತಿಗೆ ಹಿನ್ನುಡಿ ಕೂಡಾ ಬರೆದಿದ್ದಾರೆ.

ಹತಗುಂದಿಯವರ ವ್ಯಕ್ತಿತ್ವ ನೋಡಿದಾಗ ಅವರು ಬಡತನ ಕುಟುಂಬದಿಂದ ಬಂದಿರುವದರಿಂದ ಯಾರೇ ಕಷ್ಟದಲ್ಲಿದ್ದಾಗ ಮುನ್ನುಗ್ಗಿ ಸಹಾಯ ಮಾಡುವುದು ಬಡವರು ಹಾಗೂ ಅಸಹಾಯಕರ ಬಗ್ಗೆ ಕಾಳಜಿ ಮತ್ತು ಪ್ರೀತಿಯನ್ನು ಹೊಂದಿದವರಾಗಿದ್ದಾರೆಂದು ವಿಸಾಜಿಯವರು ಸಂದರ್ಶನದಲ್ಲಿ ತಿಳಿಸಿರುತ್ತಾರೆ.

ರಾಜಶೇಖರ ಹತಗುಂದಿಯವರನ್ನು ಕುರಿತು ಬಸವರಾಜ ಸಬರದರವರನ್ನು ಸಂದರ್ಶಿಸಿದಾಗ ಹತಗುಂದಿಯವರನ್ನು ಕುರಿತು ಬಸವರಾಜ ಸಬರದರವರು ಈ ರೀತಿ ನುಡಿಯುತ್ತಾರೆ – "ಗುಲಬರ್ಗಾ ವಿಶ್ವವಿದ್ಯಾಲಯದಿಂದ ಸಮುದಾಯ ಸಂಘಟನೆಯಲ್ಲಿ ನಮ್ಮಿಬ್ಬರ ಮೊದಲ ಭೇಟಿಯಾಯಿತೆಂದರು. ಸತತವಾಗಿ ಓದುವ ಹವ್ಯಾಸ ಇರುವ ಕಾರಣ ಡಿಪ್ಲೋಮಾ ಮುಗಿಸಿದರೂ ಅವರುಮುಕ್ತ ವಿಶ್ವವಿದ್ಯಾಲಯದಿಂದ ಕನ್ನಡ ಎಂ.ಎ. ಪದವಿಯನ್ನು ಪಡೆದುಕೊಂಡರು.

ಹತಗುಂದಿಯವರು ಪ್ರಗತಿಪರ ವ್ಯಕ್ತಿಯಾಗಿದ್ದು ಯಾವುದೇ ವಿಷಯವನ್ನು ಕೊಟ್ಟರೂ ಹುಮ್ಮಸ್ಸಿನಿಂದ ಮಾಡುತ್ತಿದ್ದರು. ಹೈದ್ರಾಬಾದ ಕರ್ನಾಟಕದ ಸ್ಥಿತಿಗತಿ ಕುರಿತು ಅಗ್ನಿ ವಾರ ಪತ್ರಿಕೆಯಲ್ಲಿ ಬರೆಯುತ್ತಿದ್ದಾರೆ. ಇವರ ಬರವಣಿಗೆ ವೈಚಾರಿಕ ಮತ್ತು ಜನಪರವಾಗಿರುತ್ತದೆ.

ಇವರು 'ನೀರಾವರಿ', '೩೭೧ನೇ ಕಲಂ ಆರ್ಟಿಕಲ್', ಸಾಮಾಜಿಕ ಸಮಸ್ಯೆ ಇವೆಲ್ಲವುಗಳನ್ನು ಕುರಿತು ತಮ್ಮ ಅಂಕಣದಲ್ಲಿ ಬರೆಯುತ್ತಾರೆ ಎಂದು ಸಬರದರು ಹೇಳಿದರು.

ರಾಜಶೇಖರವರು ನೇರ,ನಿಷ್ಠುರ ಎದುರಿಗೆ ಹೇಳುವ ಧೈರ್ಯ ಪ್ರಾಮಾಣಿಕತೆ ಇದೆ ಹಾಗೂ ಮೌನವಾಗಿ ಇರುತ್ತಾರೆ.

ಬೆಂಗಳೂರು ದೂರದರ್ಶನದ ಹಲವಾರು ಚರ್ಚೆಗಳಲ್ಲಿ ಭಾಗವಹಿಸಿದ್ದಾರೆ. ಕೆಲವೊಂದು ರಾಜಕೀಯ ವ್ಯಕ್ತಿಗಳ ಜೊತೆಗೆ ಇನ್ನೂ ಹಲವಾರು ಗಣ್ಯ ವ್ಯಕ್ತಿಗಳ ಜೊತೆಗೆ ಚರ್ಚೆ ಮಾಡುವ ಅವಕಾಶ ಒದಗಿ ಬಂದಿದೆ.

ಹಂಪಿ ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿರುವ ಸಂಕಲನಕ್ಕೆ ಸಾಹಿತ್ಯಿಕ ಅನುಭವಗಳನ್ನು ಬರೆದಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಆಯೋಜಿಸಿದ್ದ ವಿಚಾರ ಸಂಕೀರ್ಣದಲ್ಲಿ ಖ್ಯಾತ ಲೇಖಕ ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರ ಸಾಹಿತ್ಯ ಕುರಿತು ವಿಶೇಷ ಪ್ರಬಂಧ ಮಂಡಿಸಿದ್ದಾರೆ. ಅನೇಕ ಸಾಹಿತ್ಯ ಸಮ್ಮೇಳನಗಳನ್ನು ಹತಗುಂದಿಯವರು ಕೂಡಾ ಭಾಗಿಯಾಗುತ್ತಿದ್ದರು. ಅಂಥಲೆಲ್ಲದೊಡ್ಡ ದೊಡ್ಡ ಸಾಹಿತಿಗಳ ಭೇಟಿಯಾಗುತ್ತಿತ್ತು. ಅಂಥದರಲ್ಲಿ ಪೂರ್ಣಚಂದ್ರ ತೇಜಸ್ವಿಯವರ ಸಾಹಿತ್ಯದ ಬಗ್ಗೆ ಇವರು ಪ್ರಬಂಧ ಕೂಡಾ ಮಂಡಿಸಿದ್ದಾರೆ.

ಕನ್ನಡ ಹಂಪಿ ವಿಶ್ವವಿದ್ಯಾಲಯ ಆಯೋಜಿಸಿದ್ದ ಸಂಸ್ಕೃತಿ ಮತ್ತು ಸಾಮಾಜಿಕ ಹೊಣೆಗಾರಿಕೆ ಕುರಿತು ವಿಚಾರ ಸಂಕಿರಣದಲ್ಲಿ ಪ್ರಬಂಧ ಮಂಡಿಸಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯು ಧಾರವಾಡದಲ್ಲಿ ನಾಲ್ಕು ದಿನಗಳ ಕಾಲ ಆಯೋಜಿಸಿದ್ದ ಭಾಷಾ ವಿಜ್ಞಾನ ಕಮ್ಮಟದಲ್ಲಿ ಭಾಗವಹಿಸಿದ್ದರು. ಕೋಲಾರ ಜಿಲ್ಲೆ ಕೈವಾರದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಯೋಜಿಸಿದ್ದ ಕಾವ್ಯ-ಕಮ್ಮಟವನ್ನು ಸಂಘಟಿಸಿದ್ದಾರೆ. ಈ ರೀತಿ ರಾಜಶೇಖರ ಹತಗುಂದಿಯವರು ಹಲವಾರು ಸಾಹಿತ್ಯಿಕ ಹಾಗೂ ಶೈಕ್ಷಣಿಕ ಕಾರ್ಯಗಳನ್ನು ಮಾಡಿದ್ದಾರೆ.

# ಅಧ್ಯಾಯ–3

# ಕನ್ನಡದ ಅಂಕಣ ಸಾಹಿತ್ಯ ಪರಂಪರೆ

**3.1 ಪೀಠಿಕೆ**

**3.2 ಕನ್ನಡ ಅಂಕಣ ಸಾಹಿತ್ಯದ ಲಕ್ಷಣಗಳು**

**3.3 ಅಂಕಣ ಸಾಹಿತ್ಯ ಪ್ರಕಾರಗಳು**

**3.4 ಕನ್ನಡ ಅಂಕಣ ಸಾಹಿತ್ಯದ ಬೆಳವಣಿಗೆ**

**3.5 ಉಪಸಂಹಾರ.**

# ಅಧ್ಯಾಯ – ೩

## ಕನ್ನಡ ಅಂಕಣ ಸಾಹಿತ್ಯ ಪರಂಪರೆ

**೩.೧ ಪೀಠಿಕೆ:**

"ಪತ್ರಿಕೆಯಲ್ಲಿ ನಿರ್ದಿಷ್ಟ ಶಿರೋನಾಮೆಯ ಅಡಿಯಲ್ಲಿ ನಿಯತವಾಗಿ ಕಾಣಿಸಿಕೊಳ್ಳುವ ಕಿರು ಲೇಖನವೇ ಅಂಕಣಬರಹವಾಗಿ ಕಾಣಿಸಿಕೊಳ್ಳುವ ಕಿರು ಲೇಖನವೇ ಅಂಕಣಬರಹ ವಾಗಿದೆ"[೧] ಅಂಕಣವೆಂಬುವುದು ಪತ್ರಿಕೆಯ ಒಂದು ಭಾಗ ಹಾ.ಮಾ.ನಾಯಕರು ಹೇಳುವಂತೆ "ಇಂಗ್ಲೀಷನಲ್ಲಿ ಯಾವುದನ್ನು "ಕಾಲವು ರೈಟಿಂಗ್" ಎಂದು ಹೇಳುತ್ತೇವೆ ಅದರ ಕನ್ನಡ ರೂಪವೇ "ಅಂಕಣ"[೨] ಬರಹವಾಗಿದೆ. ಕನ್ನಡ ಅಂಕಣ ಸಾಹಿತ್ಯಕ್ಕೆ ಸಿದ್ಧವನಹಳ್ಳಿ ಕೃಷ್ಣಶರ್ಮರು ಪಿತಾಮಹರೆಂದು ಗುರುತಿಸಲಾಗುತ್ತದೆ. ಸಂಗತಿ, ಘಟನೆ ಅಥವಾ ವಿಷಯವನ್ನು ಒಂದು ಸುವ್ಯವಸ್ಥಿತವಾಗಿ ಜೋಡಿಸಿ ಬರೆಯುವ ರೀತಿಯನ್ನು ಹೇಳಿಕೊಟ್ಟರು. ಮುಂದೆ ಡಾ.ಹಾ.ಮಾ.ನಾಯಕಟರು ೧೯೬೭ ರಿಂದ ೨೦೦೦ರ ವರೆಗೆ ಅಂಕಣ ಸಾಹಿತ್ಯದಲ್ಲಿ ಕೃಷಿ ಮಾಡಿ ಅದಕ್ಕೊಂದು ಸಾಹಿಯಕ ರೂಪ ಒದಗಿಸಿಕೊಟ್ಟರು. ಅಂಕಣ ಬರಹವನ್ನು ಪತ್ರಿಕಾ ಸಾಹಿತ್ಯವೆಂದು ಕರೆಯುತ್ತಾರೆ. ಡಾ.ಹಾ.ಮಾ.ನಾಯಕರ ಲೇಖನದಿಂದ ಹೊರಬಂದ ಅಂಕಣ ಬರಹಗಳಿಗೆ ಚಿರಂತನತೆ, ಮೌಲಿಕತೆ ಮತ್ತು ಸಮಕಾಲಿನ ಸಂದರ್ಭದ ವಿದ್ಯಮಾನಗಳನ್ನು ಸೆರೆಹಿಡಿವ ಗುಣವಿದೆ ಎನ್ನಬಹುದು.

ಇನ್ನೊಬ್ಬ ಅಂಕಣಕಾರನೆಂದರೆ ಪಿ.ಲಂಕೇಶ ಇವರ ಪ್ರತಿ ಬರಹಕ್ಕೂ ಕಾವ್ಯದ ಸ್ಪರ್ಶವಿರುತ್ತದೆ. ಲಂಕೇಶರು ಟೀಕೆ – ಟಿಪ್ಪಣಿಗಳ ಶೀರ್ಷಿಕೆಯಡಿಯಲ್ಲಿ ತಮ್ಮ ಪತ್ರಿಕೆಯಲ್ಲಿ ಪ್ರತಿವಾರವು ಟೀಕೆ–ಟಿಪಪ್ಣಿಗಳನ್ನು ಬರೆಯುತ್ತ ಓದುಗರ ವಿಶ್ವಾಸವನ್ನು ಗಳಿಸಿಕೊಳ್ಳುವಲ್ಲಿ ಯಶಸ್ವಿಯಾದರು. ಲಂಕೇಶವರು ಅಂಕಣ ಬರಹಗಳ ಮೂಲಕ ಆ ಕಾಲದ ಕರ್ನಾಟಕದ ಸಮಕಾಲೀಕನ ಸಾಂಸ್ಕೃತಿಕ, ರಾಜಕೀಯ, ಸಾಮಾಜಿಕ ಚರಿತ್ರೆಯನ್ನು ಬರೆದಿದ್ದಾರೆ. ಪ್ರಪಂಚದ ಪ್ರಸಿದ್ಧ ಅಂಕಣಕಾರರ ಅಂಕಣ ಲೇಖನಗಳನ್ನು ಗಮನಸುತ್ತಾರೆ. "ಅಂಕಣಕಾರರು ಪ್ರಪಪಂಚದ ಶಾಸಕಾರಗಿಯೇ ಕೆಲಸ ಮಾಡುತ್ತಿದ್ದಾರೆ"[೩] ಎಂಬ ಶ್ರೀನಿವಾಸ ಉಡುಪರ ವಿವರಣೆಯಲ್ಲಿ ಅಂಕಣ ಸಾಹಿತ್ಯದ

---

೧. ಡಾ. ಹಾ.ಮಾ ನಾಯಕರು ಚಿನ್ನದ ಗರಿ ಪು.೧
೨. ಡಾ. ಶ್ರೀನಿವಾಸ ಹಾವನೂರವರ–ಹೊಸಗನ್ನಡ ಅರುಣೋದಯ ಪು.೩೪.
೩. ಡಾ. ಹಾ.ಮಾ.ನಾಯಕ ಬೆನ್ನದ ಗುರಿ ಪು.೩

ಪ್ರಾಮುಖ್ಯತೆಯನ್ನು ಕಂಡುಕೊಳ್ಳಬಹುದಾಗಿದೆ. ಭಾರತದ ಸ್ವಾತಂತ್ರ್ಯದ ಪ್ರಾಮುಖ್ಯತೆಯನ್ನು ಕಂಡುಕೊಳ್ಳ ಬಹುದಾಗಿದೆ. ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹತ್ವದ ಪಾತ್ರ ವಹಿಸುವವು. ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವ ಕಡೆಗೆ ಗಮನ ಕೊಟ್ಟಿದೆ.

ಅಂಕಣಕಾರನು ಯಾವುದೇ ಒಂದು ವಿಷಯವನ್ನು ಹೇಳಲು ಹೊರಟರೆ ಅದು ಜನರ ಮನಸ್ಸನ್ನು ಮುಟ್ಟುವಂತೆ ಹೇಳಬೇಕು. ಕಾಲಘಟ್ಟಗಳಲ್ಲಿ ಪ್ರಚಲಿತ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವಂತೆ ಸಮಕಾಲೀನ ಅಗತ್ಯತೆಗಳನ್ನು ಅನುಸರಿಸಿ ಬರೆದ ಕನ್ನಡದ ಅಂಕಣಕಾರರ ಸಾಹಿತ್ಯ ಕೃಷಿ ಇಂದು ಅಧ್ಯಯನಕ್ಕೆ ಯೋಗ್ಯವಾಗಿದೆ.

ಒಟ್ಟಿನಲ್ಲಿ "ಕನ್ನಡದಲ್ಲಿ ಅಂಕಣ ಬರಹಗಳು ಪ್ರಬಂಧದ ಒಡಲಿನಿಂದ ಹುಟ್ಟಿದ ಬಣ್ಣ ಬಣ್ಣದ ತುರಾಯಿಗಳಾಗಿವೆ." ಗರಿಗರಿಯಾದ ಶುಭ್ರ ಉಡುಗೆಯುಟ್ಟು ಪ್ರಯಾಣಕ್ಕೆ ಹೊರಟ ಮನಸ್ಸಿನ ಉಲ್ಲಾಸ ಹೇಗೊ ಹಾಗೆ ಪತ್ರಿಕೆಯಲ್ಲಿ ಕಾಲಮಿನ ಮಿತಿಯಲ್ಲಿ ಚಿಕ್ಕ ವೇಷ ತೊಟ್ಟು ಪತ್ರಿಕೆಗಳ ಮುಖಾಂತರ ಓದುಗರ ಮನೆ ಬಾಗಿಲಿಗೆ ಬಂದು ತಲುಪುವ ಅಂತಹ ಬರಹಗಳು ಇಂದಿನವರ ಅಗತ್ಯಕ್ಕೆ ತಕ್ಕಂತೆ"[೪] ಎಂದು ಹೇಳಬಹುದು.

**೩.೨ ಅಂಕಣ ಸಾಹಿತ್ಯದ ಲಕ್ಷಣಗಳು**

೧. ಸಾಹಿತ್ಯದಿಂದ ಲೇಪಿನ ನೇರ ಹಾಗು ಸರಳವಾಗಿರಬೇಕು.

೨. ವಾರದಿಂದ ವಾರಕ್ಕೆ ಬರೆಯುತ್ತಿರಬೇಕು.

೩. ನಯೆತಕಾಲಿಕವಾಗಿರಬೇಕು.

೪. ಒಂದು ಪುಟದ ಮಿತಿಯೊಳಗೆ ಬರೆಯಬೇಕು.

೫. ಸ್ಪಷ್ಟವಾಗಿರಬೇಕು.

೬. ಸತ್ಯವನ್ನು ಒಳಗೊಂಡಿರಬೇಕು.

೭. ಕಾವ್ಯಗುಣದಿಂದ ಕೂಡಿರಬೇಕು.

---

೪. ಲಂಕೇಶರ ಟೀಕೆ–ಟಿಪ್ಪಣಿ (ಮೀಸಲಾತಿ ವಿರೋಧಿ ಹುಡುಗರೊಂದಿಗೆ) ಪು.೧೫೦.

೮. ಕನಿಷ್ಠ ಪದಗಳ ಬಳಕೆಯಿಂದ ಗರಿಷ್ಠ ಅರ್ಥದ ಅಭಿವ್ಯಕ್ತಿ

೯. ಇದು ತಂತಿ ಸಂದೇಶದ ಶೈಲಿಯುಳ್ಳದಾಗಿರಬೇಕು.

೧೦. ಪ್ರಚಲಿತವಾಗಿರಬೇಕು.

"ಈ ವಾರದಿಂದ ಬರುವ ಅಂಕಣ ವ್ಯಕ್ತಿಯ ಮಿಂಚಿನ ಶೈಲಿ ಒಂದು ಪುಟದ ಮಿತಿಯೊಳಗೆ ಒಬ್ಬ ವ್ಯಕ್ತಿಯ ಬದುಕು ಸಾಧನೆಯನ್ನು ವಾರದ ವ್ಯಕ್ತಿ ಅಂಕಣದಲ್ಲಿ ಪರಿಚಯಿಸುತ್ತಿದ್ದೆ ಎಂದು ಎಚ್ಚೆಸ್ಕೆ ಹೇಳಿದ್ದಾರೆ"[೫]

ಮಾತು ಮೀತ ನೇರ ಹಾಗೂ ಸರಳ ಕೆಲವೇ ರೇಖೆಗಳಲ್ಲಿ ಚಿತ್ರವನ್ನು ಬಿಡಿಸುವ ವಿಧಾನ ಬಳಸಬೇಕು. ವ್ಯಕ್ತಿಯ ವಿಕಾಸವನ್ನು ಕುರಿತಂತೆ ಅವನ ಬದುಕಿನ ತಿರುವು, ಅವನ ಕನಸು, ಕನವರಿಗೆ ಸಾಧನೆ ವೈಫಲ್ಯ ಅವರು ಆರಿಸಿಕೊಂಡರು. ಎಚ್ಚೆಸ್ಕೆ ಬರಹಗಳ ಹಿಂಗದೆ ಅವರ ಋಷಿಸ ದೃಷ್ಟಿ ಅಡಗಿದೆ. ಬಿ.ಎಂ.ಶ್ರೀ–ಅವರ ಪವಿತ್ರ ನೆನಪಿಗೆ ಅವರು ತಮ್ಮ ಮೊದಲ ಸಂಪುಟವನ್ನು ಅರ್ಪಿಸಿಸಿದ್ದಾರೆ ಇದರ ಹಿಂದೆ. ಶ್ರೀಅವರ ಆಶೀರ್ವಾದ ಮಾಡಿದ ಕೆಲಸವನ್ನು ಮನಗಾಣಬಹುದಾಗಿದೆ. "ಕುವೆಂಪು ಅವರ ಕನ್ನಡಕ್ಕಾಗಿ ಕೈ ಎತ್ತು, ನನ್ನ ಕೈ ಕಲ್ಪವೃಕ್ಷವಾಗುತ್ತದೆ."[೬] ಎಂಬ ನುಡಿಯಲ್ಲಿ ಅಪಾರ ವಿಶ್ವಾಸವಿಟ್ಟು ಕೆಲಸ ಮಾಡಿದ ಎಚ್ಚೆಸ್ಕೆ ಅವರು ಕುವೆಂಪು ಅವರ ಕುರಿತ ಅಂಕಣ ಬರಹದಲ್ಲಿ ಬರೆಇದ್ದಾರೆ.

ಮೂರು ಅಕ್ಷರಗಳ ಮೋಡಿಗಾರ ಕನ್ನಡ ಸಾರಸ್ವತ ಲೋಕದಲ್ಲಿ ಮನೆ ಮಾತಾಗಿದ್ದ ಹೆಸರು. ಕನ್ನಡ ಗಡಿಯನ್ನು ದಾಟಿ ರಾಷ್ಟ್ರವ್ಯಾಪಿಯಾದ, ಅಂತರಾಷ್ಟ್ರೀಯ ಖ್ಯಾತಿಯನ್ನು ಕೂಡಾಗಳಿಸಿದ ಕವಿ. ಕುವೆಂಪು ಜೀವನದ ವಿವರಗಳನ್ನು ಗೆರೆ ಕೊರೆದಂತೆ ಸೆರೆ ಹಿಡಿವ ಎಚ್ಚೆಸ್ಕೆ ಅವರ ಕಾವ್ಯಯಾತ್ರೆಯ ದಾರ್ಶನಿಕತೆಯ ಕುರಿತು ಬರೆದಿದ್ದಾರೆ. ಅವರ ವೈಚಾರಿಕ ಹೋರಾಟದ ಮೂಲವನ್ನು ಕೆದಕಿದ್ದಾರೆ. ತಲತಲಾಂತರಗಳಿಂದ ಭಾರತ ದೇಶದಲ್ಲಿ ಬೆಳದು ಬಂದ ಪುರೋಹಿತ ಶಾಹಿಗೂ ಕುವೆಂಪುವಿಗೂ ಬದ್ಧವೈರ ಹೋರಾಟ ಪುರೋಹಿತ ಶಾಹಿಯ ವಿರುದ್ಧ ನಮ್ಮ ಧರ್ಮದಲ್ಲಿ ಸ್ವೀಕಾರ ಯೋಗ್ಯವಾದದ್ದು ಯಾವುದು. ತಿರಸ್ಕರಿಸಬೇಕಾದದ್ದು ಏನು ಎಂಬ

---

೫. ಎಚ್ಚೆಸ್ಕೆ – ಬೆಳಕು ಚೆಲ್ಲದ ಬದುಕು ಸುದಾ, ಅಂ. ಬರಹಗಳು ಪು.೫
೬. ಎಚ್ಚೆಸ್ಕೆ – ಬೆಳಕು ಚೆಲ್ಲಿದ ಬದುಕು ಕುವೆಂಪು ವ್ಯಕ್ತಿ ಚಿತ್ರಣ – ಅರಿಕೆ ಪು.೧

ವಿಮರ್ಶಾಜ್ಞಾನವನ್ನು ಕುವೆಂಪು ಬೋಧಿಸಿದ್ದರು. ಆತ್ಮಶ್ರೀಗಾಗಿ ನಿರಂಕುಶ ಮತಗಳಾಗಿ ಇದು ಕುವೆಂಪು ಅವರ ಸಂದೇಶವಾಗಿತ್ತು. ಎನ್ನುವ ಎಚ್ಚೆಸ್ಕೆ ಅಂಕಣದ ಮಿತಿಯಲ್ಲಿ ಕುವೆಂಪು ಅವರ ಬಗೆಗೆ ಹೇಳಬೇಕಾದುದೆಲ್ಲವನ್ನು ಘನವಾಗಿ ಹಿಡಿದಿಟ್ಟಿರುವುದು ಅವರ ಅಂಕಣ ಕಲಾಕೌಶಲ್ಯಕ್ಕೆ ಸಾಕ್ಷಿಯಾಗಿದೆ.

ಭಾರತದ ಬಡ ರೈತನ ಕುರಿತು ಎಚ್ಚೆಸ್ಕೆ ಹೀಗೆ ಚಿಂತಿಸಿದ್ದಾರೆ "ನನ್ನ ಗೌರವ ಮೆಚ್ಚುಗೆ ಗಳಿಸಿರುವಂಥ ವ್ಯಕ್ತಿ ಒಬ್ಬನೇ ಒಬ್ಬ. ಅವನು ಭಾರತದ ಬಡರೈತ"[೭] ಈ ಮಾತು ಹೇಳಿದ ವ್ಯಕ್ತಿ ಅಂತಿಂಥವನಲ್ಲ. ಸುಪ್ರಸಿದ್ಧ ಇಂಗ್ಲೀಷ ಕತೆಗಾರ, ಕಾದಂಬರಿಗಾರ ಸಾಮರ್ಸೆಟಮಾಮ್, ಭಾವೋದ್ರೇಕಗೊಂಡು ಉದ್ಗಾರ ವೆಳೆಯುವುದು ವಾಮನ ಮಾರ್ಗವಲ್ಲ. ಯುದ್ಧವೇ ಬರಲಿ, ಕ್ಷಾಮವೇ ಅಡಗಲಿ ಅವರ ನಡುವೆಯೂ ನೆಲವನ್ನುಕರೆಯುತ್ತಲೇ ಜೀವಿಸಲೆಳೆಸುತ್ತಾನೆ. ಅಲ್ಪ ಸಂಖ್ಯಾತರ ಕಲೆ ಸಂಸ್ಕೃತಿಗಳಿಗೂ ಆಸರೆಯೆಂದರೆ ಅವನೇ"[೮] ಯಾವ ಏರು-ಪೇರುಗಳಿಗೆ ಗಟ್ಟಿಯಾಗಿ ತನ್ನ ಕಾಯಕ ಹಿಡಿದು ನೀಜವಾದ ಕಾಯಕ ಜೀವಿ ಎನಿಸಿಕೊಂಡ ರೈತ ಸಮಾಜ ಗೌರವಕ್ಕೆ ಪಾತ್ರವಾಗದೇ ಇರುವುದು ಅಂಕಣಕಾರನ ಚಿಂತೆ. ಸಮಾಜದಲ್ಲಿ ಎಂದಿನಂತೆ ಅವನು ಏಣಿಯ ಕೆಳಗನ ಮೆಟ್ಟಿಲು. ಕು.ಶಿ. ಹರಿದಾಸಭಟ್ಟರು ಭಾರತದ ಎಲ್ಲ ರಂಗಗಳಲ್ಲಿನ ವ್ಯವಸ್ಥೆಯನ್ನು ವಿದೇಶಗಳ ವ್ಯವಸ್ಥೆಗಳಿಗೆ ಹೋಲಿಸಿ ಮರಗುವುದಾದರೂ ಇದ್ದ ವ್ಯವಸ್ಥೆಯನು ಸುಧಾರಿಸಲು ಹೇಗೆ ಸಾಧ್ಯವೆಂಬುದು ತಮ್ಮ ಅಂಕಣ ಬರಹದಲ್ಲಿ ಪ್ರಸ್ತಾಪಿಸಿದ್ದಾರೆ.

ನಿರಂಜನ, ಹಾ.ಮಾ. ನಾಯಕ, ಎಚ್ಚೆಸ್ಕೆ ಅವರ ಅಂಕಣ ಬರವಣಿಗೆ ಅವರಿಗೆ ಸಿದ್ಧಿಸಿದೆ. ಉದಯವಾಣಿ ಪತ್ರಿಕೆಯಲ್ಲಿ ೧೯೭೦ರಿಂದ ಅವರು ಬರೆಯಲು ಪ್ರಾರಂಭಿಸಿದ ಅಂಕಣ ಬರಹಗಳು ಈಗ ಸಂಪುಟಗಳಲಿ ಹೊರಬಂದಿವೆ.

ಮಂಗಳೂರಿನ ಸುತ್ತ ಮುತ್ತಲಿನ ಸಾಂಸ್ಕೃತಿಕ ಚಟುವಟಿಕೆಗಳಿಗೆ ವ್ಯಕ್ತಿಚಿತ್ರಣಗಳಿಗೆ, ನಾಡು-ನುಡಿ ಸಮಕಾಲಿನ ಸಮಸ್ಯೆಗಳಿಗೆ ಸ್ಪಂದಿಸುವ ಅಂಕಣ ಬರಹಗಳೂ ಮೂಡಿ ಬಂದಿವೆ.

ಕು.ಶಿ. ಹರಿದಾಸ ಭಟ್ಟರು ಹೇಳುತ್ತಾರೆ ಎಲ್ಲಿರುವೆ ತಂದೆ ಬಾರೊ, ಇಳಿದು ಬಾ ತಾಯಿ, ಇಲ್ಲಿ ಕಾಯಕವೇ ಕೈಲಾಸ, ಉದಯವಾಗಲಿ ಕನ್ನಡ ನಾಡು, ನಮ್ಮ ರಜಾಗುಣ,

---

೭. ಎಚ್ಚೆಸ್ಕೆ - ಮಾನ್ಯರು ಸಾಮಾನ್ಯರು ಪು.೮೮೫
೮. ಸುರೇಂದ್ರ ಕೆರಮಗಿ -ಕನ್ನಡದಲ್ಲಿ ಅಂಕಣ ಸಾಹಿತ್ಯ ಪು.೨೨

ಗಿಳಿಯು ಪಂಜರದೊಳಿಲ್ಲ, ದೇವರ ಶೋಧ, ಕಿಟೆಲ್ ಋಣ ಹೀಗೆ ಹರಿದಾಸಭಟ್ಟರ ಅಂಕಣ ಸಾಹಿತ್ಯದ ಚಿಂತನೆ ಮುಂದುವರೆದಿದೆ. ಲೋಕಾಭಿರಾಮದ ಎರಡು ಸಂಪುಟಗಳಲ್ಲಿ ಅಂಕಣಕಾರರು ನಾಡಿಗೆ ಒಳಿತಾದುದನ್ನ ಚಿಂತಿಸುತ್ತಿದ್ದಾರೆ. ಪೇಜಾವರ ಶ್ರೀಗಳ ಕುರಿತು ಕು.ಶಿಯವರು ಚಿಂತನೆ ಹೀಗಿದೆ. ಸಾವಿರಾರು ಜನ ಸೇರಿದ ಮಹಾಸಭೆಯಲ್ಲಿ ಅವರು ಸ್ವಯಂ ಸ್ಫೂರ್ತರಾಗಿ ಹರಿಜನೋದ್ಧಾರದ ಕಾರ್ಯಕ್ರಮಗಳಿಗೆ ತಮ್ಮ ಬದುಕು ಮೀಸಲು ಎಂದು ಸಾರಿ ನುಡಿದಿದ್ದಾರೆ. ನುಡಿದಂತೆ ನಡೆಯುವ ಆಚರಣೆವಾದಿಗಳು, ಕುಲ-ಜಾತಿಗಳೇ ಪ್ರಧಾನವಾದ ಅಂದು ಪೇಜಾವರ ಶ್ರೀಗಳ ಈ ನಡತೆ ಸುಧಾರಣಾಯುಕ್ತವಾದದ್ದು. ಇಂಥ ಸೂಕ್ಷ್ಮತೆಗಳನ್ನು ಅಂಕಣಗಳಲ್ಲಿ ಪ್ರಸ್ತಾಪಿಸಿದ್ದಾರೆ.

ಕು.ಶಿ. ಅವರ ಸಮಾಜ ಚಿಂತನೆಯಲಿ "ನಮ್ಮ ರಜಾಗುಣ" ಪ್ರಮುಖವಾಗಿದೆ. ಜಪಾನನಲ್ಲಿ, ಜರ್ಮನಿಯಲ್ಲಿ ಜನ ದೆವ್ವದಂತೆ ದುಡಿಯುತ್ತಾರೆಂದ ಎಂದಾಗ ಇಲ್ಲಿಯ ಜನ ಹೇಳುತ್ತಾರೆ ಅದು ಅವರವರ ಕರ್ಮ ನಾವೇನು ಮಾಡಲು ಸಾಧ್ಯ ಎನ್ನುವರು. ನಾಗರಪಂಚಮಿ, ನವರಾತ್ರಿ, ದೀಪಾವಳಿ, ಮಕರಸಂಕ್ರಾಂತಿ ಹೀಗೆ ದಿನ, ಋತು, ಅಸ್ತ ಕಾಲವೆಲ್ಲ ಪರ್ವಕಾಲವೆಂದು ಪೂಜೆ ಪುನಸ್ಕಾರ ಹೋಮ ಹವನಗಳಲ್ಲಿ ಪರಲೋಕದ ಚಿಂತೆಯಲ್ಲಿ ಕಳೆದರೆ ಅಧಿಕಾರದಲ್ಲಿದ್ದವರು ತೀರಿಕೊಂಡಾಗ, ಹುತಾತ್ಮರಾದವರು ಸ್ಮರಣಾರ್ಥ ರಜೆ ಕೊಡುತ್ತ ಹೋದರೆ ದೇಶ ಉದ್ಧಾರವಾಯಿತೆ? ಎಂದು ಕು.ಶಿ. ಪ್ರಶ್ನಿಸಿದ್ದಾರೆ."[೯] ಭಾರತೀಯರು ವಿದೇಶಿಯರ ಫ್ರಿಜ್, ಕ್ಯಾಮೆರಾ, ಟೇಪ ಇತ್ಯಾದಿ ಉಪಕರಣಗಳನ್ನು ತರಿಸಿಕೊಂಡು ರಜಾದಿಗನಗಳಲ್ಲಿ ಆರಾಮವಾಗಿಕಳೆದರೆ, ಪರದೇಶದವರು ಬಂದು ನಮ್ಮ ಗಡಿಗಳನ್ನು ಕಬಳಿಸಿಕೊಳ್ಳುತ್ತಾರೆ. ಅಶಾಂತ ಸ್ಥಾಪನೆಯಾಗುವುದು ಎಂದಿದ್ದಾರೆ. ಇದಕ್ಕಿಂತ ಹೆಚ್ಚಿನ ವ್ಯಂಗ ಯಾವುದಿದೆ?

"ಕು.ಶಿ. ಹರಿದಾಸ ಭಟ್ಟರ ಅಂಕಣದ ವಿಷಯಗಳು ವೈವಿಧ್ಯಮಯ, ಅರ್ಥಶಾಸತ್ರದ ಚಿಂತನೆ, ಆರ್ಥಿಕ ವಿಷಯಳು, ಸಭೆ ಸಮಾರಂಭಗಳ ವಿವರಣೆ, ಸಾಹಿತ್ಯ ವಿಮರ್ಶೆ ಇವೆಲ್ಲ ಕು.ಶಿ. ಅಂಕಣದ ಹರವುಗಳಾಗಿವೆ?"[೧೦] ಅಂಕಣ ಬರಹಗಳನ್ನು ಗಹನವಾಗಿ ಪರಿಗಣಿಸಿದವರಲ್ಲಿ ಪ್ರೊ. ಕೆ.ಡಿ. ಕುರ್ತಕೋಟಿಯವರು ಪ್ರಮುಖರಾಗಿದ್ದಾರೆ. ಪ್ರಜಾವಾಣಿ ಪತ್ರಿಕೆಯಲ್ಲಿ

---

೯. ಕು.ಶಿ.ಹರಿದಾಸ ಭಟ್ಟ-ಲೋಕಾಭಿರಾಮ ಸಂ.೧ (ನಮ್ಮ ರಜಾಗುಣ) ಪು.೮೦-೮೧.
೧೦. ಡಾ. ಸುರೇಂದ್ರ ಕೆರಮಗಿ ಕನ್ನಡದಲ್ಲಿ ಅಂಕಣ ಸಾಹಿತ್ಯ ಪು.೨೧-೨೨.

ಹಾ.ಮಾ.ನಾಯಕರ ಬರಹಗಳ ನಂತರ ಕೆ.ಡಿ. ಕುರ್ತಕೋಟಿಯವರು ಅಂಕಣ ಬರಹಗಳು ಪ್ರಾಮುಖ್ಯತೆ ಪಡೆದುಕೊಂಡಿವೆ. ಅವರ "ಉರಿಯ ನಾಲಿಗೆ" ಸಂಪ್ರತಿಯ ನಂತರ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ ಪಾತ್ರವಾಗಿದೆ.

ಕುರ್ತಕೋಟಿಯವರ ಅಂಕಣದಲ್ಲಿ ಸಾಹಿತ್ಯ ಸಂಸ್ಕೃತಿಯ ಕುರಿತಾದ ವಿಚಾರಗಳೇ ತುಂಬಿಕೊಂಡಿವೆ. ಪ್ರಜಾವಾಣಿಯ ಅಂಕಣ ಬರಹಗಳನ್ನು ಕುರ್ತಕೋಟಿಯವರು ಉರಿಯನಾಲಿಗೆ, ರಾಜಸ್ಪರ್ಶ, ಪಂಡಿತರ ತಪ್ಪು, ರಾಜಕೀಯ ಮತ್ತು ಧರ್ಮ ಶೀರ್ಷಿಕೆಗಳಡಿ ಸಂಗ್ರಹಿಸಿದ್ದಾರೆ".[೧೧]

ಕುರ್ತಕೋಟಿಯವರ 'ರಾಜ ಸ್ಪರ್ಷ'ದಲ್ಲಿ ಶಂಭಾ.ಜೋಶಿಯವರ ಬಗೆಗೆ ಬರೆದದ್ದು ಹೀಗಿದೆ. ೧೮೯೬ರಲ್ಲಿ ಹುಟ್ಟಿದ ಶಂಭಾರವರು ಬೇಂದ್ರೆಯವರ ವಯಸ್ಸಿನವರಾಗಿದ್ದರು. ಆದರೆ ಯಾವಾಗಲೂ ಸೂರ್ಯನನ್ನೆ ನಟ್ಟಿಸುತ್ತಾಕತ್ತಲೆಯಿಂದ ವಿಮುಖರಾದವರು. ಈ ಕಾರಣಕ್ಕೆ ಶಂಭಾ ಅವರನ್ನು ಬೌದ್ಧಿಕರು, ವಿಚಾರವಂತರು ಎಂದು ಗುರುತಿಸಲಾಗುವುದು ಪೂಜಾರರ ಶಿಷ್ಯನಾಗಿ ಕನ್ನಡವಷ್ಟೆ ಕಲಿತಿದ್ದರು ಸ್ವಂತ ಪರಿಶ್ರಮದಿಂದ ಇಂಗ್ಲೀಷ ಕಲಿತು ಪ್ರಾಯಿಡ್ ಮತ್ತು ಯಾಂಗ್‌ರ ಮನೋ ವಿಜ್ಞಾನವನ್ನು ಪ್ರಶ್ನೆ ಮಾಡುವ ಸಾಲುಗಳಲ್ಲಿ ಕುರ್ತಕೋಟಿ ಶಂಬಾ ಅವರ ಸಾಹಿತ್ಯದ ಮಹತ್ವವನ್ನು ಕಣ್ಣಿಗೆ ಕಟ್ಟುವಂತೆ ಬಣ್ಣಿಸುತ್ತಾರೆ.

ಪ್ರಜಾವಾಣಿಯ ಪತ್ರಿಕೆಯಲ್ಲಿ "ಚಹಾದ ಜೋಡಿ ಚೂಡಾದ್ವಾಂಗ" ಮತ್ತು ಕಲರವ ಶೀರ್ಷಿಕೆಗಳಿಂದ ಮುಂದುವರೆಸಿಕೊಂಡು ಬಂದ ಧಾರವಾಡದ ಪಟ್ಟಣಶೆಟ್ಟಿ ಹಾಗು ಕಲಬುರ್ಗಿಯ ವೀರಣ್ಣದಂಡೆಯವರ ಅಂಕಣ ಬರಹಳು ಪ್ರಾದೇಶಿಕ ಭಾಷಾ ಸೊಡಗಿನಂದ ಕೂಡಿವೆ. ಸಿದ್ಧಲಿಂಗ ಪಟ್ಟಣಶೆಟ್ಟಿ ಚಹಾದ ಜೋಡಿ, ವೀರಣ್ಣ ದಂಡೆಯವರ "ಕಲಬುರ್ಗಿ ಕಲರವ" ನಾಡಿನ ಮಹತ್ವದ ಸಾಂಸ್ಕೃತಿಕ ಬೆಳವಣಿಗೆಗೆ ಕಾರಣವಾಗುವ ಘಟನೆಗಳು ಮತ್ತು ವ್ಯಕ್ತಿಗಳನ್ನು ಕುರಿತು ಹೇಳುತ್ತವೆ.

ಶಹಾಪೂರದ ಲಿಂಗಣ್ಣ ಸತ್ಯಂಪೇಟೆಯವರು "ಅಗ್ನಿ ಅಂಕುರ" ಪತ್ರಿಕೆಯಲ್ಲಿ ಅಂಕನ ಬರಹಬಳಿಗೆ ಹೋಲುವ ಸಂಪಾದಕೀಯಗಳನ್ನು ನಿಯತವಾಗಿ ಬರೆದಿದ್ದಾರೆ." ವಿಶ್ವಕಲ್ಯಾಣ ವಾರ ಪತ್ರಿಕೆಯಲ್ಲಿ ಸಿಂದೆ ಲಿಂಗಣ್ಣನವರು ಸೆರೆ ಹಿಡಿದ ೧೧೮ ಅಂಕಣ ಬರಹಗಳು "ನೂರು

---

೧೧. ಕೀರ್ತಿನಾಥ ಕುರ್ತಕೋಟಿ – ರಾಜಸ್ಪರ್ಶ ಪು. ೨೩೨-೨೩೫.

ಗಡಿಗೆ ಬಂದು ಒಂದು ಬಡಿಗೆ ಶೀರ್ಷಿಕೆಯಡಿ ಪ್ರಕಟವಾಗಿದೆ."[೧೨] "ಸಿಂದೆ ಲಿಂಗಣ್ಣನವರಂಕಣ ಬರಹಗಳಲ್ಲಿ ಸಮಾಜದಲ್ಲಿ ಕಾಣಿಸಿಕೊಳ್ಳುವ ಲೋಪದೋಷಗಳು ಅಂದರೆ ಪ್ರತಿಷ್ಠಿತರೂ, ಶ್ರೀಮಂತರ ಸ್ವಾರ್ಥವಂಚನೆ, ಥಾಂಬೀಕರು ಧೀಡೀರನೆ ಹಣಗಳಿಸುವ ವಂಚಕರು ಬಗ್ಗೆ ಬರೆದಿದ್ದಾರೆ"[೧೩] ಕನ್ನಡ ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಅಂಕಣಬರಹಗಳಲ್ಲೆಲ್ಲ ಅತ್ಯುತ್ತಮ ಅಂಕಣ ವಾರಪತ್ರಿಕೆಯ ಸಂಪಾದಕೀಯ ಡೈರಿ. ಓದುಗರ ಮೆಚ್ಚುಗೆಯನ್ನು ವ್ಯಕ್ತಪಡಿಸುವಷ್ಟು ವೈಕುಂಠರಾಜರವರ ಅಂಕಣವಿತ್ತು.

೧೯೮೪ರ ಸಂಪಾದಕೀಯ ಡೈರಿಯಲ್ಲಿ ಸಂಗ್ರಹಿಸಿದ ಅಂಕಣ ಬರಹಗಳಲ್ಲಿ ಕೊರವಂಜಿಯ ರಾಶಿ, ಅಭಿವ್ಯಕ್ತಿ ಸ್ವಾತಂತ್ರ್ಯದ ಕೊಲೆ, ಸಾಹಿತ್ಯ ಸಮ್ಮೇಳನಾಧ್ಯಕ್ಷರ ಆಯ್ಕೆಗೆ ವಯಸ್ಸೊಂದು ಅರ್ಹತೆಯ ಸಕಾರದಿಂದ ಸದಸ್ಯರ ನಾಮಕರಣ, ಸ್ವಾಯತ್ತತೆಗೆ ಧಕೆ ರಾಜಕುಮಾರ ಅಭಿಮಾನ ಸಂಘಗಳು, ತೃತೀಯ ಸಕ್ತಿ? ಖಾಸಗಿ ಶಾಲೆಗಳು ಇಂಗ್ಲೀಷ ವ್ಯಾಮೋಹ ಮುಂತಾದು ಈ ಡೈರಿಯಲ್ಲಿ ಅಂಕಣ ಬರಹಗಳಿವೆ.

೧೯೮೫ರಲ್ಲಿ ಹೊರಬಂದ ಸಂಪಾದಕೀಯ ಡೈರಿಯಲ್ಲಿ "ರಾಜಕೀಯದ ನಾಟಕ, ಯಕ್ಷ ಪ್ರಶ್ನೆ, ಅನುವಂಶಿಕ ಆಡಳಿತ ರಾಜೀವಗಾಂಧಿ– ಸಮಸ್ಯೆಗಳ ಹೊರೆ, ಇಂಥಿಯೊಪಿಯಾದ ಭೀಕರ ಕ್ಷಾಮ, ಮತ್ತೆ ಕಗ್ಗತ್ತಲ ಖಂಡದ ಲಕ್ಷಾಂತರ ಸಾವು ತಮಿಳುನಾಡಿನ ವಿಚಿತ್ರ ರಾಜಕೀಯ ಸರ್ವಾಧಿಕಾರಿಯ ಉಗಮ ಹೆಗಡೆಯವರ ವರ್ಚಸ್ಸು, ಹಿಂದುಳಿದ ವರ್ಗಗಳ ಪ್ರಾತಿನಿಧ್ಯ ಹೀಗೆ ಹಲವಾರು ಮಹತ್ವದ ವಿಷಯಗಳನ್ನೊಳಗೊಂಡು ವೈಕುಂಠ ರಾಜ್ಯ ಅವರ ಒಟ್ಟು ೫೨ ಅಂಕಣ ಬರಹಗಳು ಇಲ್ಲಿ ಸಂಕಲಿತವಾಗಿವೆ."[೧೪]

೧೯೮೭ರಲ್ಲಿ ಹೊರ ಬಂದ ವೈಕುಂಠ ರಾಜು ಅವರ ಅಂಕಣ ಬರಹಗಳ ೫೨ ಲೇಖನಗಳಿವೆ. ಅವುಗಳಲ್ಲಿ ಶಿವರಾಮ ಕಾರಂತರ ಸಮರ್ಥನೆ, ವಿರೋಧಿವಾದ ಕಲಾಮಂದಿ ಯಾರಿಗೆ? ಕ್ಷಾಮದ ಕರಾಳ ಹಸ್ತಗಳು, ಜನರಿಗೆ ಬರ ಅಧಿಕಾರಿಗಳಿಗೆ ಸುಗ್ಗಿ ಜಾತಿ, ಮತ,

---

೧೨. ಡಾ. ಸುರೇಂದ್ರ ಕುಮಾರ ಕೆರಮಗಿ – ಕನ್ನಡದಲ್ಲಿ ಅಂಕಣ ಸಾಹಿತ್ಯ ಪು. ಸಂ. ೪೧.
೧೩. ಕೀತಿನಾಥ ಕುರ್ತಕೋಟಿ – ರಾಜಸ್ಪರ್ಶ ಪು.೨೩೨–೨೩೫.
೧೪. ಬಿ.ವಿ. ವೈಕುಂಠರಾಜ – ಸಂಪಾದಕೀಯ ಡೈರಿ ೧೯೮೪ ಅರಿಕೆಯಲ್ಲಿ ಪು.೧೫೮.

ಧರ್ಮ, ಕುವೆಂಪು ಹೇಳಿಗೆಗೆ ಪ್ರಕ್ರಿಯೆ, ಇತಿಹಾಸವನ್ನು ಬದಲಿಸುವ ಪ್ರಯತ್ನ ಸ್ಮಾರಕಗಳ ನಾಶ, ಈ ರೀತಿ ವೈವಿಧ್ಯಮಯ ವಿಷಯಗಳು ಸಂಪಾದಕೀಯ ಡೈರಿಯಲ್ಲಿ ಅಂಕಣ ಬರಹಗಳಾಗಿವೆ.

ವೈಕುಂಠ ರಾಜು ಅವರ ಅಂಕಣ ಒಳಗೊಂಡಿರುತ್ತಿದ್ದ ಚಿಂತನೆಗಳಲ್ಲಿನ ವಸ್ತು ನಿಷ್ಠತೆ ಕಾಳಜಿಯನ್ನು ವಾರಪತ್ರಿಕೆಯ ಓದುಗರು ಅರಿತಿದ್ದಾರೆ. ಹಲವು ಸಂಪುಟಗಳಿಗಾಗುವಷ್ಟು ಮೌಲಿಕ ಅಂಕಣ ಬಹರಗಳನ್ನು ಬರೆದಿದ್ದಾರೆ. "ಸಾಮಾಜಿಕ ರಾಜಕೀಯ, ಸಾಹಿತ್ಯಕ ಚಿಂತನೆಗಳಿಂದ ಅವರ ಓದುಗರ ಜ್ಞಾನವನ್ನು ಹೆಚ್ಚಿಸುದರಲಿ ಸಂದೇಹವಿಲ್ಲ. ನಮ್ಮ ಪತ್ರಿಕೆಯ ಅಂಕಣದ ಮುಖ್ಯಗುಣವೊಂದನ್ನು ನೀವು ಗಮನಸಬೇಕು, ಅಚ್ಚರಿಗೊಂಡು ಮಗುವಿನ ಮನಸ್ಥಿತಿಯಿಂದ ಹಿಡಿದು ವಯಸ್ಸಾದ ತಿಳುವಳಿಕೆಯುಳ್ಳವರವರೆಗೆ ಎಲ್ಲವೂ ಸೇರಿ ಕನ್ನಡ ಜಾಣಜಾಣೆಯರ ಅನುಭವವಾದಂತೆಯೇ ಕರ್ನಾಟಕದ ಪುಟ್ಟ ಚರಿತ್ರೆಯೂ ಆಗುತ್ತದೆ"[೧೫] ಎಂಬ ಲಂಕೇಶರ ಮಾತುಗಳಲ್ಲಿ ಅಂಕಣ ಬರವಣಿಗೆ ಎದ್ದು ಕಾಣುತ್ತದೆ. ಪ್ರಬಂಧ ಪ್ರಕಾರವನ್ನು ಕಾಲದ ಅವಶ್ಯಕತೆಗೆ ತಕ್ಕಂತೆ ಎಷ್ಟು ಬೇಕೋ ಅಷ್ಟೇ ಹೇಳುವ,ಹೇಗೆ ಬೇಕೋ ಹಾಗೆ ಕಿರಿಯದರಲ್ಲಿ ಹಿರಿದರ್ಥವನ್ನು ತುಂಬುವ ಅಂಕಣ ಬರಹಗಳ ಚಿಂತನೆ ನಡೆಸಿದ್ದಾರೆ.

"ಲಂಕೇಶರ ಚಿಂತನೆಯಲ್ಲಿ ಸಾಹಿತ್ಯಕ ಲವಲವಿಕೆ ತುಂಟತನ ಹಾಗು ವಿಷಯವನ್ನು ಮನದಾಳಕ್ಕಿಳಿಟಸುವ ಕುಶಲತೆ ಎದ್ದು ಕಾಣುತ್ತದೆ. ಇಂದಿನ ಭ್ರಷ್ಟಾಚಾರ ವಾತಾವರಣದಲ್ಲಿ ಸರ್.ಎಂ.ವ್ಹಿ. ನೆನಪು ಜಿಲ್ಲಾ ಪರಿಷತ್‌ಗಳಿಗೊಂದು ಕಿವಿಮಾತು"[೧೬] "ನಾವು ಉಣ್ಣುವ ಅನ್ನ, ಕಾಯಕವೂ ಇಲ್ಲ ಕೈಲಾಸವೂಇಲ್ಲ, ಪೀಟರ್ ಬ್ರೂಕ್ ಅವರ ವ್ಯಾಸ, ಖಾದ್ರಿ ಎಂಬ ಪತ್ರಕರ್ತ ನಾವು ಮತ್ತು ಮುಸ್ಲೀಮರು, ಉರಿವೇಶಕ್ಕೆ ಒಬ್ಬ ಪ್ರಧಾನಿ ಬಾಬರ, ಸುಮ್ಮನೆ ಜೀವಿಸಿದ ಒಂದು ದಿನ ಹೀಗೆ ಅಂಕಣಗಳಿಗೆ ಅವರು ಕೊಡುವ ಶೀರ್ಷಿಕೆಗಳಲ್ಲೂ ಅವರ ಸೃಜನ ಶೀಲತೆ ಎದ್ದು ಕಾಣುತ್ತದೆ."[೧೭]

ಅಂಕಣ ಬರಹಗಾಗರರಲ್ಲಿ ಅವರ ಬರಹಗಳಲ್ಲಿರುವ ವೈವಿಧ್ಯಮಯ ಗುಣಗಳು ಇಂಥ ಉದಾಹರಣೆಗಳಲ್ಲಿ ಕಾಣಸಿಗುತ್ತದೆ. ಪ್ರತಿಯೊಬ್ಬ ಮನುಷ್ಯನ ಬುದ್ಧಿಶಕ್ತಿ ಒಂದೇ ರೀತಿ ಇರುದಿಲ್ಲ.

---

೧೫. ಬಿ.ವಿ.ವೈಕುಂಠ ರಾಜರವರ – ಸಂಪಾದಕೀಯ ಡೈರಿ ಪು.೧೫೯.
೧೬. ಡಾ. ಸುರೇಂದ್ರ ಕೆರಮಗಿ – ಕನ್ನಡ ಅಂಕಣ ಸಾಹಿತ್ಯ ಪು.೩೯.
೧೭. ಲಂಕೇಶರ ಟೀಕೆ ಟಿಪ್ಪಣಿ (ಮೀಸಲಾತಿ ವಿರೋದಿ ಹುಡುಗರೊಂದಿಗೆ ) ಪು.೧೫೮.

ಆದರೆ ಪ್ರತಿಭೆಗಳು ತಮ್ಮ ತಮ್ಮ ಭಾಗದ ಸಂಸ್ಕೃತಿ ಹಿರಿಮೆಯ ಸಮಾಜದ ಚಿಂತನೆಯನ್ನು ದೇಶದ ಬಗೆಗೆ ಪ್ರತೀ, ದೇಶ ಎತ್ತ ಸಾಗಬೇಕೆಂಬುದರ ತಡೆಗೆ ವಿವರಣೆ ತುಡಿತಗಳಿವೆ. ಕನ್ನಡದ ಪ್ರಾರಂಬಿಕ ಅಂಕಣಕಾರರ ಬರವಣಿಗೆಗಿಂತ ಸುಧಾರಿಸಿದ ಸೂಕ್ಷ್ಮ ಬರವಣಿಗೆ ಹಾ.ಮಾ.ನಾಯಕ, ಎಚ್ಚೆಸ್ಕೆ, ಪಾಟೀಲ ಪುಟ್ಟಪ್ಪ, ಕು.ಶಿ. ಹರಿದಾಸಭಟ್ಟ, ಕೆ.ಡಿ. ಕುರ್ತಕೋಟಿ, ಸಂತೋಷಕುಮಾರ ಗುಲ್ವಾಡಿ, ಯು.ಆರ್. ಅನಂತಮೂರ್ತಿ, ಬಿ.ವಿ. ವೈಕುಂಠ ರಾಜು, ಲಂಕೇಶ, ಚಂಪಾ, ಶೂದ್ರ ಶ್ರೀನಿವಾಸರ ಅಂಕಣ ಬರಹಗಳಲ್ಲಿ ಕಾಣಿಸಿಕೊಂಡಿದೆ. ಕನ್ನಡದಲ್ಲಿ ನಗೆಯ ಅಂಕಣ ಬರಹಗಳಿಗೆ ಹೆಸರಾದ ರಾಶಿ, ಬೀಚಿ, ಎಸ್ಕೆ.ಬಿ.ಎಸ್ಸಾರ್. ವೈ.ಎನ್ಕೆ, ಮೊದಲಾದವರು ನಗೆಯಿಂದಲೇ ಸಮಾಜದ ಹೊಗೆ ಹೊರಗೆ ಹಾಕಿ ಆರೋಗ್ಯಕರ ಸಮಾಜದ ಬೆಳವಣಿಗೆಗೆ ನಾಂದಿ ಹಾಡಿದ್ದಾರೆ"[೧೮] ಲಿಂಗದೇವರು, ಹಳೆಮನಿ, ವಸಂತಕುಮಾರ ಪೆರ್ಲ, ನಗೇಶ ಹೆಗಡೆ, ರವಿ ಬೆಳಗೆರಿ, ನಿರಂಜನ ವಾನಳ್ಳಿ ಮುಂತಾದ ನೂತನ ಅಂಕಣಕಾರರು ಅಂಕಣ ಬರಹಕ್ಕೆ ಹೊರಚಾಲನೆ ನೀಡುತ್ತಾರೆ.

**೩.೩ ಅಂಕಣ ಸಾಹಿತ್ಯದ ಪ್ರಕಾರಗಳು.**

ಒಂದು ನಿರ್ದಿಷ್ಟ ಅವಧಿಯಲ್ಲಿ ನಯತಕಾಲೀಕವಾಗಿ ಪ್ರಕಟವಾಗುವಂಥ ಅಂಕಣ ಬರಹಗಳು ಈ ಕೆಳಗಿನಂತಿವೆ.

೧. ದೈನಿಕ ಅಂಕಣ ಸಾಹಿತ್ಯ

೨. ವಾರ ಅಂಕಣ ಸಾಹಿತ್ಯ

೩. ಪಾಕ್ಷಿಕ ಅಂಕಣ ಸಾಹಿತ್ಯ

೪. ಮಾಸಿಕ ಅಂಕಣ ಸಾಹಿತ್ಯ

೫. ದ್ವಿಮಾಸಿಕ ಅಂಕಣ ಸಾಹಿತ್ಯ

೬. ತ್ರೈಮಾಸಿಕ ಅಂಕಣ ಸಾಹಿತ್ಯ

೭. ಅರ್ಥವಾರ್ಷಿಕ (ಷಾಣ್ಮಾಸಿಕ) ಅಂಕಣ ಸಾಹಿತ್ಯ

೮. ವಾರ್ಷಿಕ ಅಂಕಣ ಸಾಹಿತ್ಯ

---

೧೮. ಜಿ.ಎಸ್. ರಂಗನಾಥ – ಪತ್ರಿಕೋದ್ಯಮ ಸಮಗ್ರ ಸಂಪುಟ ಪು. ೨೮೫.

ಈ ಎಲ್ಲ ಪ್ರಕಾರಗಳನ್ನು ನೋಡಿದಾಗ ದಿನನಿತ್ಯದ ಪತ್ರಿಕೆಗಳಲ್ಲಿ ಹಲವಾರು ಜನ ತಮ್ಮದೇ ಆದ ನಿರ್ದಿಷ್ಟ ಸ್ಥಳದಲ್ಲಿ ವಿಶಿಷ್ಟ ತಲೆಬರಹವನ್ನಿಟ್ಟುಕೊಂಡು ಅಂಕಣಗಳನ್ನು ಬರೆಯುತ್ತಿರುತ್ತಾರೆ.

ಅಂಕಣದಲ್ಲಿ ತಮಗೆ ಬೇಕಾದ ವಿಷಯವನ್ನು ಪ್ರಕಟಿಸುವ ಸ್ವಾತಂತ್ರ್ಯವಿದೆ. ಅವರಿಗೆ ಯಾವುದೇ ರೀತಿಯ ನಿಯಂತ್ರಣ ಇರುವುದಿಲ್ಲ. ಹಸ್ತ ಕ್ಷೇಪ ಮತ್ತು ಪ್ರತಿಬಂಧಕಗಳು ಇಲ್ಲದಿರುವಂಥ ಮುಕ್ತ ವಾತಾವರನ. ಪತ್ರಿಕಾ ಸ್ವಾತಂತ್ರ್ಯವೆಂದರೆ ಸರ್ಕಾರದ ಅಥವಾ ಯಾವುದೇ ಅರೆ ಸರ್ಕಾರಿ ಸಂಸ್ಥೆಯ ಹಸ್ತಕ್ಷೇಪ ಇಲ್ಲದೇ ಮುದ್ರಿಸುವ ಮತ್ತು ಪ್ರಕಟಿಸುವ ಹಕ್ಕು. ಪ್ರಜಾಪ್ರಭುತ್ವದಲ್ಲಿ ಪತ್ರಿಕೆಗಳು ನಾಲ್ಕನೇ ಅಂಗವಾಗಿ ಕೆಲಸ ಮಾಡುತ್ತವೆ. ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಮತ್ತು ಪತ್ರಿಕಾ ಅಂಗವು ಪ್ರಜಾಪ್ರಭುತ್ವ ಆಧಾರ ಸ್ತಂಭಗಳಿದ್ದಂತೆ.

"ಸಂವಿಧಾನದ ೧೯(೧)ನೇ ವಿಧಿಯಲ್ಲಿ ದೇಶದ ಪ್ರಜೆಗಳಿಗೆ ನೀಡಲಾಗಿರುವ ವಾಕ್ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯಗಳೇ ಪತ್ರಿಕೆಗಳಿಗೂ ಅನ್ವಯಿಸುವುದು.

ಅಭಿವ್ಯಕ್ತಿ ಸ್ವಾತಂತ್ರ್ಯ ಪ್ರಜೆಗಳಿಗೆ ಈಕೆಳಗಿನ ಹಕ್ಕನ್ನು ಒದಗಿಸಿಕೊಡುತ್ತದೆ.

೧. ತನ್ನ ಭಾವನೆ ಹಾಗೂ ಅಭಿಪ್ರಾಯಗಳನ್ನು ಸಾರ್ವಜನಿಕರಿಗೆ ತಿಳಿಸುವ ಹಕ್ಕು.

೨. ಸುದ್ದಿ ಸಮಾಚಾರ ಆಲೋಚನೆ ವಿಚಾರಗಳನ್ನು ಪ್ರಸಾರ ಮಾಡುವ ಹಕ್ಕು.

೩. ಕಾನೂನು ಬದ್ಧವಾದ ಮಾಧ್ಯಮದ ಮೂಲಕ ಸುದ್ಧಿ ಸಮಾಚಾರ ಆಲೋಚನೆ ವಿಚಾರ ಗಳನ್ನು ಸ್ವೀಕರಿಸುವ ಹಕ್ಕು."[೧೯]

ಸಂವಿಧಾನದ ೧೯(೧) ವಿಧಿಯ ಪತ್ರಕರ್ತರಿಗೆ ಸುದ್ದಿ ಸಮಾಚಾರ ಯಾವುದೇ ಮಾಹಿತಿ ಪ್ರಕಟಣೆ ಮತ್ತು ಪ್ರಸಾರದ ಹಕ್ಕನ್ನು ನೀಡಿದೆ. ಸಾರ್ವಜನಿಕ ಮುಖ್ಯ ವಿಷಯಗಳ ವಿಚಾರ, ವಿಮರ್ಶೆ, ಟೀಕೆ-ಟಿಪ್ಪಣೆ ಮಾಡುವ ಅಧಿಕಾರ ನೀಡುತ್ತದೆ. ಸುದ್ಧಿ-ಸಮಾಚಾರ ಪ್ರಸಾರಕ್ಕೆ ಅಭಿಪ್ರಾಯ ಮತ್ತು ವಿಚಾರಗಳ ವಿನಿಮಯಕ್ಕೆ ಹಾಗೂ ಸಾರ್ವಜನಕ ಮಹತ್ವದ ವಿಷಯಗಳಲ್ಲಿ ಭಿನ್ನಾಭಿಪ್ರಾಯ ರೂಪಸಿವುದಕ್ಕೆ ಪತ್ರಿಕೆಗಳು ಅನಿವಾರ್ಯ ಮಾಧ್ಯಮ.

---

೧೯. ಜಿ.ಎಸ್. ರಂಗನಾಥ – ಪತ್ರಿಕೋದ್ಯಮ ಸಮಗ್ರ ಸಂಪುಟ ೧, ಪು. ೪೮೭-೪೯೮.

"ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳ ಹೊಣೆಗಾರಿಕೆ, ಕರ್ತವ್ಯಗಳು, ಕಾರ್ಯವೈಖರಿಗಳನ್ನು ಗಮನಸುವುದು ಆಧುನಿಕ ಪ್ರಜಾಪ್ರಭುತ್ವದಲ್ಲಿ ಪತ್ರಿಕೆಗಳ ಕರ್ತವ್ಯ ಕಣ್ಣಲ್ಲಿ ಕಣ್ಣಿಟ್ಟು ಗಮನಿಸುವುದು, ವಿಮರ್ಶಿಸುವುದು, ಟೀಕಿಸುವುದು ಹಾಗು ಅಗತ್ಯ ಪನರ್ವಸತಿ ಕಲ್ಪಿಸಲಾಯಿತೇ? ಅದಕ್ಕೆ ಸಕಾಲದಲ್ಲಿ ಕೇಂದ್ರದ ನೆರವು ಬಂತೆ? ಸಾರ್ಕ ಸಮ್ಮೇಳನದ ನಿರ್ಣಯಗಳೇನು? ವಿಮಾನ ಅಪಘಾತ ತನಖಾ ವರದಿ ಏನು? ಪಕ್ಷಾಂತರಿಯ ಪ್ರಭಾವ ಪರಿಣಾಮಗಳೇನು? ಸಂಪುಟ ರಚನೆಯಿಂದ ಯಾರಿಗೆ ಲಾಭ ? ಯಾರಿಗೆ ನಷ್ಟ? ಇಂಥ ಬೆಳವಣಿಗೆಯನ್ನು ಗಮನಸುವುದು ಅಗೆದು ಬಗೆದು ಉತ್ತರ ಹುಡುಕಿ ವರದಿ ಮಾಡುವುದು ವರದಿಗಾರನ ಕೆಲಸವಾಗಿದೆ"[೨೦] ಇದರ ಜೊತೆಗೆ ಘಟನೆಗೆ ಸಂಬಂಧಿಸಿದ ಎಲ್ಲ ವಿವರಗಳನ್ನೂ ವರದಿ ಮಾಡಬೇಕು. ಇದರಿಂದ ಓದುಗರ ಎಲ್ಲ ಪ್ರಶ್ನೆಗಳಿಗೂ ಉತ್ತರ ದೊರೆಯುವಂತಾಗಬೇಕು.

**೧. ದೈನಿಕ ಅಂಕಣ ಸಾಹಿತ್ಯ**

ದಿನ ನಿತ್ಯ ವರ್ತಮಾನ ಪತ್ರಿಕೆಗಳಿಗೆ ನಾವು ದೈನಿಕ ಅಂಕಣ ಅಥವಾ ದಿನನತ್ಯದ ಪತ್ರಿಕೆ ಎಂದು ಹೇಳಬಹುದು. ಇದರಲ್ಲಿ ನಿಯತಕಾಲಿಕ ಪ್ರತಿನಿತ್ಯ ಬಿಡದೆ ಅಂಕಣವನ್ನು ಬರೆಯುವ ಅಂಕಣಕಾರರು ಇದ್ದಾರೆ.

"ನಿತಕಾಲೀಕಗಳು ಭಾರತೀಯ ಪತ್ರಿಕೋದ್ಯಮಕ್ಕೆ ಹೊಸದೇನಲ್ಲ. ಆದರೆ ೧೯೮೦ರ ದಶಕದಲ್ಲಿ ಭಾರತದಲ್ಲಿ ನಿಯತಕಾಲಿಕೆಗಳ ಸುಗ್ಗಿ ಕಂಡು ಬಂದಿತು. ಈ ಮಾತು ಇಂಗ್ಲೀಷ ಭಾಷೆಗೆ ಮಾತ್ರವಲ್ಲ. ಪ್ರಾದೇಶಿಕ ಭಾಷೆಗೂ ಅನ್ವಯಿಸುತ್ತದೆ. ಹಿಂದಿ ಭಾಷೆಯಲ್ಲಿ ಮೂರು ಸಾವಿರಕ್ಕೂ ಹೆಚ್ಚು ನಿಯತಕಾಲಿಕಗಳಿದ್ದರೆ, ಇಂಗ್ಲೀಷ ಭಾಷೆಯಲ್ಲಿ ೨೬೭೦ ನಿಯತಕಾಲಿಕಗಳಿವೆ. ತಮಿಳು, ಬಂಗಾಳಿ, ಮರಾಠಿ, ಉರ್ದು, ಮತ್ತು ಗುಜರಾತ ಭಾಷೆಯ ಮತ್ತು ಪತ್ರಿಕೆಗಳು ಒಳ್ಳೆ ಪ್ರಸಾರ ಹೊಂದಿವೆ. ೧೯೯೩ರಲ್ಲಿ ಹಲವಾರು ವಿಶೇಷ ಆಸಕ್ತಿಯ ಹೊಸ ನಿಯತಕಾಲಿಕೆಗಳು ಪ್ರಾರಂಭವಾದವು. ಅವುಗಳ ಪೈಕಿ "ಪೇರೆಂಟಿಂಗ್, ಯಂಗ್ ಮದರ್, ಆಟೋ ಇಂಡಿಯಾ, ಕಾರ್ ಆಂಡ್ ಬ್ರೇಕ್ ಮುಖ್ಯವಾದವು"[೨೧]

---

೨೦. ಜಿ.ಎಸ್. ರಂಗನಾಥ-ಪತ್ರಿಕೋದ್ಯಮ ಪರಿಷ್ಕೃತ ಸಮಗ್ರ ಸಂಪುಟ ಪು. ೯೬.
೨೧. ಜಿ.ಎಸ್. ರಂಗನಾಥ-ಪತ್ರಿಕೋದ್ಯಮ ಪರಿಷ್ಕೃತ ಸಮಗ್ರ ಸಂಪುಟ ಪು. ೯೬.

ನಿಯತ ಕಾಲಿಕೆಗಳಲ್ಲಿ ಎರಡು ಬಗೆಗಳಿವೆ.

೧. ಸಾಮಾನ್ಯ ಆಸಕ್ತಿ ನಿಯತಕಲಿಕೆಗಳು

೨. ವಿಶಿಷ್ಟ ಆಸಕ್ತಿ ನಿಯತಕಾಲಿಕೆಗಳು.

೧. ಎಲ್ಲ ವಯೋಮಾನದ ಓದುಗರ ಆಸಕ್ತಿಯನ್ನು ತಣಿಸುವಂಥ ವಸ್ತು ವೈವಿಧ್ಯತೆಯಿಂದ ಕೂಡಿದ ನಯತಕಾಲಿಕೆಗಳು ಉದಾಹರಣೆ ಕನ್ನಡದ ಸುಧಾ, ತರಂಗ, ಹಾಗೂ ಇಗ್ಲೀಷಿನ "ಇಂಡಿಯಾ ಟುಡೇ" ಈ ಪತ್ರಿಕೆಗಳಲ್ಲಿ ಕಥೆ, ಕಾದಂಬರಿ, ವಿಜ್ಞಾನ, ಪರಿಸರ, ಸಿನೆಮಾ ಪಾಕಶಾಸ್ತ್ರ ಮೊದಲಾದ ವಿಷಯಗಳ ಲೇಖನಗಳು, ನುಡಿ ಚಿತ್ರಗಳು ಇರುತ್ತವೆ.

೨. ವಿಶೇಷ ಆಸಕ್ತಿ ನಿಯತಕಲಿಕಗಳು ಒಂದು ವೃತ್ತಿಯ ಓದುಗರ ವಿಶೇಷ ಆಸಕ್ತಿಯನ್ನು ತಣಿಸುವಂಥ ನಿಯತಕಾಲಿಕಗಳು, ಬ್ಯುಜಿನೆಸ ವರ್ಡ್ ಇಂಥ ಪತ್ರಿಕೆಗಳು, ವಾಣಿಜ್ಯೋದ್ಯಮಿಗಳು, ಕಾರ್ಪೊರೇಟ್ ಪ್ರಪಂಚದ ವ್ಯಕ್ತಿಗಳು ಮತ್ತು ಹಣಕಾಸು ವ್ಯವಹಾರದ ವ್ಯಕ್ತಿಗಳು ಇಂಥವರ ಆಸಕ್ತಿ ತಣಿಸುವುದಕ್ಕಾಗಿಯೇ ಇರುವ ಪತ್ರಿಕೆಗಳು.

ಕನ್ನಡದ ಜನಪ್ರಿಯ ಪತ್ರಿಕೆಗಳು ಸ್ವಾತಂತ್ರ್ಯೋತ್ತರ ಸಾಹಿತ್ಯ ಪರಿಚಾರಿಕೆಯ ಕೆಲಸವನ್ನು ಗಮನಾರ್ಹವಾಗಿಯೇ ಮಾಡಿದೆ. ಇವುಗಳ ಪ್ರಜಾವಾಣಿ, ಸಂಯುಕ್ತ ಕರ್ನಾಟಕ, ಕನ್ನಡ ಪ್ರಭ, ಉದಯ ವಾಣಿ, ಇತ್ತೀಚಿನ ವಿಜಯ ಕರ್ನಾಟಕ, ವಿಜಯ ವಾಣಿ, ಮುಂತಾದವುಗಳು ನವೋದಯ ಪ್ರಗತಿಶೀಲ ಚಳುವಳಿಗಳ ಕಾಲದಿಂದಲೂ ಸಾಹಿತ್ಯಕ್ಕೆ ಸಾಕಷ್ಟು ಗಮನ ಕೊಟ್ಟಿದೆ. ನವ್ಯ ಕಾವ್ಯ ಚಳುವಳಿಯಲ್ಲಂತೂ ಪ್ರಜಾವಾಣಿ ಒಂದು ವೇದಿಕೆಯಾಗಿ ಕೆಲಸ ಮಾಡಿದೆ. ಒಂದು ಪತ್ರಿಕೆಯಿಂದ ಲೇಖಕ ಬೆಳೆಯುತ್ತಾನೆ. ಲೇಖಕನಂದ ಪತ್ರಿಕೆ ಬೆಳೆಯುತ್ತದೆ. ಪತ್ರಿಕೆತಾನು ಬೆಳೆಯಬೇಕಾದರೆ ಓದುಗರನ್ನು ಬೆಳೆಸಬೇಕು. ಓದುಗರನ್ನು ಬೆಳೆಸಬೇಕಾದರೆ ಲೇಖಕರನ್ನು ಬೆಳೆಸಬೇಕಾಗುತ್ತದೆ. ಹೀಗಾಗಿ ಒಬ್ಬ ಕವಿಯೇ ಕಥೆಗಾರನೋ ಬರೆದುದನ್ನು ಅಚ್ಚು ಹಾಕುವು ದರೊಂದಿಗೆ ಸಂಪಾದಕನ ಕೆಲಸ ಮುಗಿಯುವುದಿಲ್ಲ.

ನಮ್ಮ ಪತ್ರಿಕೆಗಳು ಕಥಾ ಸ್ಪರ್ಧೆ ಮೊದಲಾದ ಸಾಹಿತ್ಯ ರಚನಾ ಸ್ಪರ್ಧೆಗಳು, ಅಂಕಣ ಬರಹಗಳು . ಮೊದಲಾದವುಗಳ ಮೂಲಕ ಇಂಥ ಕೆಲಸವನ್ನು ಮಾಡಿಕೊಂಡು ಬರುತ್ತಿವೆ.

ಅನಂತಮೂರ್ತಿ, ರಾಮಚಂದ್ರ ಶರ್ಮ, ತೇಜಸ್ವಿ, ಲಂಕೇಶ, ಕೆ.ಸದಾಶಿವ, ಟಿ.ಜಿ.ರಾಘವ ಮೊದಲಾಗಿ ನವ್ಯರಿಂದ ಹಿಡಿದು ಇವತ್ತೀನ ಮೊಗಳ್ಳಿ ಗಣೇಶ, ಅಮರೇಶ ನುಡಗೋಣಿ ಮೊದಲಾದವರು ಪ್ರಜಾವಾಣಿ ಕಥಾ ಸ್ಪರ್ಧೆಯಿಂದ ಹುಟ್ಟಿಬಂದ ಕಥೆಗಾರರು.

ಸಿದ್ಧವನ ಹಳ್ಳಿ ಕೃಷ್ಣಶರ್ಮ, ನಿರಂಜನ, ಹಾ.ಮಾ.ನಾಯಕ, ಕುರ್ತಕೋಟಿ, ಜಿ.ವೆಂಕಟಸುಬ್ಬಯ್ಯ, ಎಲ್.ಎಸ್. ಶೇಷಗಿರಿರಾವ ಕು.ಶಿ. ಹರಿದಾಸಭಟ್ಟ, ಜಿ.ಪಿ.ರಾಜರತ್ನಂ, ಬೀಚಿ, ಎಚ್ಚೆಸ್ಕೆ ಮೊದಲಾದವರ ಮೂಲಕ ನಾಡಿನ ಪತ್ರಿಕೆಗಳು ವೈವಿಧ್ಯಮಯವಾಗಿ ಅಂಕಣಗಳ ಸತತ ಪ್ರಕಟಣೆಯಿಂದ ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಅಂಕಣ ಬರಹಕ್ಕೆ ಸಾಹಿತ್ಯದ ಸ್ಥಾನಮಾನದ ಗರಿಯೂದಕ್ಕಿದೆ.

**೨. ವಾರ ಅಥವಾ ಸಾಪ್ತಾಹಿಕ ಅಂಕಣ ಸಾಹಿತ್ಯ**

ಸಾಪ್ತಾಹಿಕಗಳು ವಾರಕ್ಕೊಮ್ಮೆ ಅಂದರೆ ಪ್ರತಿ ಭಾನುವಾರ ಅಥವಾ ಯಾವುದಾದರೊಂದು ದಿನ ನಶ್ಚಿತ ಮಾಡಿಕೊಂಡು ಅವರ ನಿರತವಾಗಿ ಅಂಕಣವನ್ನು ಬರೆಯುತ್ತಾ ಹೋಗುತ್ತಾರೆ. ಎಪ್ಪತ್ತರ ದಶಕದ "ಇಂಡಿಯಾ ಟುಡೇ" ನಿಯತಕಾಲಿಕದ ಶುರುವಿನೊಂದಿಗೆ ಇದೇ ಸಮಯದಲ್ಲಿ ಹಳೆಯ ವಾರ ಪತ್ರಿಕೆ ಇಲಸ್ಟೇಟಿಡ್ ವೀಕ್ಲಿ ಆಫ್ ಇಂಡಿಯಾ (ಟೈಮ್ಸ ಆಫ್ ಇಂಡಿಯಾ) ಖುಷವಂತ ಸಿಂಗರ ಸಂಪಾದಕತ್ವದಲ್ಲಿ ಹೊಸ ರೂಪ ವಿನ್ಯಾಸ ಪಡೆದುಕೊಂಡಿತು.

ಸಮಕಾಲೀನ-ಅಂಕಣ ಕಾರರಲ್ಲಿ ಪ್ರಮುಖವಾಗಿ ಸಂತೋಷ ಕುಮಾರ ಗುಲ್ವಾಡಿ, ಪಿ.ಲಂಕೇಶ ಎಚ್ಚೆಸ್ಕೆ, ಎನ್ಕೆ ಹಾಮಾ ನಾಯಕ, ಕೆ.ಡಿ. ಕುರ್ತಕೋಟಿ, ಸಿಂಪಿ ಲಿಂಗಣ್ಣ, ವಿಶ್ವೇಶ್ವರ ಭಟ್ಟ, ಪ್ರತಾಪ ಸಿಂಹ, ರವಿ ಬೆಳಗರೆ, ಹಾಗೂ ಕೆ.ನೀಲಾ ಹೀಗೆ ಹತ್ತಾರು ಜನ ತಮ್ಮದೇ ಆದ ವಿಶಿಷ್ಟ ಶೀರ್ಷಿಕೆಯನ್ನಿಟ್ಟುಕೊಂಡು ಬರೆಯುತ್ತಿದ್ದಾರೆ.

ಉದಾಹರಣೆ: ಸುಧಾ, ತರಂಗ, ಲಂಕೇಶ, ಅಗ್ನಿ ಮೊದಲಾದ ಪತ್ರಿಕೆಗಳನ್ನು ಗಮನಸಬಹುದು.

**೩. ಪಾಕ್ಷಿಕ ಅಂಕಣ ಸಾಹಿತ್ಯ**

ಪ್ರತಿ ಹದಿನೈದು ದಿನಗಳಿಗೊಮ್ಮೆ ಅಂಕಣ ಪ್ರಕಟವಾಗುತ್ತಿರುತ್ತದೆ. ಮಹಿಳೆ ಬಗ್ಗೆ, ಆರೋಗ್ಯದ ಬಗ್ಗೆ ಹಬ್ಬಗಳ ವಿಶೇಷಾಂಕ ಹೀಗೆ ಹಲವಾರು ವಿಷಯಗಳನ್ನಿಟ್ಟುಕೊಂಡು ಅಂಕಣ ಬರೆಯುತ್ತಾರೆ.

**೪. ಮಾಸಿಕ ಮತ್ತು ದ್ವಿಮಾಸಿಕ ಅಂಕಣ ಸಾಹಿತ್ಯ**

ಮಾಸಿಕ ಅಥವಾ ತಿಂಗಳಿಗೊಮ್ಮೆ ಪ್ರಕಟವಾಗುವ ಅಂಕಣ ಎಂದು ಹೇಳಬಹುದು. ಮಯೂರ, ಕಸ್ತೂರಿ, ತುಷಾರ ಇವೆಲ್ಲವುಗಳ ಕಥಾ, ಲೇಖನ, ವೈಜ್ಞಾನಿಕ ಹೀಗೆ ಹಲವಾರು ವಿಷಯಗಳನ್ನು ಪ್ರಕಟಿಸುತ್ತಾರೆ. ಉದಾಹರಣೆ: ಕನ್ನಡದ "ಸಂಕ್ರಮಣ" ದೇಶಕಾಲ ಸಾಹಿತ್ಯ ಪತ್ರಿಕೆಗಳಾದರೆ 'ಅನನ್ಯ' ಸಂಗೀತಕ್ಕಾಗೇ ಮೀಸಲಾದ ದ್ವೈಮಾಸಿಕ ಮತ್ತು ತ್ರೈಮಾಸಿಕ ಅಂಕಣ ಸಾಹಿತ್ಯ.

**೫. ತ್ರೈಮಾಸಿಕ ಅಂಕಣ ಸಾಹಿತ್ಯ**

ಪ್ರತಿ ಮೂರು ತಿಂಗಳಿಗೊಮ್ಮೆ ಬರೆಯತಕ್ಕಂಥ ಅಂಕಣವನ್ನು ತ್ರೈಮಾಸಿಕ ಅಂಕಣ ಪತ್ರಿಕೆ ಎನ್ನುತ್ತಾರೆ. ಈ ಅಂಕಣದಲ್ಲಿ ನಿಯತಕಾಲಿಕವಾಗಿ ಪ್ರತಿ ೩ ತಿಂಗಳಿಗೊಮ್ಮೆ ತಪ್ಪದೇ ಅಂಕಣ ಬರೆಯುತ್ತಾರೆ. ಇದರಲ್ಲಿ ಕೂಡ ಕೆಲವೊಂದು, ವಿಷಯವನ್ನೊಳಗೊಂಡ ಶೈಕ್ಷಣಿಕ, ವೈಜ್ಞಾನಿಕ, ಮುಂತಾದ ಸಂಚಿಕೆಗಳನ್ನು ಒಳಗೊಂಡಿರುತ್ತದೆ.

**೬. ಷಾಣ್ಮಾಸಿಕ (ಅರ್ಧವಾರ್ಷಿಕ) ಅಂಕಣ ಸಾಹಿತ್ಯ**

ಪ್ರತಿ ಆರು ತಿಂಗಳಿಗೊಮ್ಮೆ ಪ್ರಕಟವಾಗುವ ಅಂಕಣವನ್ನು ಷಣ್ಮಾಸಿಕ ಅಂಕಣ ಸಾಹಿತ್ಯ ಎನ್ನುತ್ತೇವೆ. ಇವುಗಳಲ್ಲಿ ಕೂಡ ಅನೇಕ ವಿಶೇಷ ವಿಷಯಗಳನ್ನು ಹೊರಹಾಕುವ ಮೂಲಕ ಅಂಕಣ ಬರೆಯುತ್ತಾರೆ.

**೭. ಮಾಸಿಕ (ವಾರ್ಷಿಕ) ಅಂಕಣ ಸಾಹಿತ್ಯ**

ವಾರ್ಷಿಕ ಅಂಕಣ ಸಾಹಿತ್ಯ ಪ್ರತಿ ವರ್ಷಕ್ಕೊಮ್ಮೆ ಪ್ರಕಟವಾಗುವ ಅಂಕಣ ಸಾಹಿತ್ಯ ಇದಾಗಿದೆ. ಉದಾಹರಣೆ ದೀಪಾವಳಿ ವಿಶೇಷಾಂಕ, ಯುಗಾದಿ, ವಿಜಯ ದಶಮಿ ಹೀಗೆ

ಹಲವಾರು ವಿಷಯಗಳ ಬಗ್ಗೆ ಪ್ರತಿವರ್ಷ ಪ್ರಕಟಿತವಾಗುತ್ತದೆ. ಅದೇ ರೀತಿ ವಾರಕ್ಕೊಮ್ಮೆ, ಪತ್ರಿಕೆಗಳಲ್ಲಾಗಲೀ, ಪುಸ್ತಕಗಳಲ್ಲಾಗಲಿ ಒಂದು ವಿಷಯದ ಬಗ್ಗೆ ವಿಸ್ತಾರವಾಗಿ ಸಂಕ್ಷಿಪ್ತದಲ್ಲಿ ಬರೆಯುತ್ತಾರೆ. ತಿಂಗಳಿಗೊಮ್ಮೆ, ಮೂರುತಿಂಗಳಿಗೊಮ್ಮೆ, ಅರ್ಧವಾರ್ಷಿಕ ಮತ್ತು ವಾರ್ಷಿಕ ಪತ್ರಿಕೆಗಳಲ್ಲಾಗಲೀ, ಪುಸ್ತಕಗಳಲ್ಲಾಗಲೀ, ಬೇಕಾದ ವಿಷಯಗಳನ್ನು ಮಂಡಿಸುತ್ತಾ ಬರುತ್ತಾರೆ.

ಅಂಕಣ ಸಾಹಿತ್ಯ ಪತ್ರಿಕೆಯ ಪ್ರಮುಖ ಅಂಗವಾಗಿದ್ದು ಅವುಗಳ ಮೂಲಕ ಅನೇಕ ವಿಷಯಗಳನ್ನು ಮಂಡಿಸುತ್ತಾಬರುತ್ತಾರೆ. ಅವುಗಳೆಂದರೆ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ, ಧಾರ್ಮಿಕ, ಶೈಕ್ಷಣಿಕ ಮುಂತಾದವುಗಳಾಗಿವೆ.

ಇಂದಿನ ವರ್ತಮಾನ ಕಾಲದಲ್ಲಿ ನಾವು ಅನೇಕ ಅಂಕಣಕಾರರನ್ನು ನೋಡುತ್ತೇವೆ. ಅವರು ತಮ್ಮದೇ ಆದ ಶೀರ್ಷಿಕೆಯನ್ನಿಟ್ಟುಕೊಂಡು ಅಂಕಣ ಬರಹಗಳನ್ನು ಬರೆಯುತ್ತಾರೆ. ಸತ್ಯಾಂಶವನ್ನು ಒಳಗೊಂಡ ವಿಷಯಗಳನ್ನು ಧೈರ್ಯದಿಂದ ಜನರ ಮುಂದೆ ತೆರೆದಿಡುತ್ತಾರೆ.

ಎಚ್.ಎಸ್.ಕೃಷ್ಣಸ್ವಾಮಿ ಇವರನ್ನು ಎಚ್ಚೆಸ್ಕೆ ಎಂದು ಗುರುತಿಸುತ್ತಾರೆ. ಇವರು ವಾರದಿಂದವಾರಕ್ಕೆ ಎಂಬ ಶಿರ್ಷಿಕೆಯಡಿಯಲ್ಲಿ ಅಂಕಣ ಬರೆಯುತ್ತಾರೆ. ಹಾ.ಮಾ.ನಾಯಕರು ೧೯೭೭ರಿಂದ ೨೦೦೦ದವರೆಗೆ ಕನ್ನಡ ಪ್ರಭ, ಗ್ರಂಥಲೋಕ, ಪ್ರಜಾಮತ, ಇಂಚರ, ಪ್ರಜಾವಾಣಿ, ತರಂಗ, ಸುಧಾ ಮೊದಲಾದ ಪತ್ರಿಕೆಗಳಲ್ಲಿ ದಿನ ಹಾಗು ವಾರ ಪತ್ರಿಕೆಗಳಲ್ಲಿ ಬರೆದ ಅಂಕಣ ಲೇಖನಗಳು ಕನ್ನಡ ಪ್ರಭದಲಲಿ "ಸಾಹಿತ್ಯ ಸಲ್ಲಾಪ" ಇಂಚರದಲ್ಲಿ "ವರ್ತಮಾನ" ಪ್ರಜಾವಾಣಿಯಲ್ಲಿ "ಸಂಪ್ರತಿ" ಸಂಕೇತ ಪತ್ರಿಕೆಯಲ್ಲಿ ಪ್ರಬಂಧ "ಪುಸ್ತಕ ಪ್ರಸಂಗ" ಕರ್ಮವೀರದಲ್ಲಿ "ಪುಸ್ತಕ ಪ್ರಸ್ತಾಪ" ಹೀಗೆ ಹಲವು ಶೀರ್ಷಿಕೆಯೊಂದಿಗೆ ಅವರು ತಮ್ಮ ಅಂಕಣ ಬರಹಗಳನ್ನು ೧೯ ಸಂಪುಟಗಳಲ್ಲಿ ಪ್ರಕಟಣೆಗೊಂಡಿವೆ.

ಕೆ.ಡಿ.ಕುರ್ತಕೋಟಿ ಖ್ಯಾತ ವಿಮರ್ಶಕರಾಗಿ ಅಷ್ಟೇ ಅಲ್ಲ, ಅಂಕಣ ಬರಹಗಳಿಂದಲೂ ಜನರ ಮನಸ್ಸು ಸೆಳೆದಿದ್ದಾರೆ. ಅವರು ಅಂಕಣ ಸಾಹಿತ್ಯ ಪ್ರಜಾವಾಣಿ ದಿನ ಪತ್ರಿಕೆಯಲ್ಲಿ "ಸಮ್ಮುಖ" ಶೀರ್ಷಿಕೆಯಡಿಯಲ್ಲಿ ಪ್ರಕಟಿತವಾಗಿದೆ.

ಇವರಂತೆ ಸಿಂಪಿ ಲಿಂಗಣ್ಣ ಜಾನಪದ ಸಾಹಿತ್ಯದಲ್ಲಿ ಹೆಸರು ವಾಸಿಯಾಗಿದ್ದಾರೆ. ಚಣಚಣದ ಈ ಪ್ರತಿಭೆ "ವಿಶ್ವ ಕಲ್ಯಾಣ" ವಾರ ಪತ್ರಿಕೆಯಲಿ ೧೧೮ ಅಂಕಣ ಬರಹಗಳು "ನೂರು ಗಡಿಗೆ ಒಂದು ಬಡಿಗೆ" ಶೀರ್ಷಿಕೆಯಡಿ ಪ್ರಕಟವಾಗಿದೆ.

ವಿಶ್ವೇಶ್ವರ ಭಟ್ಟರ "ನೂರೆಂಟು ಮಾತು" ಎಂಬ ಶೀರ್ಷಿಕೆಯಲ್ಲಿ ಅವರು ವಿಜಯ ಕರ್ನಾಟಕ ಪತ್ರಿಕೆಗಾಗಿ ಬರೆದ ಅಂಕಣಗಳು ಆರು ಸಂಪುಟಗಳಲ್ಲಿ ಹೊರಬಂದಿವೆ. ಪ್ರತಾಪಸಿಂಹರವರು ವಿಜಯ ಕರ್ನಾಟಕ ದಿನಪತ್ರಿಕೆಯ "ಬೆತ್ತಲೇ ಜಗತ್ತು" ಎಂಬ ಶೀರ್ಷಿಕೆಯಡಿಯಲ್ಲಿ ಅಂಕಣ ಬರಹ ಬರೆಯುತ್ತಾರೆ. ಅದರಲ್ಲಿ ಕಾಣಿಸಿಕೊಳ್ಳುವ ವಿಷಯಗಳೆಂದರೆ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಒಳನೋಟಗಳ ಬಗ್ಗೆ, ಅಪರಾಧಿ ಸ್ಥಾನದಲ್ಲಿ ಇದ್ದವರನ್ನು ಕಟಕಟೆಯಲ್ಲಿ ನಿಂತು ಯಾವರೀತಿ ವಿಚಾರಿಸುತ್ತಾರೆಯೋ ಅದೇ ರೀತಿ ಅವರ ಅಂಕಣ ಬರಹಗಳು ಕೂಡಾ ಇವೆ.

### ೩.೪ ಅಂಕಣ ಸಾಹಿತ್ಯದ ಬೆಳವಣಿಗೆ

ಕನ್ನಡ ಪತ್ರಿಕೋದ್ಯಮಕ್ಕೆ ಸುಮಾರು ಒಂದುವರೆ ಶತಮಾನಕ್ಕೂ ಮಿಗಿಲಾದ ಇತಿಹಾಸವಿದೆ. ಕನ್ನಡ ಮೊಟ್ಟ ಮೊದಲನೆ ಪತ್ರಿಕೆಯಿಂದರೆ "ಮಂಗಳೂರು ಸಮಾಚಾರ" ಕನ್ನಡದ ಮೊದಲ ಪತ್ರಿಕೆ ಈ ಪತ್ರಿಕೆಯ ಪ್ರಕಟಣೆ ಪ್ರಾರಂಭವಾದದ್ದು ೧೮೪೩ ಜುಲೈ ೧ ಜರ್ಮನಿಯ ಕ್ರೈಸ್ತ ಧರ್ಮ ಪ್ರಚಾರಕರಾಗಿದ್ದ ಹರ್ಮನ್ ಫೆಡ್ರಿಕ್ ಮೋಗ್ಲಿಂಗ್ ಈ ಪತ್ರಿಕೆಯ ಸಂಪಾದಕರಾಗಿದ್ದರು. ಪ್ರತಿ ವರ್ಷ ಕರ್ನಾಟಕದಲ್ಲಿ ಮಂಗಳೂರು ಸಮಾಚಾರ ಪತ್ರಿಕೆಯ ಸ್ಮರಣಾರ್ಥವಾಗಿ ಜುಲೈ ೧ ರಂದು ಪತ್ರಿಕಾ ದಿನಾಚರಣೆಗೆ ಆಚರಿಸಲಾಗಿದೆ.

ಯೂರೋಪಿನಲ್ಲಿ ಮೊದಲು ಮುದ್ರಣ ಕಲೆ ಅವಿಷ್ಕಾರಗೊಂಡಿತು ಇದಾದನಂತರ ಸುಮಾರು ಕ್ರಿ.ಶ. ೧೫೫೦ರಲ್ಲಿ ಈ ಮುದ್ರಣ ಪದ್ಧತಿ ಭಾರತಕ್ಕೆ ಕ್ರೈಸ್ತಪಾದ್ರಿಗಳ ಮೂಲಕ ಅಡಿಇಟ್ಟಿತು. ಮೊದಲಿಗೆ ಗೋವಾದಲ್ಲಿ ಪೋರ್ಚಗೀಸ ಕ್ರೈಸ್ತಪಾದ್ರಿಗಳು ೧೦೫೦ರಲ್ಲಿ ಸಂತ ಝೇವಿಯರನ "ಡಾಕ್ಟ್ರಿನ್ ಕ್ರಿಸ್ತ" ಗ್ರಂಥವನ್ನು ಮುದ್ರಿಸಿದರು. ಪಾದಿಗಳ ಮುಖ್ಯ ಉದ್ದೇಶವು ಭಾರತದಲ್ಲಿ ಕ್ರೈಸ್ತಧರ್ಮ ಪ್ರಚಾರ ಮಾಡುವದಾಗಿತ್ತು. ಸ್ಥಳಿಯ ಭಾಷೆಗಳೆ ಜನರು ಬಳಸುತ್ತಿದ್ದ ಭಾಷೆಗಳನ್ನು ಆಯ್ದುಕೊಂಡರು ಬಲುಬೇಗ ಕ್ರಿಸ್ತನ ಉಪದೇಶ ಆರಂಭದಲ್ಲಿ ಕರಪತ್ರ ಇತ್ಯಾದಿಗಳ

ಮುದ್ರಣಕ್ಕೆ ಸ್ಥಳಿಯ ಭಾಷೆಗಳಲ್ಲಿ ಮುದ್ರಣತಂತ್ರಜ್ಞಾನ ರೂಪಿಸಬೇಕಾದ ಅನಿವಾರ್ಯತೆಯನ್ನು ಅವರು ಕಂಡುಕೊಂಡರು. ಕನ್ನಡ ಲೀಪಿಯ ಮೊಳೆಗಳ ತಯಾರಿಕೆಯಲ್ಲಿ ಮೊದಲು ತೊಡಗಿಸಿಕೊಂಡವರು ಗೋನ್ಸಾಲಿಸ್"[೨೨]

"ಶ್ರೀರಾಮಪುರದ ಮುದ್ರಣಾಲಯವೊಂದರಲ್ಲಿ ಮೊದಲಕನ್ನಡದ ಪುಸ್ತಕ ಮುದ್ರಣ ಗೊಂಡಿತು. ಕ್ರಿ.ಶ. ೧೮೧೭ ರಲ್ಲಿ ಮುದ್ರಣಗೊಂಡ ಈ ಪುಸ್ತಕದ ಹೆಸರು "A grammer of the Karnataka Language"[೨೩] ಇದರ ಕರ್ತೃ ವಿಲಿಯಂ ಕೇಲಿ ಬೈಬಲ್‌ನ ಕನ್ನಡ ಅನುವಾದವು ೧೮೨೩ ರಲ್ಲಿ ಬಂಗಾಳದಲ್ಲಿ ಮುದ್ರಣಗೊಂಡಿತು.

ಇದೇ ಕಾಲದಲ್ಲಿ ಮದ್ರಾಸ್ ಮತ್ತು ಬಳ್ಳಾರಿಯಲ್ಲೂ ಕನ್ನಡ ಗ್ರಂಥಗಳ ಮುದ್ರಣ ಕಾರ್ಯ ನಡೆದಿತ್ತು. ೧೮೩೨ ರಲ್ಲಿ ಬೆಳಗಾವಿಯಲ್ಲಿ ಕಲ್ಲಚ್ಚಿನ ಮುದ್ರಣ ಯಂತ್ರ ಸ್ಥಾಪನೆಗೊಂಡಿತು. ಮೈಸೂರಿನ ವೆಸ್ಲಿಯನ್ ಮಿಶನ್ ಪ್ರೆಸ್ (೧೮೮೫) ಹಾಗೂ ಮಂಗಳೂರಿನಲ್ಲಿ ಬಾಸೆಲ್ ಮಿಶನ್ ಪ್ರೆಸ್ (೧೮೪೧) ಕೆಲಸ ಶುರು ಮಾಡಿದ್ದೇಕನ್ನಡ ಮುದ್ರಣ ಕಾರ್ಯ ಚಾಲನೆಯನ್ನು ಪಡೆದುಕೊಂಡಿತು.

**ಪತ್ರಿಕೋದ್ಯಮದ ಮೂರು ಘಟಕಗಳು :**

ಕನ್ನಡ ಪತ್ರಿಕೋದ್ಯಮದ ಬೆಳವಣಿಗೆಯನ್ನು ಈಕೆಳಕಂಡಂತೆ ಮೂರು ಘಟಕಗಳಲ್ಲಿ ಗುರುತಿಸಲಾಗುತ್ತದೆ. ಅವುಗಳೆಂದರೆ ;

೧. ಶೈಶಾವಸ್ಥೆ –ಪ್ರಯೋಗಗಳಕಾಲ (೧೮೪೩–೧೯೦೦)

೨. ಸ್ವಾತಂತ್ರ್ಯ ಪೂರ್ವ ಪತ್ರಿಕೋದ್ಯಮ – ಅಭಿವೃದ್ಧಿ

೩. ಸ್ವಾತಂತ್ರ್ಯೋತ್ತರ ಕನ್ನಡ ಪತ್ರಿಕೋದ್ಯಮ (೧೯೪೭–೨೦೦೦)

ಮೊದಲ ಘಟ್ಟದಲ್ಲಿ ಸಾಹಸವೊಂದೇ ಬಂಡವಾಳ ಮುದ್ರಣ ಸೌಕರ್ಯ, ಮುದ್ರಣ, ಕಾಗದ, ಟೆಲಿಫೋನ, ರಸ್ತೆ ಸಾರಿಗೆ ಸೌಕರ್ಯಗಳ ಲಭ್ಯವಿಲ್ಲದ ಕಾಲಘಟ್ಟವಿದು.

---

೨೨. ಡಾ. ಶ್ರೀನಿವಾಸ ಹಾವನೂರ ಹೊಸಗನ್ನಡ – ಅರುಣೋದಯ, ಸಾಹಿತ್ಯ, ಪು.೩೫.
೨೩. ಜಿ.ಎಸ್. ರಂಗನಾಥ – ಪತ್ರಿಕೋದ್ಯಮ ಪರಿಷ್ಕೃತ ಸಮಗ್ರ ಸಂಪುಟ ಪು. ೧೨೮.

ಮೊದಲ ಪತ್ರಿಕೆ 'ಮಂಗಳೂರು ಸಮಾಚಾರ' ಪತ್ರಿಕೆಯ ಒಡೆತನದ ಬಗ್ಗೆ ಸರಿಯಾದ ಮಾಹಿತಿಗಳಿಲ್ಲ. ಪತ್ರಿಕೆ ಬಾಸೆಲ್ ಮಿಶನ್ ಒಡೆತನಕ್ಕೆ ಸೇರಿತ್ತೆಂಬುವ ಮಾತಿದೆ. ಊರ ವರ್ತಮಾನ, ಸರಕಾರಿ ನಿರೂಪಗಳು / ಕಾನೂನು ಸುಬುದ್ಧಿಯನ್ನು ಹೇಳುವ ಸಾಮತಿಗಳು, ಹಾಡುಗಳು, ಕತೆಗಳು, ಸರ್ವ ರಾಜ್ಯ ವರ್ತಮಾನಗಳು ಮೊದಲಾದವುಗಳ ಪ್ರಕಟಣೆ ತನ್ನ ಉದ್ದೇಶವೆಂದು ಮಂಗಳೂರು ಸಮಾಚಾರ ಪತ್ರಿಕೆಯ ಮೊದಲ ಸಂಚಿಕೆಯಲ್ಲಿ ಸಂಪಾದಕ ಅರಿಕೆ ಮಾಡಿಕೊಂಡಿದ್ದಾರೆ. ಕನ್ನಡ ಭಾಗಗಳನ್ನು ತಲುಪುವ ಉದ್ದೇಶದಿಂದ 'ಕನ್ನಡ ಸಮಾಚಾರ' ಅಗಿ ಬಳ್ಳಾರಿಗೆ ಸ್ಥಳಾಂತರಗೊಂಡಿತು.

ಕನ್ನಡದಲ್ಲಿ ಪತ್ರಿಕಾ ವ್ಯವಸಾಯವು ೧೮೬೦ ರ ವೇಳೆಗೆ ನಿಯಮಿತವಾಗಿ ಆರಂಭವಾಯಿತು. ೧೮೬೦-೧೮೭೦ರ ದಶಕದಲ್ಲಿ ಹಲವಾರು ಪತ್ರಿಕೆಗಳು ಪ್ರಾರಂಭವಾದವು. ಅವುಗಳು ಈ ಕೆಳಗಿನಂತಿವೆ.

೧. ಅರುಣೋದಯ ೧೮೬೨ ಬೆಂಗಳೂರು. ಸಂ. ಬಿ.ಎಚ್. ರೈಸ್.

೨. ಬೆಳಗಾವಿ ಸಮಾಚಾರ ೧೮೬೪.

೩. ಮಠಪತ್ರಿಕೆ೦೧೮೬೫ ಸಂಪಾದಕ ಡೆಪ್ಯೂಟಿ ಚೆನ್ನಬಸಪ್ಪ.

೪. ವೃತ್ತಾಂತ ಚಿಂತಾಮಣಿ -೧೮೮೫ ಸಂ. ವೆಂಕಟಕೃಷ್ಣಯ್ಯ

೫. ಜೀವನ ಶಿಕ್ಷಣ

೬. ವಿದ್ಯಾದಾಯಿನಿ

೭. ಸಾಧ್ವಿ-೧೯೦೯ ಸಂ. ವೆಂಕಟಕೃಷ್ಣಯ್ಯ

೮. ಧನಂಜಯ

೧೦. ಧನುರ್ಧಾರಿ-೧೯೦೬ ಸಂ. ಹಡೇಕರ ಮಂಜಪ್ಪ ದಾವಣಗೇರೆ.

೧೧. ಜ್ಞಾನ ಬೋಧಕ-೧೮೬೧ ಧಾರವಾಡ. ಸಂ. ವೆಂಕಟರಂಗೋಕಟ್ಟಿ

೧೨. ಧಾರವಾಡ ವೃತ್ತ ೧೮೭೨ ಧಾರವಾಡ.

೧೩. ನ್ಯಾಯ ಸಂಗ್ರಹ–೧೮೬೮ ಸಂ. ಉಭಯ ಗೋಪಾಪ ಕೃಷ್ಣಯ್ಯ.

೧೪. ಶಿವಾನುಭವ–೧೯೨೬ ಫ.ಗು.ಹಳಕಟ್ಟಿ.

೧೫. ಕೊಡಗು–೧೯೨೧ ಸಂ. ಪಂದ್ಯಂಡ ಬೆಳ್ಳಿಯಪ್ಪ

೧೬. ನವಕರ್ನಾಟಕ–೧೯೨೭ ಫ.ಗು. ಹಳಕಟ್ಟಿ

೧೭. ಕಂಠೀರವ–೧೯೧೯ ಬೋಳಾರ ವೆಂಕಟರಾಯರು.

**ಮೊದಲ ವಾರ ಪತ್ರಿಕೆ :**

ಕನ್ನಡದ ಮೊಟ್ಟ ಮೊದಲ ವಾರ ಪತ್ರಿಕೆ 'ಮೈಸೂರು ವೃತ್ತಾಂತ ಬೋಧನಿ'೧೯೫೯ ರಲ್ಲಿ ಪ್ರಕಟವಾಯಿತು. ಭಾಷ್ಯಂತಿರುಮಲಾಚಾರ್ಯ ಇದರ ಸಂಪಾದಕರು. ಇವರ ಮಗ ಭಷ್ಯಾಚಾರ್ಯ ನಿರ್ವಾಹಕರಾಗಿದ್ದರು. ೧೮೬೪ ರಲ್ಲಿ ಈ ಪತ್ರಿಕೆ ಪ್ರಕಟಣೆ ನಿಂತು ಹೋಯಿತು. ಪರಿಷ್ಕೃತ ಸಮಗ್ರ ಸಂಪುಟ ಪತ್ರಿಕೋದ್ಯಮ ಪು.೧೩೦.

೧೮೬೫ ರಲ್ಲಿ ತಂದೆ ಮಕ್ಕಳು ಇಬ್ಬರು ಸೇರಿ 'ಕರ್ನಾಟಕ ಪ್ರಕಾಶಿಕಾ' ಎಂಬ ಪಕ್ಷ ಪತ್ರಿಕೆ ಆರಂಭಿಸಿದರು.ಇದು ೧೮೬೮ ರಲ್ಲಿ ನಿಂತು ಹೋಯಿತು. ೧೮೬೧ ರ ಜ್ಞಾನಬೋಧಕ ಧಾರವಾಡದಲ್ಲಿ ಪ್ರಾರಂಭವಾಯಿತು. ಇವರ ಸಂಪಾದಕರು ಯಾರೋ ತಿಳಿಯದು.

೧೮೬೨ ರಲ್ಲಿ ಬಂಗಳೂರಿನ 'ಅರುಣೋದಯ' ಮಾಸಪತ್ರಿಕೆ ಶುರುವಾದರೆ ಮಂಗಳೂರಿನಿಂದ ವಿಚಿತ್ರ ವರ್ತಮಾನ ಸಂಗ್ರಹ ಎಂಬ ಪಕ್ಷ ಪತ್ರಿಕೆ ಶುರುವಾಯಿತು. ಕಿಟೆಲ್ ಮತ್ತು ಮ್ಯಾಕ್ ಇದರ ಸಂಪಾದಕರಾಗಿದ್ದರು. ೧೮೬೫ ರಲ್ಲಿ ಡೆಪ್ಯೂಟಿ ಚೆನ್ನಬಸಪ್ಪನವರು ಸಂಪಾದಕರಾಗಿದ್ದ 'ಮಠಪತ್ರಿಕೆ' ೧೮೬೭ ರ ಏಪ್ರಿಲ್‌ನಲ್ಲಿ 'ಶಾಲಾ ಪತ್ರಕ" ಎಂದಾಯಿತು. ೧೯೨೯ ರ ಇಂಗ್ಲೀಷ್ ಹಾಗೂ ಕನ್ನಡ ಎರಡೂ ಭಾಷೆಗಳಲ್ಲಿ ಪ್ರಾರಂಭವಾಯಿತು. ಎಲ್. ರಿಕೆಟ್ಸ್ ಇದರ ಸಂಪಾದಕ ೧೮೬೮ ರಲ್ಲಿ ಮಂಗಳೂರಿನ ಬಾಸೆಲ್ ಮಿಷನ್ 'ಸಭಾ ಪತ್ರ ಎಂಬ ಪತ್ರಿಕೆ ಆರಂಭಿಸಿದರು. ೧೮೬೮ ರಲ್ಲಿ ಮಂಗಳುರಿನ ಉಭಯ ಗೋಪಾಲ ಕೃಷ್ಣಯ್ಯ 'ನ್ಯಾಯ

ಸಂಗ್ರಹ' ಎಂಬ ಪಕ್ಷ ಪತ್ರಕೆ ಪ್ರಾರಂಭಿಸಿದರು.ಇದು ಕನ್ನಡದ ಮೊಟ್ಟ ಮೊದಲ ನ್ಯಾಯ ಶಾಸ್ತ್ರ ಕುರಿತ ಪತ್ರಿಕೆ. ೧೮೭೧ ರಲ್ಲಿ ಮಂಗಳೂರಿನಿಂದ 'ಸಂಬೋಧಿನಿ' ಎಂಬ ಪತ್ರಿಕೆ ಪ್ರಾರಂಭಿಸಿದರು. ಇದರ ಸಂಪಾದಕರು ಎಂ.ಬಿ. ಶ್ರೀನಿವಾಸ ಅಯ್ಯಂಗಾರ ಮತ್ತು ಖ್ಯಾತ ಕಾದಂಬರಿಕಾರರಾದ ಎಂ. ಎಸ್. ಪುಟ್ಟಣ್ಣನವರು ೧೮೮೩ ರಿಂದ ಎಂ. ವೆಂಕಟಯ್ಯನವರು ಈಪತ್ರಿಕೆಯ ಸಂಪಾದಕರು. ಜನರ ತಿಳುವಳಿಎಕ ಹೆಚ್ಚಿಸುವುದೇ ತನ್ನ ಗುರಿ ಎಂದು 'ಹಿತಬೋಧಿನಿ' ಮೊದಲ ಸಂಚಿಕೆಯಲ್ಲಿ ಘೋಷಿಸಿಕೊಂಡಿತು.

"ಮುಂಬಯಿ ಕರ್ನಾಟಕದ ಮೊದಲಪತ್ರಿಕೆ ಎನ್ನಲಾದ 'ಹಿತೇಚ್ಛು' ೧೮೭೦ ರಲ್ಲಿ ಬೆಳಗಾವಿಯಲ್ಲಿ ಪ್ರಾರಂಭವಾಯಿತು. ೧೮೮೯ ರಲ್ಲಿ ಧಾರವಾಡದಲ್ಲಿ 'ಲೋಕಬಂಧು' ಶುರುವಾಯಿತು. ಮೈಸೂರು ರಂಗರಾಯ ಎಂಬುವರು ಈಪತ್ರಿಕೆಯ ಸಂಪಾದಕರಾಗಿದ್ದರು."[೨೪]

ಕನ್ನಡದ ಮೊದಲ ಸಾಹಿತ್ಯಕ ಮತ್ತು ವೈಜ್ಞಾನಿಕ ಪತ್ರಿಕೆಯಾದ 'ಕರ್ನಾಟಕ ಜ್ಞಾನಮಂಜು' ೧೮೭೮ ರಲ್ಲಿ ಪ್ರಕಟಣೆ ಆರಂಭಿಸಿತು. ಕರ್ನಾಟಕ ವೈಭವ ೧೮೯೨ ದೇಶಾಭಿಮಾನ ೧೮೯೪ ಕನ್ನಡ ನಡೆಗನ್ನಡಿ (೧೮೯೩) ಸತ್ಯದೀಪಿಕೆ(೧೮೯೬) ಶಿವಮೊಗ್ಗ ವೃತ್ತಾಂತ (೧೮೯೯) ಇವು ೧೯೦೦ ಕ್ಕೂ ಮುಂದೆ ಪ್ರಕಟಣೆಯಾದ ಪತ್ರಿಕೆಗಳು. ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ಅಂಕಣ ಸಾಹಿತ್ಯವೂ ಕೂಡ ಒಂದು ಪ್ರಕಾರವಾಗಿದೆ. ಆಧುನಿಕಪ್ರಾರಂಭದ ಹೆಜ್ಜೆಗುರುತುಗಳನ್ನು ಗುರತುತಿಸುತ್ತ ಶಂಕರ ಪಾಟೀಲರು ಹೀಗೆ ಹೇಳಿದ್ದಾರೆ. ಅಧುನಿಕ ಕನ್ನಡ ಸಾಹಿತ್ಯ ಮತ್ತು ಕನ್ನಡ ಪತ್ರಿಕೋದ್ಯಮಗಳ ಇತಿಹಾಸಗಳು ಜೊತೆ ಜೊತೆಯಾಗಿ ಬೆಳೆದು ಬಂದಿವೆ.

ಗಂಗಾಧರ ಭಟ್ಟಾಚಾರ್ಯ ಅವರ ಬೆಂಗಾಲ್ ಗೆಜೆಟ್‌ನಿಂದ ಆರಂಭಿಸಿ ಸ್ವಾತಂತ್ರ್ಯ ಹೋರಾಟಕ್ಕೆ ಉಸಿರಾದ ಪತ್ರಿಕೆಗಳು ಸಾರ್ವಜನಿಕ ಅಭಿಪ್ರಾಯಕ್ಕೆ ವೇದಿಕೆಯಾಗಿಯೇನಡೆದುಕೊಂಡು ಬಂದಿವೆ. ಬುದ್ಧಿ ಜೀವಿಗಳಿಗೂ ಜನಜೀವನಕ್ಕೂನಮ್ಮ ಪತ್ರಿಕೆಗಳಿಗೂಇರುವ ಅಂತರ ನಮ್ಮನ್ನು ಯೋಚನೆಗೀಡು ಮಾಡಬೇಕು. ಪತ್ರಿಕೆಗಳು ಸಾರ್ವಜನಿಕ ಅಭಿಪ್ರಾಯಕ್ಕೆ ವೇದಿಕೆಯಾಗಿಯೇ ನಡೆದುಕೊಂಡು ಬಂದಿವೆ. ಬುದ್ಧಿ ಜೀವಿಗಳಿಗೂ ಜನಜೀವನಕ್ಕೂನಮ್ಮ ಪತ್ರಿಕೆಗಳಿಗೂ ಇರುವ ಅಂತರ ನಮ್ಮನ್ನು ಯೊಚನೆಗೀಡು ಮಾಡಬೇಕು.

---

೨೪. ಡಾ. ನಾಡಿಗ ಕೃಷ್ಣಮೂರ್ತಿ, ಕರ್ನಾಟಕ ಪರಂಪರೆ, ಪು.೪೧೩.

"ಪತ್ರಿಕೆಗಳು ಸಾರ್ವಜನಿಕ ಅಭಿಪ್ರಾಯವನ್ನು ರೂಇಸುವ ರೀತಿ ಗೊತ್ತಿದ್ದರಿಂದಲೇ ನಾಯಕರುಗಳಿಗೆ ತಮ್ಮ ದೃಷ್ಟಿಕೋನಕ್ಕೆ ಜನ ಮನ್ನಣೆ ಪಡೆಯಲು ಪತ್ರಿಕೆ ಪರಿಣಾಮಕಾರಿ ಸಾಧನೆಯಾಗಿತ್ತು. ಹಲವು ನಾಯಕರುಗಳಿಗೆ ತಮ್ಮದೇ ಆದ ಪತ್ರಿಕೆಗಳು ಇದ್ದಂತೆ ಇತರೆ ಹಲವು ನಾಯಕರ ದೃಷ್ಟಿಕೋನವನ್ನು ಬೆಂಬಲಿಸಲು ಅನೇಕ ಪತ್ರಿಕೆಗಳು ಮುಂದೆ ಬಂದವು. ಕ್ರಿಶ್ಚಿಯನ್ ಮಶಿನರಿಗಳ ಕನ್ನಡ ಸುವಾರ್ತಕ ಕರ್ನಾಟಕ ಪತ್ರಿಕೆ, ಬಾಲಪತ್ರ ಕ್ರೈಸ್ತ ಸಭಾಪತ್ರ ಹೀಗೆ ಹಲವು ಹೆಸರುಗಳಿಂದ ಪ್ರಕಟಗೊಂಡ ಅಂದಿನ ಪತ್ರಿಕೆಗಳು ಸಾಹಿತ್ಯದ ವಿವಿಧ ಪ್ರಕಾರಗಳನ್ನು ಪೋಷಿಸಿಕೊಂಡು ಬಂದಿವೆ. ಬಿ.ಎಲ್. ರೈಸ್, ಜಾನ್ ಎಫ್. ಪ್ಲೀಟ ಕಿಟೆಲ್ ಹರ್ಮನ್ ಮೊಗ್ಲಿಂಗ್ ಮೊದಲಾದ ಮಿಷಿನರಿಗಳು ಕನ್ನಡಕ್ಕೆ ಕೊಟ್ಟ ಕೊಡುಗೆ ಅಪಾರ."[೨೫] ಕಾಲ ಶತಮಾನಗಳವರೆಗೆ ಕನ್ನಡಿಗರ ಸಮಸ್ಯೆಗಳಿಗೆ ಸ್ಪಂಧಿಸಿಇಂದಿಗೂ ಮುಂದುವರೆದುಕೊಂಡು ಬಂದ ಪತ್ರಿಕೆಗಳೆಂದರೆ, ಕನ್ನಡ ಪ್ರಭ, ಪ್ರಜಾವಾಣಿ, ಸಂಯುಕ್ತ ಕರ್ನಾಟಕ ಮೊದಲಾದವು. ಆಧುನಿಕತೆಯ ಅವಶ್ಯಕತೆಗೆ ತಕ್ಕಂತೆ ವಿನ್ಯಾಸವನ್ನು ಅಳವಡಿಸಿಕೊಂಡು ಸಾಹಿತ್ಯ ಸೃಷ್ಟಿಗೆ ಮುಖ್ಯ ಭೂಮಿಕೆಯನ್ನು ಒದಗಿಸಿವೆ. ಬ್ರಿಟಿಷರ ದಬ್ಬಾಳಿಕೆಯನ್ನು ವಿರೋಧಿಸುವ ಆಂದೋಲನದಲ್ಲಿ ಪ್ರಾಂತಭೇಧ ಮರೆತು ಪತ್ರಿಕೆಗಳು ಕೆಲಸ ಮಾಡಿವೆ.

"ವಿಶಾಲ ರಾಷ್ಟ್ರೀಯ ಮನೋಭಾವನೆ, ಗಾಂಧೀವಾದ, ಕೇಂದ್ರ ಹಾಗೂ ರಾಜ್ಯ ಸುದ್ಧಿಗಳ ಜೊತೆಗೆ ಪ್ರಾದೇಶಿಕತೆಯನ್ನು ಮೈಗೂಡಿಸಿಕೊಂಡು ಸಮಸ್ಯೆ, ಸಾಹಿತ್ಯ-ಸಂಸ್ಕೃತಿಗೆ ಸ್ಪಂಧಿಸಿದ ಪತ್ರಿಕೆಗಳು ಇವು. ಉತ್ತರ ಕರ್ನಾಟಕದಲ್ಲಿ ಕರ್ನಾಟಕ ವೃತ್ತ ಮತ್ತು ಧನಂಜಯ, ರಾಜಹಂಸ, ಕನ್ನಡ ಕೇಸರಿ (ಹುಬ್ಬಳ್ಳಿ ೧೯೦೭) ಚಂದ್ರೋದಯ (ಧಾರವಾಡ ೧೯೧೩) ಶುಭೋದಯ (ಧಾರವಾಡ ೧೯೧೯) ಕರ್ಮವೀರ (ಧಾರವಾಡ ೧೯೨೧) ನವೀನ ಭಾರತ (ಬಾಗಲಕೋಟ ೧೯೨೭) ವಾಗ್ಭೂಷಣ ಮೊದಲಾದ ಪತ್ರಿಕೆಗಳಲ್ಲಿ ನಾಡು-ನುಡಿಯ ಬಗೆಗೆ ಕಾಣಿಸಿಕೊಂಡ ಅಭಿಮಾನದ ದಕ್ಷಿಣದ ಪತ್ರಿಕೆಗಳಲ್ಲೂ ಕಾಣಿಸಿಕೊಂಡಿವೆ. ಮಂಗಳೂರಿನ ಕಂಠೀರವ (೧೯೧೯) ಭಕ್ತಿ ಸಂದೇಶ (೧೯೧೮), ರಾಷ್ಟ್ರಬಂಧು (೧೯೨೮), ಕನ್ನಡ ಕೋಗಿಲೆ (೧೯೧೭), ಕುಂದಾಪುರದಿಂದ ವಸಂತ (೧೯೨೫), ಮಂಗಳೂರಿನಿಂದ ನವಯುಗ (೧೯೨೧), ಹೀಗೆ

---

೨೫. ಡಾ. ನಾಡಿಗ ಕೃಷ್ಣಮೂರ್ತಿ ಕರ್ನಾಟಕ ಪರಂಪರೆ ಪು.೪೧೫, ಸಂಪುಟ.೭

ಖ್ಯಾತ ಕನ್ನಡಿಗರಿಂದ ರಾಷ್ಟ್ರೀಯಜಾಗೃತಿಗಾಗಿ ಪತ್ರಿಕೆಗಳು ಹುಟ್ಟಿಕೊಂಡಿರುವುದನ್ನು ಶಂಕರ ಪಾಟೀಲರು ಕನ್ನಡ ಸಾಹಿತ್ಯದ ಬೆಳವಣಿಗೆ ಹಾಗೂ ಪತ್ರಿಕೋದ್ಯಮ ಎಂಬ ಲೇಖನದಲ್ಲಿ ವಿವರಿಸಿದ್ದಾರೆ."[೨೭]

ವರ್ತಮಾನ ಪತ್ರಿಕೆಯಲ್ಲಿ ಉದಯವಾಣಿ, ಸಂಯುಕ್ತ ಕರ್ನಾಟಕ, ಕನ್ನಡ ಪ್ರಭ, ಪ್ರಜಾವಾಣಿ ದಿನಪತ್ರಿಕೆಗಳು, ಸುಧಾ, ಪ್ರಪಂಚ, ತರಂಗ, ಕರ್ಮವೀರ, ಕರ್ನಾಟಕ ಬಂಧು, ಜನಪ್ರಗತಿ, ಜ್ವಾಲಾಮುಖಿ, ಜನಜೀವಾಳ, ನವ ಕರ್ನಾಟಕ, ನವ ಭಾರತ, ನವಯುಗ, 'ಅಗ್ನಿ' ಮೊದಲಾದ ವಾರ ಪತ್ರಿಕೆಗಳು, ತುಷಾರ, ಮಲ್ಲಿಗೆ, ಮಯೂರ, ಕಸ್ತೂರಿ, ಕೊರವಂಜಿ, ಗೀತಾಮಿತ್ರ, ಚೇತನ, ಸ್ಫೂರ್ತಿ, ಜಯಕರ್ನಾಟಕ, ಜಯಂತ ಜೀವನ, ಜೀವನ ಶಿಕ್ಷಣ, ಕನ್ನಡ ನುಡಿ, ತಾಯಿನುಡಿ, ಪುಸ್ತಕ ಪ್ರಪಂಚ,ಪ್ರಬುದ್ಧ ಕರ್ನಾಟಕ, ಸಿದ್ಧಗಂಗಾ ಸುಬೋಧ ಇಂಚರ ಮೊದಲಾದ ಮಾಸ ಪತ್ರಿಕೆಗಳು ಅಂಕಣ ಬರಹಗಳ ಹುಟ್ಟಿಗೆ ಕಾರಣವಾಗಿವೆ. ಮಠ ಮಾನ್ಯಗಳಿಂದ ಹೊರಬರುತ್ತಿರುವ ಪತ್ರಿಕೆಗಳು ಅಂಕಣ ಲೇಖನಗಳನ್ನು ಒಳಗೊಂಡಿವೆ.

"ಡಾ. ನಿರಂಜನ ವಾನಳ್ಳಿಯವರು ಕೊರವಂಜಿ, ಪುಸ್ತಕ ಪ್ರಪಂಚ, ನವಚೇತನ ಶಕ್ತಿ, ಭಿನ್ನಹ, ವಿನೋದ, ಹಂಸ, ಕತಾ ಸಂಗ್ರಹ, ಆಶಾ ಜ್ಯೋತಿ, ಲೇಖಕ ಸಾಹಿತ್ಯಕ ಪತ್ರಿಕೆಗಳನ್ನು ೧೯೪೧ ರಿಂದ ೧೯೫೦ ರ ಸಾಕ್ಷಿ, ಮನ್ವಂತರ, ಸಂಕ್ರಮಣ, ಸಮೀಕ್ಷಕ ಪ್ರಜ್ಞೆ, ಸಮನ್ವಯ, ಚಇಗುರೆಲೆ, ಮುಂಗಾರು ಪರಂಪರೆ, ಕನಾಟಕ ಭಾರತೀಯ ಅಕಾವ್ಯ, ದಲಿತ ವರ್ತಮಾನ, ಮಣ್ಣಿನ ಬದುಕು, ಶೂದ್ರ, ಒಡನಾಡಿ, ಪುಸ್ತಕ ಪುರವಣಿ, ಬದುಕು (೧೯೫೭–೯೩) ಗ್ರಂಥಲೋಕ, ಅಲೋಕ, ಅಂಕಣ ಲಹರಿ, ಮೊದಲಾದ ಪತ್ರಿಕೆಗಳ ಕುರಿತು ವಿವರಿಸಿದ್ದಾರೆ. ನಿರಂಜನ ವಾನಳ್ಳಿಯವರ ದಿನ, ವಾರ ಪತ್ರಿಕೆಗಳ ವಿವರ ಮಾಹಿತಿಯಲ್ಲಿ ಅಂಕಣದ ಕುರಿತು ವಿವರ ಮಾಹಿತಿಗಳನ್ನು ಜಿ.ಎನ್.ಮೋಹನ ಮಾಧ್ಯಮ ಮತ್ತು ಸ್ವಾತಂತ್ರ್ಯ ಪು.೨೪ ಅಂಕಣ ಕುರಿತು ಹೆಚ್ಚಿನ ಆಸಕ್ತಿ ಮೂಡಿಸುತ್ತದೆ."[೨೮] ಡಾ. ಸರೋಜನಿ ಚಾವಲಾರರು ಸಂಪಾದಕೀಯ ಮತ್ತು ಅಂಕಣ ಬರಹಗಳನಡುವಿನ ಅಂತರ ಕುರಿತು ಹೇಳುತ್ತ ಪ್ರತಿಯೊಬ್ಬ ಅಂಕಣ ಬರಹಗಾರನು ಇತ್ತ ಸಂಪಾದಕನೂ ಇಲ್ಲದ ಅತ್ತ ಓದುಗನಷ್ಟೇ ಅಲ್ಲದ ಒಂದು ವಿಶಿಷ್ಟ ಸ್ಥಾನವನ್ನು ಪಡೆದಿದ್ದಾನೆ.

೨೭. ಸಂ.ಹಾಮನಾ–ಚಿನ್ನದ ಗರಿ (ಕ.ಪತ್ರಿಕೋದ್ಯಮ ಸಮಸ್ಯೆಗಳು) ಪು.೨೭೦
೨೮. ಡಾ. ಸುರೇಶ ಕೆರಮಗಿ–ಕನ್ನಡದಲ್ಲಿ ಅಂಕಣ ಸಾಹಿತ್ಯ. ಪು. ೬

ಪತ್ರಿಕೆಯ ಸ್ವತಂತ್ರ ಅಭಿಪ್ರಾಯ ಸಂಪಾದಕೀಯ ಇದರ ಮೂಲಕ ಯಾವುದೇ ವಿಷಯದ ಬಗೆಗೆ ಖಚಿತ ಅಭಿಪ್ರಾಯ ಕೊಡುವವನು ಸಂಪಾದಕ. ಓದುಗಳಿಗೂ ಅಭಿಪ್ರಾಯ ವ್ಯಕ್ತ ಮಾಡುವ ಅವಕಾಶವಿದೆ.

"ಪ್ರಾಜ್ಞ ಓದುಗನ ಅಭಿಪ್ರಾಯವು ಓಲೆಗಳ ಮಊೂಲಕ ಪ್ರಕಟವಾಗುತ್ತದೆ. ಅಂಕಣಕಾರನು ಸಂಪಾದಕನ ಅಭಿಪ್ರಾಯಗಳಿಗೆ ಭಿನ್ನವಾಗಿ ಬರೆಯಬಹುದಾದರೂ ಅವನಿಗೆ ವಿಶಿಷ್ಟ ಗೌರವವಿದೆ. ಇವನುತನ್ನ ನಿಯಮಿತವಾಗಿರುವ ಅವಕಾಶದ ಪರಿಮಿತಿಯಲ್ಲಿ ನಿಖರವಾಗಿ, ನಿರ್ಧಿಷ್ಟವಾಗಿ ಹೇಳಬಲ್ಲ ಸಾಮರ್ಥ್ಯವುಳ್ಳವನಾಗಿದ್ದಾನೆ. ಅವನ ಶೈಲಿಯೂ ವ್ಯಕ್ತಿಗತ ಸಾಧನೆ, ಗಂಭೀರವಾಗಿರ ಬಲ್ಲದು. ವ್ಯಂಗ್ಯವಾಗಿಯೂ, ಇರಬಹುದು, ಅವನಿಗೆ ವಿಷಯದ ನಿರ್ಭಂಧವಿಲ್ಲ. ಯಾವುದೇ ವಿಷಯ ವ್ಯಕ್ತಿ ಅಥವಾ ಘಟನೆಗಳನ್ನು ಕುರಿತು ಅವನು ಚಿಂತಿಸಬಲ್ಲ. ಅದು ಆಯಾ ಪರಿಸರದ ಧ್ವನಿಯಾಗಿ ನಿಲ್ಲುತ್ತದೆ ಎಂದಿದ್ದಾರೆ. ಪ್ರಬುದ್ಧ ಕರ್ನಾಟಕದೊಂದಿಗೆ ಸಂಪರ್ಕವಿರಿಸಿಕೊಂಡ ಕುವೆಂಪು, ಸ್ವಧರ್ಮ ಹಾಗೂ ಜೀವನ ಪತ್ರಿಕೆಗಳೊಂದಿಗೆ ಸಂಪರ್ಕವಿರಿಸಿಕೊಂಡ ಬೇಂದ್ರೆಯವರು ಸಾಹಿತ್ಯ ಕೃಷಿ ಒಂದು ವಿಧವಾದರೆಸ್ವತಃ ಪತ್ರಿಕೆಗಳನ್ನು ನಡೆಸಿ ಅಂಕಣ ಬರಹಗಳಿಗೆ ಸಾಹಿತ್ಯಿಕ ಸ್ಪರ್ಶ ಕೊಟ್ಟಿದ್ದು ಇನ್ನೊಂದು ವಿಧ."[೨೮] "ವಸಂತ ಪತ್ರಿಕೆಯ ಕಾರಂತ, ಜೀವನ ಪತ್ರಿಕೆಯ ಮಾಸ್ತಿಯವರು, ಜಯಂತ ಪತ್ರಿಕೆಯ ಬಟಗೇರಿ ಕೃಷ್ಣ ಶರ್ಮ ಸಾಕ್ಷಿಪತ್ರಿಕೆಯ ಗೋಪಾಲಕೃಷ್ಣ ಅಡಿಗ, ರುಜುವಾತು ಪತ್ರಿಕೆಯ ಯು.ಆರ್. ಅನಂತಮೂರ್ತಿ, ಲಂಕೇಶಪತ್ರಿಕೆಯ ಪಿ.ಲಂಕೇಶ, ಸಂಕ್ರಮಣ ಪತ್ರಿಕೆಯ ಚಂದ್ರಶೇಖರ ಪಾಟೀಲ, ತರಂಗ ವಾರಪತ್ರಿಕೆಯ ಬಿ.ವಿ. ವೈಕುಂಠರಾಜು, ಶೂದ್ರಪತ್ರಿಕೆಯ ಶೂದ್ರ ಶ್ರೀನಿವಾಸ ಮೊದಲಾದವರ ಅಂಕಣ ಬರಹಗಳು ಗಮನಾರ್ಹವಾಗಿವೆ. ಇವರಲ್ಲಿ ಪಿ. ಲಂಕೇಶ ಶೂದ್ರ ಶ್ರೀನಿವಾಸ, ಬಿ.ವಿ. ವೈಕುಂಠರಾಜು ಅವರ ಅಂಕಣ ಬರಹಗಳು ತನಿಖಾ ಮಾದರಿಯ ಬರಹಗಳಾಗಿ ಬಂದಿವೆ. ಕನ್ನಡ ಅಂಕಣ ಬರಹದಲ್ಲಿ ಸಿದ್ಧ ಹಸ್ತರೆಂದೆ ಖ್ಯಾತರಾದ ದಿವಂಗತ ಸಿದ್ದವನ ಹಳ್ಳಿ ಕರಷ್ಣ ಶರ್ಮರಿಂದ ಅನೇಕರು ಪ್ರಭಾವಿತರಾಗಿದ್ದಾರೆ. ಅವರುಗಳಲ್ಲಿ ಹಾಮಾನಾ ಮೊದಲಾದವರೆಂದು ಗುರುತಿಸಬಹುದು."[೨೮]

---

೨೮. ಡಾ.ಸುರೇಂದ್ರ ಕುಮಾರ ಕೆರಮಗಿ–ಕನ್ನಡ ಅಂಕಣ ಸಾಹಿತ್ಯ ಪು. ೬, ೭ ಸರೋಜನಿ ಚವಲಾರ ಸನೂತನ ಪು.೧೦,೧೨.

"ಡಾ ಎಚ್ಚೆಸ್ಕೆ ಅವರು ಕೃಷ್ಣ ಶರ್ಮರ ಕುರಿತು ಬರೆಯುತ್ತ ಜಯ ಕರ್ನಾಟಕದಿಂದ ವಿಶ್ವ ಕರ್ನಾಟಕದವರೆಗೆ ಸಿದ್ಧವನ ಹಳ್ಳಿ ಕೃಷ್ಣ ಶರ್ಮರ ಪತ್ರಿಕೋದ್ಯಮ ವಿಸ್ತಾರ. ಆ ಶರ್ಮರ ಬರವಣಿಗೆ ಬೋಗೆಣೆಯುವ ಜನಪಾತವಾದರೆ, ಈ ಶರ್ಮರ ಲೇಖನಿಗೆ ಸಾಣಿಯ ಹುತ ಎಮದಿರುವುದು ಮಹತ್ವದ್ದಾಗಿದೆ."[೨೯] ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಕೃಷ್ಣ ಶರ್ಮರು ತಮ್ಮ ರಚನಾ ಶೈಲಿಯಲ್ಲಿ ಸಾತ್ವಿಕತೆ, ಗಾಂಧಿವಾದದ ದಟ್ಟ ಪ್ರಭಾವ ಇರುವುದನ್ನು ಅವರ ಪ್ರತಿ ಅಂಕಣದಲ್ಲಿ ಗುರುತಿಸುತ್ತೇವೆ. ಸತ್ಯ ಪ್ರೇಮ, ಅಹಿಂಸೆ, ಮಾನವತೆ ಇವೆ ಮೊದಲಾದವುಗಳೆಲ್ಲವು ಸ್ವಾತಂತ್ರ್ಯನಂತರ ದೇಶದಲ್ಲಿ ನಾಡಿನಲ್ಲಿ ಅಲ್ಲಲ್ಲಿ ತಲೆದೋರಿದ್ದ ಅನೈತಿಕತೆ, ಕೋಮುಗಲಭೆ, ರಾಷ್ಟ್ರಾಭಿವೃದ್ಧಿ ಕಾರ್ಯದಲ್ಲಿ ಉದ್ಭವಿಸುತ್ತಿದ್ದ ತೊಂದರೆ ತಾಪತ್ರಯಗಳು ಸಿದ್ಧವನ ಹಳ್ಳಿ ಕರಷ್ಣ ಶರ್ಮರ ಅಂಕಣ ಬರಹಗಳಲ್ಲಿ ಕಾಣಬಹುದು. ವಾಹಿನಿ : ಸಂಯುಕ್ತ ಕರ್ನಾಟಕ, ಕರ್ಮವೀರ ಪತ್ರಿಕೆಗಳಲ್ಲಿ ಪ್ರಕಟವಾದ ಅಂಕಣ ಬರಹಗಳಕನ್ನಡ ಕಣ, ಚಿಂತನ-ಮಂಥನ ಶೀರ್ಷಿಕೆಯಡಿ ಪ್ರಕಟವಗಿವೆ. "ಏನಾದರೂ ಉಂಡು ಹೇಗೋ ಬದುಕುವುದು ಬಹಳರಾಸೆ, ಸ್ವತಂತ್ರವನ್ನು ಉಂಡು ಬದುಕುವುದು ಕೆಲವರಾಸೆ"[೩೦] ಇದು ಬೇಂದ್ರೆ, ಗಾಂಧೀಜಿಯವರ ಬಗ್ಗೆ ಬರೆದಿದ್ದು, ಆದರೆ ಅದು ಕೃಷ್ಣ ಶರ್ಮರಿಗೆ ಅನ್ವಯಿಸುತ್ತದೆ.

ಪ್ರಜಾವಾಣಿಯಲ್ಲಿ 'ಭೂಬಾಣ' ಅಂಕಣ ಬರಹಗಳಿಂದ ಹೆಸರಾದ ಟಿ.ಎಸ್. ರಾಮಚಂದ್ರರಾಯರ ಅಂಕಣ ಬರವಣಿಗೆ ಕನ್ನಡ ಪತ್ರಿಕೋದ್ಯಮದಲ್ಲಿ ಇತಿಹಾಸ ನಿರ್ಮಿಸಿದೆ.

ಖ್ಯಾತ ಅಂಕಣಕಾರ ಟಿ.ಎಸ್. ರಾಮಚಂದ್ರರಾವ್ ಕುರಿತು ಎಚ್ಚೆಸ್ಕೆ ಹೀಗೆ ಹೇಳಿದ್ದಾರೆ– "ಕಿತ್ತಳೆ ರಂಗು ಕಣ್ಣುಗಳ ಹೊಳಪು ಮುಖದಲ್ಲಿ ಅವರ ನಗೆ ತೆಳು ದೇಹ ಬಲು ಚುರುಕು, ಅಪರಿಚಿತರ ಆಗುಂತಕರ ಸಂಕೋಚದ ತೆರೆಯನ್ನು ಕಳಚಿ ಬಿಸಾಡಿ, ಅರೆ ನಿಮಿಷದ್ಲೆ ಅವರೊಂದಿಗೆ ಆತ್ಮಿಯತೆ ಸಾಧಿಸುವ ಹದ ಹುಟ್ಟುಗುಣ ಟಿಯೆಸ್ಸಾರ ಅವರದು"[೩೧] ಆತ್ಮ ವಿಶ್ವಾಸ ಪ್ರಜಾವಾಣಿ ಕನ್ನಡ ದಿನಪತ್ರಿಕೆಪ್ರಾರಂಭ (೧೯೪೮) ವಾದ ಎರಡೇ ವರ್ಷಗಳಲ್ಲಿ ಅದರ ಸಂಪಾದಕರಾಗಿ ಅನೇಕ ವಿಕ್ರಮಗಳನ್ನು ಸಾಧಿಸಿದರು. ಮುದ್ರಣ ವಿನ್ಯಾಸ ಸುದ್ದಿ ಸಂಪಾದನೆ ಸಂಪಾದಕೀಯ ಪುರವಣಿ, ವಾಚಕರ ವಾಣಿ, ವಿಶೇಷ ಲೇಖನ ಮುಂತಾದ ಹಲವು ಕ್ಷೇತ್ರಗಳಲ್ಲಿ ಕೈಯಾಡಿಸಿದ್ದಾರೆ.

---

೨೯. ಹಾ.ಮಾ.ನಾಯಕ-ಸಾಹಿತ್ಯ ಸಲ್ಲಾಪ ಪು.೫
೩೦. ಡಾ.ಸುರೇಂದ್ರಕೆರಮಗಿ – ಕನ್ನಡ ಅಂಕಣ ಸಾಹಿತ್ಯ ಪು.೧೦.
೩೧. ಎಚ್ಚೆಸ್ಕೆ – ಬೆಳಕು ಚೆಲ್ಲಿದ ಬದುಕು ಪು.೭೭

ಅಂಕಣ ಸಾಹಿತ್ಯದಲ್ಲಿ ಕೃಷಿಗೈದ ಪ್ರಾಂಬದ ಬರಹಗಾರರಲ್ಲಿ ಜಿ.ಪಿ. ರಾಜರತ್ನಂ ಅವರು ಪ್ರಮುಖರು. ಅವರ ಅಂಕಣ ಬರಹಗಳು ಚಿಂತನಾಯುಕ್ತವಾಗಿವೆ. 'ವಿಚಾರವಾಹಿನಿ' ವಿಚಾರ ತರಂಗಗಳು ಕನ್ನಡ ಅಂಕಣ ಸಾಹಿತ್ಯಕ್ಕೆ ಅಪರೂಪದ ಕೊಡುಗೆಗಳಾಗಿವೆ.

ಸುಧಾ ಪತ್ರಿಕೆಯಲ್ಲಿ 'ಭ್ರಮರ' ಎಂಬ ಶೀರ್ಷಿಕೆಯಡಿ ಬರೆಯುತ್ತಿದ್ದ ರಾಜರತ್ನಂ ರ ಅಂಕಣ ಬರಹಗಳು ಗಾತ್ರದಲ್ಲಿ ಚಿಕ್ಕದಾದರೂ ಪರಿಣಾಮದಲ್ಲಿ ಪ್ರಖರವಾಗಿ ಮಿಂಚಿನ ಸೆಳೆತಗಳಾಗಿ ತೋರುತ್ತವೆ.

ತ.ರಾ.ಸುಬ್ಬರಾವ ಅವರ ಅಂಕಣ ಬರಹಗಳ ಸಂಕಲನ 'ತೋಚಿದು-ಗೀಚಿದ್ದು' ಕನ್ನಡ ಚಳುವಳಿ, ಕರ್ನಾಟಕ ಏಕೀಕರಣ, ಪ್ರಚಲಿತ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುತ್ತದೆ.ಕಾಸರಗೋಡನ್ನು ಪ್ರತ್ಯೇಕ ಜಿಲ್ಲೆಯಾಗಿ ಮಾಡುವ ಕೇರಳದ ಯತ್ನವನ್ನು ತ.ರಾ.ಸುಬ್ಬರಾವ ಅಂಕಣ ಬರಹಗಳಲ್ಲಿ ಖಂಡಿಸಿದ್ದಾರೆ.

ಪ್ರಗತಿಶೀಲ ಸಾಹಿತ್ಯದ ಖ್ಯಾತ ಅ.ನ.ಕೃಷ್ಣಮೂರ್ತಿ, ತ.ರಾ.ಸುಬ್ಬರಾವ ಖಾದ್ರಿ ಶಾಮನಾಡಿಗ ಕೃಷ್ಣಮೂರ್ತಿ, ಅರ್ಚಕ ವೆಂಕಟೇಶಮೊದಲಾದವರಿಗೆ ಸಿದ್ದವನಹಳ್ಳಿ ಕೃಷ್ಣ ಶರ್ಮರೇ ಗುರುವಾಗಿದ್ದಾರೆ. ಶರ್ಮರ ಮೋಡಿಗೆ ಒಳಗಾಗಿ ಅಧ್ಯಾತ್ಮಕ, ರಾಜಕೀಯ, ಸಾಹಿತ್ಯ ಶಿಕ್ಷಣ, ಪ್ರಜಾಪ್ರಭುತ್ವ, ಸರ್ವೋದಯದ ಬಗ್ಗೆ ಚಿಂತನೆ ಹಚ್ಚಿಕೊಂಡದ್ದನ್ನು ಸಿ.ಕೈ. ವ್ಯಕ್ತಿ-ಶಕ್ತಿ ಕೃತಿಯಿಂದ ಅರಿಯಬಹುದಾಗಿದೆ.

ಕನ್ನಡದಲ್ಲಿ ಅಂಕಣ ಸಾಹಿತ್ಯದ ಇತಿಹಾಸವನ್ನು ಗಮನಿಸುವಾಗ ಪ್ರಗತಿಶೀಲ ಸಾಹಿತ್ಯದಲ್ಲಿಹೆಸರು ಮಾಡಿದ ಬಸವರಾಜಕಟ್ಟಿಮನಿ, ಪ್ರಮುಖರಾಗಿದ್ದಾರೆ. ಕುಂದರ ನಾಡಿನ ರೈತ ಜನಾಂಗದ ಹೆಮ್ಮೆ ಅವರಲ್ಲಿ ಮನೆ ಮಾಡಿದೆ. ಬೆಳಗಾವಿಯ ಮಲಾ ಮರಡಿಯ ಮಣ್ಣಿನಗುಣ ಅವರ ದಿಟ್ಟ ಹೆಜ್ಜೆಗಳಿಗೆ ಕಾರಣವಾಗಿದೆ.ಕಥೆ ಕಾದಂಬರಿಗಳಿಗೆ ಹೆಸರಾದಂತೆ ಕಟ್ಟಿಮನಿಯವರು ಪತ್ರಿಕಾ ಬರಹಗಳಲ್ಲೂ ಹೆಸರು ವಾಸಿಯಾಗಿದ್ದಾರೆ. ಶಾಸಕ, ಸಾಹಿತಿಯಾಗಿ ಹೆಸರು ವಾಸಿಯಾಗಿದ್ದಾರೆ. 'ಪ್ರಜಾಮತ' ಪತ್ರಿಕೆಯಲ್ಲಿ ಕಟ್ಟಿಮನಿಯವರು 'ಮಾನಸ ಸರೋವರ' ಶೀರ್ಷಿಕೆಯಡಿಯಲ್ಲಿ ಅಂಕಣ ಬರಹವನ್ನು ನಿಯತವಾಗಿಬರೆದು ಪ್ರಕಟಿಸಿದ್ದಾರೆ.

ತ.ರಾ.ಸುಬ್ಬರಾವ  ಹಾಗೂ ಅ.ನ.ಕೃಷ್ಣರಾವ ಮೊದಲಾದ ಪ್ರಗತಿಶೀಲ ವಿಚಾರಧಾರೆಯಂತೆ ಖಾದ್ರಿ ಶಾಮಣ್ಣ ತಮ್ಮ ಸಮಾಜವಾದಿ ವಿಚಾರಧಾರೆಯಿಂದ ಕನ್ನಡಿಗರ ಮನೆ ಮಾತಾಗಿದ್ದಾರೆ. ಅಂಕಣ ಸಾಹಿತ್ಯದ ಇತಹಾಸದಲ್ಲಿ ದೀರ್ಘ ಕಾಲದಿಂದ ಪತ್ರಿಕೆಗಳಲ್ಲಿ ಅಂಕಣ ಸಾಹಿತ್ಯ ರಚಿಸಿ ಹೆಸರು ಪಡೆದ ಖ್ಯಾತರಲ್ಲಿ ಪ್ರಪಂಚದಲ್ಲಿ ಪಾಟೀಲ ಪುಟ್ಟಪ್ಪ ಲೋಕಾಭಿರಾಯದ ಕು.ಶಿ.ಹರಿದಾಸ ಭಟ್ಟ, ವಿಚಾರ ಪ್ರೀಯ, ಸಮದರ್ಶಿಗಳ ಎಚ್ಚೆಸ್ಕೆ ಸಂಪತಿಯ ಹಾಮನಾಯಕ, ಸಮ್ಮುಖದ ಕೀರ್ತಿನಾಥ ಕುರ್ತಕೋಟಿ ಪ್ರಮುಖರಾಗಿದ್ದಾರೆ.

ಅಂಕಣ ಸಾಹಿತ್ಯದ ಇತಿಹಾಸದಲ್ಲಿ ದಾಖಲೆ ನಿರ್ಮಿಸಿದ ಎಚ್ಚೆಸ್ಕೆ ವೃತ್ತಿ ನಿರತ ಬರಹಗಾರ, ಪತ್ರಿಕಾ ವೃತ್ತಿಯೇ ಅವರ ಸರ್ವಸ್ವ.  ಅವರು ಬರೆದಿರುವ ಅಂಕಣ ಬರಹಗಳ ಪದಗಳಿರಲಿ, ಪುಟಗಳನ್ನು ಸಹ ಲೆಕ್ಕ ಹಾಕುವುದು ಕಷ್ಟ ಸಾಧ್ಯ ಎಂದಿದಾರೆ.  ಹಾ.ಮಾ. ನಾಯಕರು ಎಚ್ಚೆಸ್ಕೆಯವರಿಗೆ ಆದರ್ಶ ಗುರು "ಬಿ.ಎಂ.ಶ್ರೀಯವರು. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ಜಾಣಪರೀಕ್ಷೆಗೆ ಕುಳಿತಾಗ ಪ್ರಥಮ ದರ್ಜೆಯಲ್ಲಿ ಪಾಸಾದರು. ಪ್ರಮಾಣಪತ್ರ ವಿತರಣಾ ಸಮಾರಂಭದಲ್ಲಿ ಬಿ.ಎಂ.ಶ್ರೀ ಅಧ್ಯಕ್ಷತೆ ಸ್ಥಾನ ವಹಿಸಿದ್ದರು. ಅವರು ಪ್ರಮಾಣಪತ್ರ ವಿತರಿಸಿ ಹರಸಿದ್ದನ್ನು ನೆನೆದು ರೋಮಾಂಚನಗೊಂಡರು. ನಂತರ ವೇದಿಕೆಯಿಂದ ಇಳಿದು ಬಂದು ಬೆನ್ನು ತಟ್ಟಿ ಕನ್ನಡಕ್ಕಾಗಿಕೆಲಸ ಮಾಡಬೇಕು ನಿನ್ನಿಂದ ಬಹಳ  ನಿರೀಕ್ಷಿಸುತ್ತೇನೆ"[೩೧] ಎಂದರು. ಈಮಾತಿಗೆ ನಾನು ಆ ರಾತ್ರಿ ನಿದ್ದೇಯನ್ನೇ ಮಾಡಲಿಲ್ಲ ಎನ್ನುತ್ತಾರೆ ಎಚ್ಚೆಸ್ಕೆ. ಬಿ.ಎಂ.ಶ್ರೀ ಅವರ ನಿರೀಕ್ಷೆಯನ್ನು ಹುಸಿಗೊಳಿಸಲಿಲ್ಲ ಬರೆಯುವುದನ್ನು ಅವರು ಪವಿತ್ರವಾದ ಕರ್ತವ್ಯವೆಂದು ಭಾವಿಸಿದರು. ಇಂದು ಎಚ್ಚೆಸ್ಕೆಯವರು ಹೊರತಂದ ಬೃಹತ್ ಅಂಕಣ ಬರಹಗಳ ಸಂಪುಟಗಳೇ ನಮ್ಮ ಮುಂದಿವೆ. ಸಮದರ್ಶಿಗಳಾಗಿ ಎಚ್ಚೆಸ್ಕೆ ಸುಧಾದಲ್ಲಿಅಂಕಣ ಬರಹಗಳನ್ನು ಬರೆದಿದ್ದಾರೆ. 'ಬೆಳಕು ಚೆಲ್ಲಿದ ಬದುಕು' ಮಾನ್ಯರು ಸಾಮಾನ್ಯರ ಹಾಗೂ ಗಗನ ಚಿಕ್ಕಿ ಶೀರ್ಷಿಕೆಯಡಿ ಎಚ್ಚೆಸ್ಕೆ ಅಂಕಣ ಬರಹಗಳನ್ನು ಕನ್ನಡ ಸಾರಸತ್ವ ಲೋಕಕ್ಕೆ ಅರ್ಪಿಸಿದ್ದಾರೆ. ರವಿ ಬೆಳಗೆರೆಯವರ 'ಹಾಯ್ ಬೆಂಗಳೂರು' ಪತ್ರಿಕೆಯಲ್ಲಿ 'ಬಾಟಂ ಐಟಂ ಶೀರ್ಷಿಕೆಯಡಿ ಅಂಕಣ ಬರಹವನ್ನು ಬರೆದು ಖ್ಯತರಾಗಿದ್ದಾರೆ. ಕನ್ನಡ ಅಂಕಣ ಸಾಹಿತ್ಯ ಬೆಳೆದು ಬಂದದ್ದು.

---

೩೧. ಸಿದ್ದವಳ್ಳಿ ಕೃಷ್ಣ ಶರ್ಮ – (ವ್ಯಕ್ತಿ ಶಕ್ತಿ)ಪು.೧೨೯.

ಅಂಕಣ ಬರಹ ಎಂದರೆ ಡಾ. ಹಾ.ಮಾ.ನಾಯಕರವರು ಅಂಕಣ ಸಾಹಿತ್ಯ ಕುರಿತುಹೀಗೆ ಹೇಳಿದ್ದಾರೆ. "ಇಂಗ್ಲೀಷಿನಲ್ಲಿ ಯಾವುದನ್ನು ಕಾಲಮ್ ರೈಟಿಂಗ್ ಎಂದು ಕರೆಯುತ್ತೆವೆಯೋ ಅದರ ಕನ್ನಡ ರೂಪವೇ ಅಂಕಣ ಬರಹವಾಗಿದೆ."[೩೨] ಕಾಲಮಿಸ್ಟ ಅಂದರೆ ಅಂಕಣಕಾರ ಎಂದರ್ಥ.

ಇಂಗ್ಲೆಂಡಿನ ಕ್ರಾಂತಿಯ ನಂತರ ಅದರ ಫಲವಾಗಿ ಮುದ್ರಣ ಯಂತ್ರ ಆವಿಷ್ಕಾರಗೊಂಡು ಪತ್ರಿಕೆಗಳು ಹುಟ್ಟಿಕೊಂಡವು. ಹಾಸ್ಯ, ವಿನೋದ,ಕ್ರಿಕೇಟ್ ಹೀಗೆ ಹಲವಾರುಪತ್ರಿಕೆಯ ವಿಷಯಗಳಾಗಿದ್ದವು. ಬ್ರಿಟಿಷರ ಆಡಳಿತದಿಂದಾಗಿ ಭಾರತೀಯರು ತಮ್ಮ ಸಾಂಪ್ರದಾಯಿಕ ಭಾವನೆಗಳನ್ನು ಬದಿಗಿರಿಸಿ ವೈಚಾರಿಕ, ವೈಜ್ಞಾನಿಕ ಭಾವನೆಗಳನ್ನು ಬೆಳೆಸಿಕೊಳ್ಳಲು ಪ್ರಾರಂಭಿಸಿದರು. ಶಿಕ್ಷಣದಂತೆ ಪತ್ರಿಕೆಗಳು ಬೆಳಕಿಗೆ ಬರಲು ಕಾರಣವಾಯಿತು. ಹಿಂದೆ ವೇದಗಳ ಕಾಲದಲ್ಲಿ ಸಂಸ್ಕೃತ ಭಾಷೆ ಬರೀ ಪಂಡಿತರ ಸೊತ್ತಾಗಿತ್ತು. ಬರಬರುತ್ತಾ ವಚನಗಳುಬಂದವು. ಅವು ಜನ ಸಮ್ಮುಖವಾದವು. ಹಾಗೆ ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ರೂಪಾಂತರವಾಗಿ ಶ್ರೀ ಸಾಮಾನ್ಯರ ಭಾಷೆಯಾಗಿ ಹೊಸಗನ್ನಡ ಸಾಹಿತ್ಯ ಪ್ರಚಲಿತಕ್ಕೆ ಬಂತು. ಅದು ಜನ ಸಮ್ಮುಖವಾಯಿತು.

ಆಧುನಿಕ ಕನ್ನಡ ಸಾಹಿತ್ಯ ಮತ್ತು ಕನ್ನಡ ಪತ್ರಿಕೋದ್ಯಮಗಳ ಇತಿಹಾಸಗಳು ಜೊತೆ ಜೊತೆಯಾಗಿ ಬೆಳೆದವು. ೧೮೪೩ ರಲ್ಲಿ ಮಂಗಳೂರು ಮಿಷನರಿಗಳ ಮುಖ ಪತ್ರವಾದ "ಕನ್ನಡ ಸಮಾಚಾರ ಮೊದಲ ಕನ್ನಡ ಪತ್ರಿಕೆ ಕನ್ನಡಪತ್ರಿಕೋದ್ಯಮ ಒಂದು ಮಟ್ಟಕ್ಕೆ ಬೆಳೆಯತೊಡಗಿತು. ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿಯೇ ವಾರಪತ್ರಿಕೆ, ಮಾಸಪತ್ರಿಕೆಗಳು ಸಾಹಿತ್ಯ ಕರಷಿ ಮಾಡಿದರೆಂದು ಶಂಕರ ಪಾಟೀಲರು ಹೇಳಿದ್ದಾರೆ."[೩೩]

"ಅಂಕಣ ಸಾಹಿತ್ಯ ಮೊದಲಿಗೆ ಲಘು ಧಾಟಿಯಲ್ಲೇ ಬೆಳೆದು ಬಂದಿತು. ಮಂಗಳೂರು ಸಮಾಚಾರದಲ್ಲಿ ಹರ್ಮನ್ ಮೊಗ್ಲಿಂಗ್ 'ನೈತಿಕ ವಿಚಾರಗಳು' ಎಂಬ ಅಂಕಣ ಬರೆದಿದ್ದರಿಂದಲೇ ಉಗಮವಾಯಿತೆನ್ನಬಹುದು. ಇಂದಿನ ಕಾಲದಲ್ಲಿ ಅಂಕಣಗಳು ರಾಜಕೀಯ ವ್ಯಕ್ತಿಗಳಂತೆ ಕೆಲಸಮಾಡುತ್ತಾರೆ. ಹಲವಾರು ವಿಷಯಗಳನ್ನು ಕುರಿತು ಚರ್ಚೆ ಮಾಡುತ್ತಾ ಅವುಗಳ ಬಗ್ಗೆ ಬರೆಯುತ್ತಾರೆ."[೩೪]

---

೩೨. ಎಚ್ಚೆಸ್ಕೆ – ಬೆಳಕು ಚೆಲ್ಲಿದು ಬದುಕು,ಪು.೫೦೫
೩೩. ಹಾ.ಮಾ.ನಾಯಕ ಸಂಪುಟ (ಅಂಕಣಕಾರರ ವೈಶಿಷ್ಟ್ಯತೆಗಳು)
೩೪. ಡಾ. ಸುರೇಂದ್ರ ಕುಮಾರ ಕೆಮಗಿ – ಕನ್ನಡ ಅಂಕಣ ಸಾಹಿತ್ಯ ಪು.೨

ನಾಡಿನ ರಾಜಕೀಯ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ರಂಗಗಳ ಆಗು ಹೋಗುಗಳನ್ನು ವಿಶ್ಲೇಷಿಸಿ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದರು. ಸರ್ಕಾರ ಮತ್ತು ಪತ್ರಿಕಾ ಮಾಲಿಕರ ಸಂಬಂಧ ಹೇಗೆ ಇರಲಿ, ಪತ್ರಿಕೆಗಳುಕಾಲದ ಅವಶ್ಯಕತೆಯನ್ನು ಪೂರೈಸಿವೆ.

ಅಂಕಣ ಬರಹಗಳು ಪತ್ರಿಕೆಯ ಒಂದು ಮುಖ್ಯ ಅಂಗವಾಗಿದೆ. ಜನಕ್ಕೆ ನೀವು ಯಾವುದಾದರೊಂದು ಮುಖ್ಯವಿಷಯ ಹೇಳಲು ಹೊರಟಿದ್ದರೆ ಅದನ್ನು ಸಂಕ್ಷಿಪ್ತದಲ್ಲಿ ಸೂಕ್ಷ್ಮ ದೃಷ್ಟಿಯಿಂದ ಜನರಿಗೆ ಮುಟ್ಟುವ ಹಾಗೆ ಬರೆಯಬೇಕು.

ಜಿ.ಎನ್. ರಂಗನಾಥರವರು ಕರ್ನಾಟಕದ ಪ್ರಮುಖಪತ್ರಿಕೆಗಳನ್ನು ಗುರುತಿಸುವಾಗ ಪ್ರಜಾವಾಣಿ, ಸಂಯುಕ್ತ ಕರ್ನಾಟಕ, ವಿಜಯವಾಣಿ, ಕನ್ನಡ ಪ್ರಭ, ಉದಯವಾಣಿ ಮೊದಲಾದ ಪತ್ರಿಕೆಗಳಲ್ಲಿ ಸುಧಾ, ತರಂಗ, ಕಸ್ತೂರಿ, ಮಯೂರ, ಮೊದಲಾದವುಗಳನ್ನು ಗಮನಿಸಿದರು.

"ಡಾ.ಸರೋಜನಿ ಚಾವ್ಲಾರವರು ಅಂಕಣ ಸಾಹಿತ್ಯದ ಸಂಬಂಧವನ್ನು ಭೂಮಿ, ಮರ, ಮತ್ತು ಬಳ್ಳಿಗಳಿಗೆ ಹೋಲಿಸಿದ್ದಾರೆ. ಒಂದು ಮರ ಭೂಮಿ ಆಳಕ್ಕೆ ತನ್ನ ಬೇರುಗಳನ್ನು ಇಳಿಸುತ್ತದೆ. ಬೇರುಹೀರಿದ್ದು ಕಾಂಡ ಸ್ವೀಕರಿಸುತ್ತದೆ. ಭೂಮಿಯೊಡನೆ ಅದರ ಸಂಬಂಧ ಮತ್ತಷ್ಟು ಗಟ್ಟಿಕೊಳ್ಳುತ್ತದೆ. ಹೆಮ್ಮರವಾಗಿ ಬೆಳೆದ ಮರ ಎಲ್ಲಿಂದಲೋ ಬಂದ ಮೋಡಗಳನ್ನು ಆಕರ್ಷಿಸಿ ಮಳೆಗರೆದು ಭೂಮಿಯನ್ನು ತಂಪಾಗಿಸುತ್ತದೆ. ಪತ್ರಿಕೆಯನ್ನಾಧರಿಸಿದ ಅಂಕಣ ಸಾಹಿತ್ಯ ದೇಶದ ಆಗು ಹೋಗುಗಳನ್ನು ಪ್ರಕ್ರಿಯಿಸುತ್ತದೆ."[೩೫]

ಅಂಕಣಕಾರನ ಬವಣೆಯನ್ನು ಹಾ.ಮಾ.ನಾಯಕರ ಈ ವಿವರಣೆಯಲ್ಲಿ ಕಂಡುಕೊಳ್ಳ ಬಹುದಾಗಿದೆ. ಆಶುಭಾಷಣದಂತೆ ಅಂಕಣಕಾರ ತಕ್ಷಣದ ಅವಶ್ಯಕತೆಗೆ ತಕ್ಕಂತೆ ವಿಷಯವನ್ನು ನಿರೂಪಿಸಬೇಕು. ಎಲ್ಲ ವಿಷಯಗಳಲ್ಲಿ ಪರಿಣಿತ ಭಾವನೆಗಳನ್ನು ವ್ಯಕ್ತಪಡಿಸಬೇಕು.ಇದು ಎಲ್ಲ ಅಂಕಣ ಬರಹಗಾರರಿಗೂ ಅನ್ವಯಿಸುತ್ತದೆ.

**೩.೫ ಉಪಸಂಹಾರ :**

ಕನ್ನಡದಲ್ಲಿ ಅಂಕಣ ಬರಹಗಳಿಂದ ಖ್ಯಾತರಾದ ಅನೇಕ ಅಂಕಣಕಾರರಿದ್ದಾರೆ. ಯುಗಧರ್ಮ, ಸಮಾಜಕ್ಕೆ ತಕ್ಕಂತೆ ಹೆಚ್ಚು ಸೂಕ್ಷ್ಮ ಸಂವೇದನಾಶೀಲ ಮನಸ್ಸುಗಳುಳ್ಳ ಲೇಖಕರು

೩೫. ಸರೋಜನಿ ಚಾವ್ಲಾರ – ಸನೂತನ ಪು. ೧೨

ಪತ್ರಿಕೆಗಳಲ್ಲಿ ಸ್ಥಿತ ಶೀರ್ಷಿಕೆಯಡಿ ನಿರಂತರವಾಗಿ ಬರೆಯುತ್ತಲೇ ಬಂದಿದ್ದಾರೆ. ನವೋದಯ, ಪ್ರಗತಿಶೀಲ, ನವ್ಯ, ನವೋತ್ತರ, ದಲಿತ, ಬಂಡಾಯ ಘಟ್ಟಗಳಲ್ಲಿ ಕನ್ನಡದ ಅಂಕಣಕಾರರು ವರ್ತಮಾನದ ಅವಶ್ಯಕತೆಗೆ ತಕ್ಕಂತೆ ಅಂಕಣ ಬರಹಗಳನ್ನು ರಚಿಸಿದ್ದಾರೆ. ಅವರ ಅಂಕಣಗಳಲ್ಲಿ ಲಘು ಬಿಗಿಯನ್ನು ಕಾಣಬಹುದು.

ಈ ರೀತಿಯಾಗಿ ಅಂಕಣ ಸಾಹಿತಿಗಳ ಬೆಳವಣಿಗೆ ನೋಡುತ್ತಲೇ ಬಂದಿದ್ದೇವೆ. ಅನೇಕ ಅಂಕಣಕಾರರಿಂದ ಬರೆಯಲ್ಪಟ್ಟ ವಿಭಿನ್ನ ಅಂಕಣಗಳನ್ನು ನಾವುನೋಡುತ್ತೇವೆ.ಇದರಲ್ಲಿ ಮಹಿಳಾ ಸಾಹಿತಿಗಳನ್ನು ಕಾಣುತ್ತೇವೆ. ಪ್ರಮುಖವಾಗಿ ವಿಜಯಾ ದಬ್ಬೆ, ವೈದೇಹಿ, ಆರ್. ಪೂರ್ಣಿಮಾರವರ ಸಾಕಷ್ಟು ಪ್ರಗತಿಯನ್ನು ಕಾಣುತ್ತೇವೆ.

'ಒಟ್ಟಿನಲ್ಲಿ ಕನ್ನಡದಲ್ಲಿ ಅಂಕಣ ಬರಹಗಳು ಪ್ರಬಂಧದ ಒಡಲಿನಿಂದ ಹುಟ್ಟಿದ ಬಣ್ಣ ಬಣ್ಣದ ತುರಾಯಿಗಳಂತಿವೆ. ಚಿಕ್ಕ ಚಿಕ್ಕ ವೇಷ ತೊಟ್ಟುಪತ್ರಿಕೆಗಳಮುಖಾಂತರ ಲಕ್ಷಾಂತರ ಓದುಗರ ಮನೆ ಬಾಗಿಲಿಗೆ ತಲುಪುವ ಅಂಕಣ ಬರಹಗಳು ಇಂದಿನ ಜನಾಂಗದ ಅಗತ್ಯಕ್ಕೆ ತಕ್ಕಂತಿವೆ. ಉಲ್ಲಾಸದಾಯಕವಾಗಿವೆ.

# ಅಧ್ಯಾಯ-4

# ರಾಜಶೇಖರ ಹತಗುಂದಿಯವರ ಅಂಕಣ ಬರಹಗಳು

4.1 ಪ್ರಚಲಿತ ರಾಜಕೀಯ ವಿದ್ಯಮಾನಗಳು

4.2 ಸಾಮಾಜಿಕ ವಿಚಾರಗಳು

4.3 ಸಾಹಿತ್ಯ ಕಲೆ

4.4 ಸಾಂಸ್ಕೃತಿಕ ಅಂಶಗಳು

4.5 ವ್ಯಕ್ತಿ ಚಿತ್ರಣ

## ಅಧ್ಯಾಯ – ೪

## ರಾಜಶೇಖರ ಹತಗುಂದಿಯವರ ಅಂಕಣ ಬರಹಗಳು

ರಾಜಶೇಖರ ಹತಗುಂದಿಯವರು "ಬಯಲು ಹುಡಿ" ಮತ್ತು "ಎಡ ಹೊತ್ತಿನ ಪಯಣ" ಎಂಬ ಎರಡು ಅಂಕಣ ಕೃತಿಗಳನ್ನು ಪ್ರಕಟಿಸಿದ್ದಾರೆ ಅವುಗಳಲ್ಲಿ ರಾಜಕೀಯ ಸಾಹಿತ್ಯಿಕ, ಸಾಂಸ್ಕೃತಿಕ, ಸಾಮಾಜಿಕ ಮೊದಲಾದ ವಿಚಾರಗಳನ್ನು ಕುರಿತು ಬರೆದಿದ್ದಾರೆ.

ರಾಜಶೇಖರ ಹತಗುಂದಿಯವರ ಬರವಣಿಗೆಯಲ್ಲಿ ಒಂದು ಅದ್ಭುತ, ಅಗಾಧವಾದಂತಹ ಶಕ್ತಿ ಇದೆ ಎಂದು ಹೇಳಬಹುದು. ಇವರ ಬರವಣಿಗೆ ಓದುಗರ ಬೆಳವಣಿಗೆಯ ಜೊತೆ ಜೊತೆಗೆ ಗಾಢವಾದ ವೈಚಾರಿಕ ವಿಶ್ಲೇಷಣೆಯಲ್ಲಿ ತೊಡಗಿಸುತ್ತದೆ.

ಇವರು ರಾಜಕೀಯ ವ್ಯಕ್ತಿಗಳ ಬಗ್ಗೆಯೂ ಅಷ್ಟೇ ಸ್ಪಷ್ಟವಾಗಿ, ಕಠೋರ ಮತ್ತು ನೇರವಾಗಿ ಬರೆಯುತ್ತಾರೆ. ಇವರು ಯಾರಿಗಾದರೂ ಹೆದರಿ, ಬೆದರಿ ಬರೆಯುವವರಲ್ಲಿ ಇವರ ಬರವಣಿಗೆ ಸಮಾಜದ ಜನತೆ ಮೇಲೆ ದೇಶದ ಜನರ ಮೇಲೆ ಬಹಳಷ್ಟು ಪ್ರಭಾವ ಬೀರಿದೆ ಎನ್ನಬಹುದು.

**೧. ಪ್ರಚಲಿತ ರಾಜಕೀಯ ವಿದ್ಯಮಾನಗಳು :**

ಚುನಾವಣೆ ಹತ್ತಿರ ಬಂದಂತೆ ರಾಜಕೀಯ ಪಕ್ಷಗಳು ಚುನಾವಣೆ ಸಿದ್ಧತೆ ನಡೆಸುತ್ತಾರೆ. ಸಿದ್ಧತೆ ಎಂದರೇನು ? ಹಣದ ವ್ಯವಸ್ಥೆ ಮಾಡಿಕೊಳ್ಳುವುದು. ಹಣದ ವ್ಯವಸ್ಥೆ ಮಾಡಿಕೊಳ್ಳುವುದು ಅಯ್ಯೋ! ಚುನಾವಣೆ ಅಂದ್ರೆ ಸುಮ್ನೇನಾ...? ಏನಿಲ್ಲವೆಂದರೂ ಒಂದು ಕೋಟಿ ಬೇಕು. ಪಾರ್ಟಿ ಫಂಡ ನಂಬ್ಕೊಂಡು ಕುಂತ್ರೆ ಅಗ್ತದಾ ? ಎಂದು ಚುನಾವಣೆ ಕಣಕ್ಕಿಳೀಸುವ ಪ್ರತಿ ಅಭ್ಯರ್ಥಿ ರಾಗ ಎಳೆಯುತ್ತಾನೆ.

ಅಂದರೆ ದುಡ್ಡಿದ್ದ ವ್ಯಕ್ತಿ ಮಾತ್ರ ಚುನಾವಣೆಗೆ ಸ್ಪರ್ಧಿಸಬಹುದು. ಏಕೆಂದರೆ ಸಾಮಾನ್ಯ ಜನರ ಹತ್ತಿರ ಇಷ್ಟೊಂದು ದುಡ್ಡು ಇರುವದಿಲ್ಲ. ಆತ ಪ್ರತಿನಿಧಿಸಲು ಸಾಧ್ಯವಿಲ್ಲ. ಪಾರ್ಟಿ ಫಂಡಿಗಿಂತಲೂ ಹೆಚ್ಚಿನ ಖರ್ಚನ್ನು ಮಾಡುತ್ತಾರೆ.

ಹಾಗೆ ನೋಡಿದರೆ ಕರ್ನಾಟಕ ಪ್ರಬುದ್ಧ ಮತದಾರರನ್ನು ಹೊಂದಿದೆ. ಹಣಕಾಸು ಹಣದ ಹೊಳೆ ಹರಿಸಿ ಚುನಾವಣೆ ಗೆದ್ದೇ ತೀರುತ್ತೇನೆಂದವರಿಗೆಲ್ಲ 'ಮತದಾರರು ಹಲವು ಬಾರಿಪಾಠಕಲಿಸಿದ್ದಾರೆ. ೧೯೭೧ ರ ಕಾಲ ದಿ॥ ದೇವರಾಜ ಅರಸು ಇಂದಿರಾ ಕಾಂಗ್ರೆಸ್‌ನ ನೊಗ ಹೊತ್ತಿದ್ದರು. ನಿಜಲಿಂಗಪ್ಪ, ವೀರೇಂದ್ರ ಪಾಟೀಲರಂಥ ಅತಿರಥ ಮಹಾರಥರು ಸಂಸ್ಥಾ ಕಾಂಗ್ರೆಸ್‌ನ ಮುಂಚೂಣಿಯಲ್ಲಿದ್ದರು ೧೯೭೨ ರ ಚುನಾವಣೆಯಲ್ಲಿ ಯಶಸ್ವಿಯಾದದ್ದಕ್ಕೆ ಇಂದಿರಾ ಅಲೆ ಇಪ್ಪತ್ತು ಅಂಶಗಳ ಕಾರ್ಯಕ್ರಮಕ್ಕೆ ಕಾರಣವಾಯಿತು. ತುರ್ತು ಪರಿಸ್ಥಿತಿಯ ದೆಸೆಯಿಂದ ಉತ್ತರ ರಾಜ್ಯಗಳಲ್ಲಿ ಇಂದಿರಾ ಕಾಂಗ್ರೆಸ್ ಜನಪ್ರೀಯತೆ ಕಳೆದುಕೊಳ್ಳುವಂತಾಗಿತ್ತು. ತುರ್ತು ಪರಿಸ್ಥಿತಿಯ ಕರಾಳ ಚಾಯೆ ಹಬ್ಬಿತ್ತು. ಕಾಂಗ್ರೆಸ್ ವಿರೋಧಿ ಅರಸು ಕೊಚ್ಚಿ ಹೋಗಬಹುದೆಂದು ಭಾವಿಸಲಾಗಿತ್ತು. ಅರಸು ವಿರುದ್ಧದ ಭ್ರಷ್ಟಾಚಾರದ ಅರೋಪಗಳು ಅವರಿಗೆ ಮತ್ತ್ಯಾವತ್ತು ಅಧಿಕಾರ ನಾಯಕತ್ವಕ್ಕೆ ವಿಚಿತ್ರ ಎಂದರೆ ೧೯೭೮ ರಲ್ಲಿ ಅರಸು ನೇತ್ರತ್ವಕ್ಕೆ ಮುನ್ನನೆ ದೊರೆಯಿತು. ೧೯೮೦ ರ ಲೋಕಸಭಾ ಚುನಾವಣೆಯಲ್ಲಿ ಇಂದಿರಾ ಕಾಂಗ್ರೆಸ್ ಗೆಲವು ಸಾಧಿಸಿತ್ತು. ೧೯೮೫ರ ಚುನಾವಣೆಯಲ್ಲಿ ಜನತಾ ಪಕ್ಷಕ್ಕೆ ಸರಳ ಬಹುಮತ ನೀಡಿದ ೮೯ ರ ಚುನಾವಣೆಯಲ್ಲಿ ಹಣವನ್ನು ನೀರಿನಂತೆ ಖರ್ಚು ಮಾಡಿದರು. ಅದರೆ ಜನ ಅದನ್ನು ಕಾಲ ಕಸಕ್ಕಿಂತ ಕಡೆಯಾಗಿ ಕಂಡರು.

ಕರ್ನಾಟಕದ ಮತದಾರ ಬರೀ ಹಣ, ಹೆಂಡ ಜಾತಿ ನೋಡಿ ತೀರ್ಪು ನೀಡಿದ ನಿರ್ದೇಶನಗಳೇ ವಿರಳ. ಬಡವರ ಪಕ್ಷವೆನಿಸಿದ ಕಾಂಗ್ರೆಸ್ ಜನ ಸಾಮಾನ್ಯರ ಸ್ನೇಹಿಯಾಗಲು ಈಗಲೂ ಅವಕಾಶವಿದೆ. ಅದರೆ ಆ ಪಕ್ಷದ ಮುಖಂಡರು ಒಬ್ಬರ ಕಾಲು ಇನ್ನೊಬ್ಬರು ಪರಸ್ಪರ ಎಳೆಯುತ್ತಿದ್ದಾರೆ. ಎಲ್ಲ ರಂಗಗಳಲ್ಲಿ ಮಹಿಳಾ ಮೀಸಲಾತಿ ಜಾರಿಗೊಳಿಸಬೇಕೆಂಬ ಮಾತುಗಳು ಕೇಳಿ ಬರುತ್ತವೆ. ಈ ನಿಟ್ಟಿನಲ್ಲಿ ಗಂಭೀರ ಪ್ರಯತ್ನ ಮಾಡುತ್ತಿಲ್ಲ. ಮೀಸಲಾತಿಗೆ ಅಗತ್ಯ ಕಾನೂನು ತಿದ್ದುಪಡಿ ಬೇಕು.

ಪ್ರತಿಯೊಂದು ರಂಗದಲ್ಲಿ ಮಹಿಳೆಯರಿಗೆ ಸ್ವಾತಂತ್ರ್ಯ ಬೇಕು. ಐ.ಟಿ-ಬಿಟಿ ಉಡಾವಣೆ ಸೇರಿದಂತೆ ಎಲ್ಲ ರಂಗಗಳಲ್ಲೂ ಮಹಿಳೆಯರು ಸ್ವ ಸಾಮರ್ಥ್ಯದಿಂದಲೇ ಮೇಲೆ ಬಂದಿದ್ದಾರೆ. ರಾಜಕೀಯ ಹಸ್ತಕ್ಷೇಪವಿಲ್ಲದ ಕಡೆ ಸಾಹಿತ್ಯ, ಸಂಸ್ಕೃತಿ, ರಂಗಭೂಮಿ, ಚಲನ ಚಿತ್ರ ಕ್ಷೇತ್ರಗಳಲ್ಲಿ ಮಹಿಳೆಯರು ಪುರುಷರಷ್ಟೇ ಕ್ರಿಯಾಶೀಲರಾಗಿದ್ದಾರೆ.

ಧರ್ಮಸಿಂಗ್ ನೇತೃತ್ವದ ಸರಕಾರದ ಸಾಹಿತ್ಯ ಅಕಾಡೆಮಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತ ಡಾ. ಗೀತಾ ನಾಗಭೂಷಣರನ್ನು ಅಧ್ಯಕ್ಷರನ್ನಾಗಿ ನೇಮಿಸಿತು. ಆಗ ಸಾಹಿತ್ಯ ಅಕಾಡೆಮಿಯಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಮಹಿಳೆಯರು ಗಣನೀಯವಾಗಿ ಕಾರ್ಯ ನಿರ್ವಹಿಸಿದರು. ರಾಜ್ಯದಲ್ಲಿ ಅಸಂಖ್ಯಾತ ಮಹಿಳಾ ಪ್ರಾಧ್ಯಾಪಕರಿಗೆ ಅರ್ಹ ಮಹಿಳಾ ಅಭ್ಯರ್ಥಿಯನ್ನು ಕುಲಪತಿ ಸ್ಥಾನದಲ್ಲಿ ಕೂಡಿಸಿದರೆ ಶೈಕ್ಷಣಿಕ ಮಟ್ಟ ಸುಧಾರಿಸಬಹುದೆಂದು ಹೇಳಬಹುದು.

ಹನ್ನೆರಡನೇ ಶತಮಾನ ರಾಜಶಾಹಿ ಕಾಲ. ಆದರೆ, ಬಸವಣ್ಣನವರ ಅನುಭವ ಮಂಟಪದಲ್ಲಿ ಅಸಂಖ್ಯಾತ ವಚನಕಾರ್ತಿಯರು ಕ್ರೀಯಾಶೀಲವಾಗಿ ತೊಡಗಿಕೊಳ್ಳುವಂತೆ ಪ್ರೇರೇಪಿಸಿದರು. ಬಸವಣ್ಣ, ಅಲ್ಲಮಪ್ರಭುವಿನಂತ ಹಿರಿಯರ ಎದುರು ವಾಗ್ವಾದಕ್ಕಿಳಿಯಲು ಅಯ್ದಕ್ಕಿ ಲಕ್ಕಮ್ಮ ಸೂಳೆ ಸಂಕವ್ವೆಯಂತಹ ವಚನಕಾರ್ತಿಯರು ಹಿಂಜರಿಯುತ್ತಿರಲಿಲ್ಲ.

ರಾಜಶೇಖರ ಹತಗುಂದಿಯವರು ಮಹಿಳೆಯರ ಬಗ್ಗೆ ಕಳಕಳಿ ಇಟ್ಟುಕೊಂಡು ಮಹಿಳೆಯರಿಗೆ ರಾಜಕೀಯದಲ್ಲಿ ಮೀಸಲಾತಿ ಕಲ್ಪಿಸುವ ಮಸುದೆಗೆ ಮುಕ್ತಿ ದೊರೆಯುವ ಸಾಧ್ಯತೆ ಇದೆ. ಕಾಂಗ್ರೇಸ್ ನಾಯಕಿ ಸೋನಿಯಾ ಗಾಂಧಿ ವಿಶೇಷ ಮುತುವರ್ಜಿ ವಹಿಸಿದ್ದರಿಂದ ಮಹಿಳಾ ಮೀಸಲಾತಿ ಕಾನೂನು ರೂಪ ಪಡೆಯುವ ಹಂತ ತಲುಪಿದೆ. ಎಲ್ಲ ರಾಜಕೀಯ ಪಕ್ಷಗಳುಮಹಿಳೆಯರ ಬಗ್ಗೆ ಕಳಕಳಿ ತೋರಿಸುತ್ತಾರೆ. ಅದರೆ ಚುನಾವಣೆ ಸಂದಬ್ಧಲ್ಲಿ ಮಹಿಳಾ ಅಭ್ಯರ್ಥಿಯನ್ನು ಕಣಕ್ಕಿಳಿಸಲು ಯಾವುದಾದರೂ ಕುಂಟ ನೆಪ ಹೆಳುತ್ತಾರೆ. ಪುರುಷ ಅಭ್ಯಹಥಿಗಳೆದುರು ಸೆಣಸಿ ಗೆಲ್ಲುವ ತಾಕತ್ತು ಮಹಿಳೆಯರಿಗೆ ಇರುವದಿಲ್ಲವೆಂದು ರಾಜಕೀಯ ಪಕ್ಷಗಳ ಗ್ರಹಿಕೆ. ಇಂದಿರಾ ಗಾಂದಿ, ಜಯಲಲಿತಾ, ಪ್ರತಿಭಾ ಪಾಟೀಲ, ವಸುಂಧರಾ ರಾಜೆ, ಮಮತಾ ಬ್ಯಾನರ್ಜಿ ಹಾಗೂ ಮಾಯಾವತಿಯವರಿಗೆ ಯಾರ ಬೆಂಬಲವೂ ಇರಲಿಲ್ಲ, ಅವರು ತಮ್ಮ ಸ್ವ ಸಾಮರ್ಥ್ಯದಿಂದ ಮೇಲೆ ಬಂದಿದ್ದಾರೆ.



ಮಾಯಾವತಿಯವರಂತೂ ಉತ್ತರ ಪ್ರದೇಶದಲ್ಲಿ ಬಹುದೊಡ್ಡ ಸವಾಲನ್ನೇ ಎದುರಿಸಿ ಯಶಸ್ವಿಯಾದರು. ಮಹಿಳೆಯರು ರಾಜಕೀಯದಲ್ಲಿ ಪುರುಷರಷ್ಟೇ ಸರಿ ಸಮಾನವಾಗಿ ಬೆಳೆಯ ಬಲ್ಲರೆಂಬುವುದು ಇಂದಿರಾಗಾಂಧಿ ಕಾಲದಿಂದ ರುಜುವಾತಾಗಿದೆ. ಸಾಮಾನ್ಯ ಮತಕ್ಷೇತ್ರದಲ್ಲಿ ದುರ್ಬಲ ಸಮುದಾಯದ ನಾಯಕರು ಗೆಲವು ಸಾಧಿಸುತ್ತಿರುವುದು ಹಣಬಲ ಹಾಗೂ

ತಂತ್ರಗಾರಿಕೆಯಿಂದ ಮಹಿಳೆಯರು ಒಂದು ಸ್ಥಾನವನ್ನು ಅಲಂಕರಿಸಿದ್ದರೆ ಅವರ ಹೆಸರಿನಲ್ಲಿ ಪುರುಷರು ಅಧಿಕಾರ ಚಲಾಯಿಸುವ ಅಪಾಯ ತಪ್ಪಿದ್ದಲ್ಲ. ಜನತಂತ್ರದ ಸಾಧ್ಯತೆ ವಿಸ್ತರಿಸಿದಂತೆ ಅರಿವು ಮಾಡುತ್ತಾ ಹೋಗುತ್ತದೆ. ದಲಿತ, ಹಿಂದುಳಿದ, ಅಲ್ಪಸಂಖ್ಯಾತ ಮಹಿಳೆಯರು ರಾಜಕೀಯ ಸ್ಥಾನಮಾನ ಹೊಂದಬೇಕಾದರೆ, ಸಕ್ರೀಯ ರಾಜಕಾರಣದಲ್ಲಿ ಕ್ರೀಯಾಸೀಲವಾಗಬೇಕಾದರೆ ಒಳ ಮೀಸಲಾತಿಯನ್ನು ಜಾರಿಗೊಳಿಸುವುದು ಅಗತ್ಯವಾಗಿದೆ. ನಿಮಗೆಲ್ಲ ಗೊತ್ತಿದ್ದ ಹಾಗೆ ಶಾಸನ ಸಭೆಗಳಲ್ಲಿ ಮೇಲ್ಜಾತಿಯ ಜನರ ಪ್ರಾಬಲ್ಯ ಹೆಚ್ಚಾಗಿ ಕಾಣುತ್ತೇವೆ.

ದಲಿತ ಹಿಂದುಳಿದ ಸಮುದಾಯಗಳಮಹಿಳೆಯರು ಮೇಯರ್, ಜಿಲ್ಲಾಪಂಚಾಯತಿ ಅಧ್ಯಕ್ಷ ಸ್ಥಾನವನಮ್ಮು ಅಲಂಕರಿಸಲು ಸಾಧ್ಯವಾಗುತ್ತಿರುವುದು ಮೀಸಲಾತಿ ಕಾರಣಕ್ಕೆ ಹೊರತು ಔದಾರ್ಯದ ಕಾರಣಕ್ಕಲ್ಲ ಮಹಿಳೆಯರನ್ನು ಜಾತಿ ಹೆಸರಿನಲ್ಲಿ ವಿಭಜಿಸಬೇಡಿ ಎಂದು ವಾದಿಸುವವರು. ಭಾರತದ ಶ್ರೇಣಿಕೃತ ಜಾತಿ ವ್ಯವಸ್ಥೆಯನ್ನು ಅವಲೋಕಿಸಬೇಕಿತ್ತು. ಆಗ ಮಾತ್ರ ಎಲ್ಲ ಸಮುದಾಯದ ಮಹಿಳೆಯರೂ ರಾಜಕೀಯದಲ್ಲಿ ತಮ್ಮ ಸಾಮರ್ಥ್ಯ ತೋರಲು ಸಾಧ್ಯವಾಗುತ್ತದೆ. ಲಾಲು ಪ್ರಸಾದ ಯಾದವರ ಐದನೇ ರೈಲ್ವೆ ಬಜೆಟ್ ಮಂಡಣೆಯಾಗಿದೆ. ಯಥಾ ಪ್ರಕಾರ ಲಾಲೂ ಪ್ರಯಾಣ ದರದಲ್ಲಿ ಕಡಿತ ಪ್ರಕಟಿಸಿದ್ದಾರೆ. ಹಾಗೆಯೇ ರೈಲ್ವೆ ಇಲಾಖೆಗೆ ಸುಮಾರು ೨೫ ಸಾವಿರ ಕೋಟಿ ಲಾಭವಾಗಲಿದೆ ಎಂದು ಹೇಳಿದ್ದಾರೆ. ಕರ್ನಾಟಕ ರಾಜ್ಯಕ್ಕೆ ಲಾಲು ಅನ್ಯಾಯ ಮಾಡಿದನೆಂದ ಕಾಂಗ್ರೆಸ್ ಮುಖಂಡರು ಅಸಮಧಾನವನ್ನು ವ್ಯಕ್ತಪಡಿಸಿದ್ದಾರೆ.

ಲಾಲು ಮಂಡಿಸಿದ ಕಳೆದ ನಾಲ್ಕು ಬಜೆಟ್‌ಗಳಲ್ಲಿ ಸೂಕ್ಷ್ಮವಾಗಿ ನೋಡಿದರೆ ಬಡವರ ಬಗೆಗಿನ ಕಾಳಜಿ ಎದ್ದು ಕಾಣುತ್ತದೆ. ರೈಲ್ವೆ ಆರ್ಥಿಕತೆಯ ಜೊತೆಗೆ ಗುಡಿ ಕೈಗಾರಿಕೆಗಳನ್ನು ಉತ್ತೇಜಿಸುವ ಹಾಗೂ ಕುಶಲ ಕರ್ಮಿಗಳಣ್ನು ಬೆಂಬಲಿಸುವ ಇರಾದೆ ಗಮನ ಸೆಳೆಯುತ್ತದೆ.

ರೈಲ್ವೆ ಹಾಗೂ ವಿಮಾನಕ್ಕಿಂತಲೂ ಹೆಚ್ಚು ಬಳಸುವ ಸಾರಿಗೆ ಇದಾಗಿದೆ. ಡಿಸೆಲ್ ದರ ಹೆಚ್ಚುತ್ತಿರುವ ದಿನಗಳಲ್ಲಿ ರೈಲ್ವೆ ದರ ಕಡಿತಗೊಳಿಸುವುದು ತಮಾಷೆಯ ಸಂಗತಿಯಲ್ಲ. ಲಾಲು ಬಿಹಾರಿಗೆಬಂದ ಮೇಲೆ ಕಾಯಕಲ್ಪವಾಯಿತೆನೋ ಸರಿ.ಬಿಹಾರ ಮತ್ತು ಉತ್ತರ ರಾಜ್ಯಗಳನ್ನು ಹೊರತುಪಡಿಸಿ ಉಳಿದೆಡೆ ವಿಸ್ತರಣಾ ಕಾರ್ಯಕ್ಕೆ ಕೈಹಾಕುತ್ತಲೇ ಇಲ್ಲ. ರೈಲ್ವೆ ಇಲಾಖೆ ವಿಸ್ತರಣೆಯಾದಷ್ಟು ಅದರ ವ್ಯಾಪ್ತಿ ಹೆಚ್ಚುತ್ತದೆ. ಹೆಚ್ಚಿದಷ್ಟು ವಹಿವಾಟು ಬೆಳೆಯುತ್ತದೆರ. ಲಾಭ

ದ್ವಿಗುಣಗೊಳ್ಳುತ್ತದೆ. ಬಿಹಾರದ ಲಾಲೂ ಪ್ರಸಾದರ ಬಗ್ಗೆ ಅವರ ರೈಲ್ವೆ ಸಾಧನದ ಬಗ್ಗೆ ಕನ್ನಡಿಗರ ಅಭಿಮಾನಪಟ್ಟಂತೆ ಲಾಲೂ ಕೂಡಾ ಕರ್ನಾಟಕ ನನ್ನ ವ್ಯಾಪ್ತಿಗೆ ಸೇರಿದ್ದು ಎಂದು ಅರಿತು ಕಾರ್ಯನಿರ್ವಹಿಸಬೇಕು.

ಈ ಬಲಅರಿ ರೈಲ್ವೆ ಬಜೆಟ್‌ನಲ್ಲಿ ರಾಜ್ಯಕ್ಕೆ ಅನ್ಯಾಯವಾಯಿತೆಂರೆ ಅದರ ಹೊಣೆಯನ್ನು ಅಜ್ಯದ ಸಂಸದರೇ ಹೊರಬೇಕಾಗುತ್ತದೆ.ಕೇಂದ್ರದ ಯು.ಪಿ.ಎ. ಸರಕಾರ ರೈಲ್ವೆ ಬಜೆಟ್ ಮಂಡಿಸಿರುವ ಪೂರ್ವದಲ್ಲಿಸಂಸದರ ಅಭಿಪ್ರಾಯಗಳನ್ನು ಬೇಡಿಕೆಯ ಪಟ್ಟಿಯನ್ನು ಪಡೆಯಬೇಕು. ಲಾಲೂ ಪ್ರಸಾದ ಯಾದವ ಎಲ್ಲ ರಾಜ್ಯಗಳನ್ನು ಸಮಾನವಾಗಿ ನೋಡಿದಾಗ ಮಾತ್ರ ಅತ್ಯುತ್ತಮ ರೈಲ್ವೆ ಮಂತ್ರಿ ಎನಿಸಿಕೊಳ್ಳಬಲ್ಲ.

ಲಾಲೂ ಪ್ರಸಾದ ಯಾದವರು ಬಿಹಾರ ಮತ್ತು ಉತ್ತರ ರಾಜ್ಯಗಳನ್ನು ಮಾತ್ರ ಗಮನಿಸಿ ಅವುಗಳ ಏಳ್ಗೆಗಾಗಿ ದುಡಿದರು. ಆದರೆ ಬೇರೆ ರಾಜ್ಯಗಳಿಗೆ ಅನ್ಯಾಯವಾಗಿದೆ ಎಂದು ಹೇಳಬಹುದು. ಭ್ರಷ್ಟ ಅಧಿಕಾರಿಗಳ ಮೇಲೆ ಲೋಕಾಯುಕ್ತರು ಈ ಬಾರಿ ಸುಮಾರು ೪೦ ಕೋಟಿ ಮವಲ್ಯದ ಆಸ್ತಿ ಪಾಸ್ತಿ ಪತ್ತೆಯಾಗಿದೆ. ಪ್ರಮುಖವಾಗಿ ಪೋಲಿಸ್ ಅರ್.ಟಿ.ಓ. ಹಾಗೂ ನಗರ ಸಭೆಯ ಅಧಿಕಾರಿಗಳು ಲೋಕಾಯುಕ್ತರ ಬಲೆಗೆ ಬಿದ್ದಿದ್ದಾರೆ. ಲೋಕಾಯುಕ್ತರು ಪದೇಪದೇ ದಾಳಿ ಮಾಡುತ್ತಾರೆ ಅಕ್ರಮ ಅಸ್ತಿ ಪತ್ತೆ ಹಚ್ಚುತ್ತಾರೆ. ಅದರೆ ಭ್ರಷ್ಠ ಅಧಿಕಾರಿಗಳು ಏನೂ ಆಗಿಲ್ಲವೆನ್ನುವಂತೆ ಸುಮ್ಮನಿರುತ್ತಾರೆ.

ಯಾವ ಒಬ್ಬ ಅಧಿಕಾರಿ ಕೂಡಾ ಪಾಪ ಪ್ರಜ್ಞೆಯಿಂದ ನರಳಿದ ನಿದರ್ಶನ ಸಿಗುವದಿಲ್ಲ. ಹೆಂಡತಿ, ಮಕ್ಕಳು ಹಾಗೂ ಸಂಬಂಧಿರ ಎದಿರು ತಲೆ ತಗ್ಗಿಸುವುದು ಬಿಟ್ಟು ನಾನೇನು ಮಹಾ ಅಸ್ತಿ ಮಾಡಿದ್ದೆನೆ. ನನಗಿಂತಲೂ ಹೆಚ್ಚು ಅಸ್ತಿ ಮಾಡಿದವರಿದ್ದಾರೆ. ಅವರಿಗೆ ರೈಡ್ ಮಾಡಲಿಲ್ಲ ಎನ್ನುತ್ತಾರೆ. ಲೋಕಾಯುಕ್ತರು ಸುದ್ದಿ ಮಾಡುತ್ತಲೇ ಇದ್ದಾರೆ ಅದರೆ ಭೃಷ್ಟರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಲೇ ಇದೆ. ಲೋಕಾಯುಕ್ತ ಸಂಸ್ಥೆಗೆಎಷ್ಟೇ ಪರಮಾಧಿಕಾರ ನೀಡಿದರೂ ರಾಜಕಾರಣಿಗಳು ಅದನ್ನು ನಿಯಂತ್ರಿಸುವ ಅಧಿಕಾರಿಗಳ ಮನೋಧರ್ಮದಲ್ಲಿ ಮೂಲಭೂತ ಬದಲಾವಣೆಗೆ ಕಾಣದ ಹೊರತು ಭ್ರಷ್ಟಾಚಾರವನ್ನು ಪರೋಕ್ಷವಾಗಿ ಬೆಂಬಲಿಸುವಿಡೀ ಸಮುದಾಯವೇ ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ.

ಭ್ರಷ್ಟಾಚಾರದ ಬಗ್ಗೆ ಯಾರೊಬ್ಬರು ಹೊಣೆ ಹೊರಲು ಸಿದ್ಧರಿರುವದಿಲ್ಲ. ತಮ್ಮ ಮೇಲಿನ ಅಪಾದನೆಯನ್ನು ನೀರು ಕುಡಿದಷ್ಟೇ ಸರಳವಾಗಿ ವರ್ಗಾಯಿಸುತ್ತಾರೆ. ಅಂತಿಮವಾಗಿ ಚುನಾವಣಾ ವೆಚ್ಚದ ಮೇಲೆ ಜನತಂತ್ರದ ದೌರ್ಬಲ್ಯದ ಮೇಲೋ ವರ್ಗಾಯಿಸಿ ಎಲ್ಲರು ನಿರುಮ್ಮಳವಾಗಿರಲು ಪ್ರಯತ್ನಿಸುತ್ತಾರೆ. ಲಂಚ ಯಾಕೆ ತೆಗೆದುಕೊಳ್ಳುತ್ತೀರಿ ಎಂದು ಕೇಳಿದಾಗ ನಾನೇನು ಮಾಡಲಿ ಮೇಲಾಧಿಕಾರಿಗಳಿಗೆ ಕೊಡಬೇಕು. ಮಂತ್ರಿಗಳವರೆಗೂ ಹೋಗುತ್ತದೆ.ಜನ ಭ್ರಷ್ಟರಾಗಿದಾರೆ. ಚುನಾವಣೆ ಖರ್ಚು ವಿಪರೀತ ಹೆಚ್ಚುತ್ತಿದೆ ಎಂದು ಮತದಾರರನ್ನೇ ದೂರುತ್ತಾರೆ.

ಭ್ರಷ್ಟಾಚಾರವೆಂಬುವುದು ಮನುಷ್ಯನ ಅಸೆ ಬುರುಕುತನದಲ್ಲಿ ಕೆಲವರು ಎಷ್ಟೇ ಬಡವರಾಗಿದ್ದರೂ ಎಷ್ಟೇ ತಾಪತ್ರಯವಿದ್ದರೂ ಬಏರೆಯವರ ದುಡ್ಡಿಗೆ ಅಸೆಪಡದವರೂಈಗಲೂ ನಮ್ಮ ನಡುವೆ ಇದ್ದಾರೆ. ಕೆಲವರು ಕಂಡ ಕಂಡವರ ತಲೆ ಒಡೆದು ದುಡ್ಡು ಬಾಚುತ್ತಾರೆ. ಮನುಷ್ಯನ ಘನತೆ, ಸ್ವಾಭಿಮಾನ, ಅತ್ಮಗೌರವ ದೊಡ್ಡದೆಂದು ಭಾವಿಸಿದವರಿಗೆ ಮಾತ್ರ ಹಣದ ಮಿತಿ ಅರ್ಥವಾಗುತ್ತದೆ. ಚುನಾವಣಾ ಪೂರ್ವ ಸಮೀಕ್ಷೆಗಳು ವಸ್ತುನಿಷ್ಠ ಹಾಗೂ ಪ್ರಾಮಾಣಿಕವಾಗಿದ್ದರೆ ಖಂಡಿತ ಜನ ಮೆಚ್ಚುಗೆ ಗಳಿಸುತ್ತವೆ. ಮತದಾರರ ನಾಡಿ ಮಿಡಿತ ಅರಿಯುವಲ್ಲಿ ಪತ್ರಕರ್ತರ ಜಾಣ್ಮೆ ಎಂತಹದು ಎನ್ನುವುದು ಈ ಚುನಾವಣಾ ಪೂರ್ವ ಸಮೀಕ್ಷೆಗಳಿಂದ ಸಾಬೀತಾಗುತ್ತದೆ.

ಎಲ್ಲ ಚುನಾವಣಾ 'ಪೂರ್ವ ಸಮೀಕ್ಷೆಗಳ ಬವಿಷ್ಯನಿಜವಾಗಲೇ ಬೇಕೆಂದಿಲ್ಲ. ಆದರೆ ಸತ್ಯಕ್ಕೆ ಹತ್ತಿರವಾಗಿರಬೆಕು. ಚುನಾವಣಾ ಕಾವು ಏರುತ್ತಿದ್ದಂತೆ, ಚುನಾವಣಾಪೂರ್ವ ಸಮೀಕ್ಷೆಗಳು ಹರಾಜಿಗಿಟ್ಟಂತೆ ಪ್ರಕಟಗೊಳ್ಳುತ್ತಲಿವೆ.

ಲಿಂಗಾಯತರು, ಬ್ರಾಹ್ಮಣರು ಹಾಗೂ ವ್ಯಾಪಾರಿ ಸಮುದಾಯದ ಯಡಿಯೂರಪ್ಪ ಮುಖ್ಯಮಂತ್ರಿಯಾಗಲಿ ಎಂದು ಹೇಳಬಹುದೇ ಹೊರತು ದಲಿತರು, ಹಿಂದುಳಿದವರ ಅಯ್ಕೆ ಬೇರೆಯದ್ದೇ ಆಗಿರುತ್ತದೆ. ಹಾಗೆ ನೋಡಿದರೆ, ಲಿಂಗಾಯತರು ಮತ್ತು ಒಕ್ಕಲಿಗರು ಈ ರಾಜ್ಯದಲ್ಲಿ ಅಜ್ಯಭಾರ ಮಾಡಿದ ಪ್ರಮುಖ ಸಮುದಾಯಗಳು, ದಲಿತರುಹಾಗೂ ಕುರುಬ ಸಮುದಾಯಕ್ಕೆ ಸೇರಿದ ಒಬ್ಬರೂ ಮುಖ್ಯಮಂತ್ರಿಯಾಗಲೇ ಇಲ್ಲ.

ಖರ್ಗೆಯವರು ೧೯೭೨ ರಿಂದಲೂ ಸದನದಲ್ಲಿದ್ದವರು ೧೯೭೬ ರಲ್ಲೇ ಮುಖ್ಯಮಂತ್ರಿ ದೇವರಾಜ ಅರಸು ರವರ ಸಂಪುಟದಲ್ಲಿ ಪ್ರಾಥಮಿಕ ಶಿಕ್ಷಣ ಸಚಿವರಾಗಿ ಸೈ ಎನಿಸಿಕೊಂಡವರು. ಕಂದಾಯ, ಗ್ರಾಮೀಣಾಭಿವೃದ್ಧಿ, ಗೃಹ, ಕೈಗರಿಕೆ, ನೀರಾವರಿ, ಸಾರಿಗೆಯಂತಹ ಪ್ರಮುಖ ಖಾತೆಗಳನ್ನುದಕ್ಷತೆಯಿಂದ ನಿರ್ವಹಿಸಿದವರು. ಸತತ ಎಂಟು ಚುನಾವಣೆಗಳನ್ನು ಗೆದ್ದ ಖರ್ಗೆ ಈಗ ಕೆ.ಪಿ.ಸಿ.ಸಿ. ಅಧ್ಯಕ್ಷ ಸ್ಥಾನದಲ್ಲಿದ್ದರು. ಹಾಗಾದರೆ ಖರ್ಗೆ ಮುಖ್ಯಮಂತ್ರಿಯಾಗಲೆಂದು ಹೇಳುವದಿಲ್ಲವೆಂಬುವುದು ಸೋಜಿಗವೆನಿಸುತ್ತದೆ.

ಬೆಳಗಾವಿಯಲ್ಲಿ ನಡೆಯುವ ಅಧಿವೇಶನದಲ್ಲಿ ಉತ್ತರ ಕರ್ನಾಟಕದ ಅಬಿವೃದ್ದಿ ಬಗ್ಗೆ ಮಾತ್ರ ಚರ್ಚೆ ನಡೆಸಬೇಕೆಂದು ವಿರೋಧ ಪಕ್ಷದವರೊಂದಿಗೆ ಮೊದಲೆ ಸಮಾಲೋಚನೆ ನಡೆಸಿದ್ದರೆ ಸದನ ಹಾದಿ ತಪ್ಪುತ್ತಿರಲಿಲ್ಲ. ಬೆಳಗಾವಿ ಅಧಿವೇಶನ ಹಳ್ಳ ಹಿಡಿಯಲು ಅಡಳಿತಾರೂಢ ಪಕ್ಷದವರು ಎಷ್ಟು ಕಾರಣರೋ ಅಷ್ಟೇ ವಿರೋಧ ಪಕ್ಷದವರು ಕಾರಣರಾಗಿದ್ದಾರೆ.

ಬೆಳಗಾವಿ ಅಧಿವೇಶನದಲ್ಲಿ ಬಹುತೇಕ ಶಾಸಕರು ಪಿಕ್‌ನಿಕ್ ಮೂಢ್‌ನಲ್ಲಿದ್ದರು. ಉತ್ತರ ಕರ್ನಾಟಕದ ಶಾಸಕರಿಗೂ ಉತ್ತರ ಕರ್ನಾಟಕದ ಅಭಿವೃದ್ದಿಯ ಚರ್ಚೆ ಬೇಕಿರಲಿಲ್ಲ. ಈ ಭಾಗದ ಅಭಿವೃದ್ಧಿಯಾಗದಿರುವುದಕ್ಕೆ ಆ ಭಾಗದ ಜನಪ್ರತಿನಿಧಿಗಳು ಕಾರಣರು. ಉತ್ತರ ಕರ್ನಾಟಕದ ಸಮಗ್ರ ಅಭಿವೃದ್ಧಿ ಚರ್ಚೆಸಬೇಕೆಂಬ ತುಡಿತವೇ ಇರಲಿಲ್ಲ.

ಜನತೆಯ ತೆರಿಗೆಯ ಹಣ ಹೀಗೆ ಬೇಕಾ ಬಿಟ್ಟಿಯಾಗಿ ಬಳಕೆಯಾಗುತ್ತಿರುವುದು ಜನತೆಗೆ ಅಸಮಧಾನ. ಹೀಗಾಗಿ ಬೆಳಗಾವಿ ಅಧಿವೇಶನ ಸಂಪೂರ್ಣ ವಿಫಲವಾಗಿದೆ. ಸಾಮಾನ್ಯ ಆಡಳಿತಕ್ಕೆ ಯಾವುದೇ ಪಕ್ಷ ಬಂದರೂ ಮಠ ಮಾನ್ಯಗಳಿಗೆ ಗೌರವ ಸಲ್ಲಿಸುವ ಪದ್ಧತಿ ಮೊದಲಿನಿಂದಲೂ ಇದೆ.

ರಾಜ್ಯದಲ್ಲಿ ಜೆ.ಡಿ.ಎಸ್., ಬಿ.ಜೆ.ಪಿ. ಸಮ್ಮಿಶ್ರ ಸರಕಾರ ಬರುತ್ತಲೇ ಹಣಕಾಸು ಮಂತ್ರಿಯಾಗಿದ್ದ ಬಿ.ಎಸ್. ಯಡಿಯೂರಪ್ಪನವರು ಮಠಗಳಿಗೆ ಹಣ ನೀಡುವ ಪರಿಪಾಠ ಶುರು ಮಾಡಿದರು. ರಾಜ್ಯದಲ್ಲಿ ಬಹುಪಾಲು ಮಠಗಳು ಭಕ್ತಾದಿಗಳ ನೆರವಿನಿಂದ ಶ್ರೀಮಂತ ಮಠಗಳಾಗಿವೆ. ಚಿತ್ರದುರ್ಗದ ಮುರುಘಾಮಠ ಹಾಗೂ ತುಮಕೂರಿನ ಸಿದ್ಧಗಂಗಾ ಮಠಕ್ಕೆ ವಾಲ್ಮಿಕಿ ಸಮುದಾಯ ಭಕ್ತಗಣಂದಲ್ಲಿ ಸೇರಿದೆ. ಭಕ್ತಿ ಮತ್ತು ರಾಜಕಾರಣ ಭಿನ್ನ ನೆಲೆಯಲ್ಲಿಯೇ ನಡೆಯುತ್ತಿದ್ದವು.

ಸಿದ್ಧಗಂಗಾ ಮಠವಂತೂ ಎಲ್ಲ ಸಮುದಾಯದ ಮಠವಾಗಿದೆ. ಸರ್ವ ಜನಾಂಗದ ಶಾಂತಿಯ ತೋಟ ಎನಿಸಿಕೊಂಡಿತು.

ರಾಜ್ಯದಲ್ಲಿ ಬಿ.ಜೆ.ಪಿ. ಸರಕಾರ ಅಸ್ತಿತ್ವಕ್ಕೆ ಬರಲು ವೀರಶೈವ ಮಠಗಳಿಗಿಂತಲೂ ಉತ್ತರ ಕರ್ನಾಟಕದ ರೈತ ಸಮುದಾಯ ಕಾರಣ. ರೈತ ಸಮುದಾಯದಲ್ಲಿ ಲಿಂಗಾಯತರು, ಕುರುಬರು ಹಾಗೂ ದಲಿತರೂ ಸೇರಿದ್ದಾರೆ. ಈಗ ಮುಖ್ಯಮಂತ್ರಿ ಯಡಿಯೂರಪ್ಪನವರು ಮಠಗಳು ವೀರಶೈವರಿಗೆ ಮಾತ್ರ ಸೇರಿದ್ದು ಎಂಬ ಸಂದೇಶ ರವಾನಿಸುತ್ತಿದ್ದಾರೆ. ಅಷ್ಟೇ ಅಲ್ಲ ಮಠಗಳಿಗೆ ಸರಕಾರದ ಅನುದಾನ ನೀಡುವುದರ ಮೂಲಕ ಭಿಕ್ಷುಕರೆಂದೇ ಪರಿಗಣಿಸಿದಂತೆ ಉತ್ತರ ಕರ್ನಾಟಕದ ಎಷ್ಟೋಮಠಗಳ ಸ್ವಾಮಿಗಳುಮನೆ ಮನೆಗೆ ಕಂತಿಭಿಕ್ಷೆ ಮಾಡಿ ವಿದ್ಯಾರ್ಥಿ ನಿಲಯ ನಡೆಸಿದ ನಿದರ್ಶನಗಳಿವೆ.

ರೈತ ಸಮುದಾಯದ ಗೋಳನ್ನುನೋಡಲು ಹೊರಟರೆ ಅವರ ಬದುಕು ಬಹಳಷ್ಟು ಸಂಕಟದಲ್ಲಿದೆ. ಬೆಳೆದ ಬೆಳೆಗೆ ಸಮರ್ಪಕವಾದ ಬೆಲೆ ಸಿಗುತ್ತಿಲ್ಲ, ಆದ್ದರಿಂದ ಸರಕಾರದ ರೈತರ ನೆರವಿಗೆ ಧಾವಿಸಬೇಕೆ ಹೊರತು ತೆರಿಗೆ ಹಣವನ್ನೆಲ್ಲಾ ಯಡಿಯೂರಪ್ಪನವರುಮಠಗಳಿಗೆ ಹಂಚುತ್ತಾ ಹೋದರೆ ಖಜಾನೆ ಖಾಲಿ ಆಗುತ್ತದೆ. ಅಭಿವೃದ್ಧಿ ಕಾರ್ಯ ಮಾತ್ರ ಒಂದೂ ಕಾಣುವದಿಲ್ಲ. ಸಿದ್ಧಗಂಗಾ ಮಠದ ಅನ್ನದ ದಾಸೋಹವೇ ಬಹುದೊಡ್ಡ ನಿದರ್ಶನ. ಆದರೆ ಮಠಗಳು ಸರಕಾರದ ಅನುದಾನಕ್ಕೆ ಕೈಚಾಚಿರಲಿಲ್ಲ ಯಡಿಯೂರಪ್ಪ ಮಠಗಳ ಘನತೆ ಕುಗ್ಗಿಸುತ್ತಿದ್ದಾರೆ.

**೨. ಸಾಹಿತ್ಯ ಕಲೆ :**

೧೯೬೭ ರ ಅಜಮಾಸಿನ ದಿನಗಳು ಕನ್ನಡ ಸಾಹಿತ್ಯವನ್ನು ಅತ್ಯಂತವಾಗಿ ಪ್ರೀತಿಸುವ ದಿನಗಳು. ಕಥೆ, ಕಾದಂಬರಿ, ವಿಮರ್ಶೆ ಇವೆಲ್ಲ ಓದುವ ರಾಜಶೇಖರ ಹತಗುಂದಿಯವರಿಗಿತ್ತು. ಅದರ ಜೊತೆಗೆ ಬರೆಯುವ ಹವ್ಯಾಸವೂ ಬೆಳೆಸಿಕೊಂಡರು. ಅದೇ ಹೊತ್ತಿನಲ್ಲಿ ಒಂದು ಕಥೆಯನ್ನು ಬರೆದರು. ಹಿರಿಯರಿಗೆ ತೋರಿಸಿ ಸರ್ಟಿಫಿಕೇಟ್ ತೆಗೆದುಕೊಳ್ಳಬೇಕೆಂಬ ಅಸೆ ಅವರಲ್ಲಿ ಹಿರಿಯ ಆಂಗ್ಲಪ್ರಾಧ್ಯಾಪಕರೊಬ್ಬರಿದ್ದರು. ಅವರಿಗೆ ಕಥೆ ಓದಲು ಕೊಟ್ಟು ಎರಡು ಮೂರು ದಿನಗಳನಂತರ ಅಭಿಪ್ರಾಯ ತಿಳಿಯಲು ಹೊದರು.

ಹುಮ್ಮಸ್ಸಿನಲ್ಲಿದ್ದ ಹಿರಿಯ ಪ್ರಾಧ್ಯಾಪಕರು ಕೇಳಿದರು.... ನಿನಗೆ ಈ ಕಥೆ ಬರೆಯಲು ಎಷ್ಟು ಖರ್ಚಾಗಿದೆ ಎಂದು ರಾಜಶೇಖರ ಹತಗುಂದಿಯವರನ್ನು ಕೇಳಿದರು. ಅವರಿಗೆ ಏನು ತಿಳಿಯದ ಹಾಗಾಯಿತು. ಅವರ ಪ್ರಶ್ನೆಗೆ ಗೂಡಾರ್ಥ ಅರಿಯದೆ ಐದಾರು ರೂ. ಎಂದರು. ಆಗ ಈ ಕಥೆಯನ್ನು ಸುಟ್ಟುಹಾಕು ಎಂಥ ಕಳಪೆ ಕಥೆ ಎಂದು ಹೋದರು.

ಆ ಮೇಲೆ ಆ ಕಥೆಯನ್ನೇ 'ಪ್ರಜಾವಾಣಿ ಕಥಾ ಸ್ಪರ್ಧೆಗತೆ ಕಳುಹಿಸಿದರು. ಅದಕ್ಕೆ ಬಹುಮಾನ ಬಂತು. ವಿಶೇಷಾಂಕದಲ್ಲೂ ಪ್ರಕಟವಾಯಿತು. ಆ ಪ್ರಾಧ್ಯಾಪಕರು ಹಾಗೇಕೆ ಎಂದರು? ಎಂಬ ಪ್ರಶ್ನೆ ಇನ್ನೂ ಕಾಡುತ್ತಿದೆ. ಅವರಿಗೆ ಪಾಶ್ಚಾತ್ಯ ಸಅಹಿತ್ಯದ ಹುಚ್ಚು ಹತ್ತಿತ್ತೆಂದರೆ ಕನ್ನಡದ ಯಾವ ಕತೆ ಓದಿದರೂ ತಾವು ಓದಿದ ಪಾಶ್ಚಿಮಾತ್ಯ ಕತೆಗಳೊಂದಿಗೆ ತೂಗಿ ನೋಡುತ್ತಿದ್ದರು.

ಒಮ್ಮೆ ವಿಮರ್ಶಕರೊಬ್ಬರು ಮಾತಿಗೆ ಕುಳಿತಾಗ ತೇಜಸ್ವಿನಿಯವರ 'ಚಿದಂಬರ ರಹಸಸ್ಯದ ಬಗ್ಗೆ' ಲಘುವಾಗಿ ಮಾತನಾಡಿದರು. ಇಂಥ ಹಲವು ಪ್ರಸಂಗಗಳನ್ನು ಎದುರುಗೊಂಡರು. ಕೆಲವು ದೊಡ್ಡ ದೊಡ್ಡ ಸಾಹಿತಿಗಳ ಬಗ್ಗೆ ಅಸಡ್ಡೆಯಾಗಿ ಮಾತನಾಡುತ್ತಾರೆ.

ಈಗಲೂ ವಿಮರ್ಶಕ ಎಚ್.ಎಸ್. ರಾಘವೇಂದ್ರರಾವ್ ಅವರು ಅತ್ಯಂತ ಕಿರಿಯರ ಬರಹಕ್ಕೂ ರಚನಾತ್ಮಕವಾಗಿ ಪ್ರತಿಕ್ರೀಯಿಸುತ್ತಾರೆ. ಇವರು ಹುರಿದುಂಬಿಸುವ ಮಾತುಗಳನ್ನಾಡುತ್ತಲೇ ತಿದ್ದಿ ತೀಡಿ ಬೆಳೆಸಿದರೆ ಸಾಹಿತ್ಯ ಬೆಳೆಸಿದಂತಾಗುತ್ತದೆ.

ಕನ್ನಡ ಸಾಹಿತ್ಯ ಪರಿಷತ್ತು ಜನವಿರೋಧಿಯಾಗಿನಡೆದುಕೊಂಡಾಗ ಅದನ್ನು ಬೆತ್ತಲಗೊಳಿಸುವುದು ಪ್ರಜ್ಞಾವಂತರ ಕರ್ತವ್ಯ ಕೂಡಾ. ಅಂತಹ ಪ್ರಜ್ಞಾವಂತರ ವಲಯ ಸಾಹಿತಿಗಳದೇ ಅಗಿರಬೇಕೆಂದೇನೂ ಇಲ್ಲ. ಹಾಗೇ ನೋಡಿದರೆ ಬಂಡಾಯ ಸಾಹಿತ್ಯ ಹುಟ್ಟು ಪಡೆದದ್ದೇ ಕನ್ನಡ ಸಾಹಿತ್ಯ ಪರಿಷತ್ತಿನ ಜನ ವಿರೋಧಿ ನಿಲುವನ್ನು ಪ್ರತಿಭಟಿಸುವ ಗಳಿಗೆಯಲ್ಲಿ. ಹಂಪ ನಾಗರಾಜಯ್ಯನವರು ಕನ್ನಡ ಸಅಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದಾಗ ಧರ್ಮಸ್ಥಳದಲ್ಲಿ ಸಾಹಿತ್ಯ ಸಮ್ಮೇಳನ ನಡೆಯುವುದಿತ್ತು. ಸಾಹಿತ್ಯ ಸಮ್ಮೇಳನದಲ್ಲಿ ದಲಿತ ಸಾಹಿತ್ಯ ಕುರಿತು ವಿಚಾರಗೋಷ್ಠಿ ಹಮ್ಮಿಕೊಳ್ಳಬೇಕೆಂದು ಡಾ.ಚನ್ನಣ್ಣ ವಾಲಿಕಾರ ಪರಿಷತ್ತಿಗೆ ಪತ್ರ ಬರೆದರೆ ಸಾಹಿತ್ಯದಲ್ಲಿದಲಿತ, ಬಲಿತ, ಕಲಿತ ಯಾವುದೂ ಇಲ್ಲ ಎಂದು ತಿರಸ್ಕರಿಸಿದರು.

ಗ್ರಾಹಕ ಸಾಂಸ್ಕೃತಿಕ ಅಬ್ಬರದಲ್ಲಿ ಪುಸ್ತಕ ಪ್ರೀತಿ ಕಳೆದು ಹೋಗ್ತಾ ಇದೆ. ಐದು ಕೋಟಿ ಕನ್ನಡಿಗರಿಗೆ ಇವತ್ತಿಗೂ ಒಬ್ಬ ಲೇಖಕ ತನ್ನ ಕೃತಿಯ ಸಾವಿರ ಪ್ರತಿಗಳನ್ನು ಅಚ್ಚು ಹಾಕಿಸಿದ್ದು ಓದುಗರರನ್ನು ನಂಬಿಲಾಗದೇ, ಗ್ರಂಥಾಲಯದ ಖರೀದಿಯನ್ನು ನಂಬಿ, ಸಾಹಿತ್ಯ ಸಮ್ಮೇಳನಗಳು ಜನಾಕರ್ಷಣೆಯ ಕೇಂದ್ರಗಳಾಗಿರುವುದರಿಂದ, ಸಹಜವಾಗಿ ಪುಸ್ತಕ ಪ್ರೀತಿ, ಕನ್ನಡ ಪ್ರೀತಿ ಎರಡಕ್ಕೂ ಅವಕಾಶ ಕಲ್ಪಿಸಿದಂತಾಗುತ್ತದೆ. ಕನ್ನಡದ ಹೆಸರಿನಲ್ಲಿ ಸಾಹಿತಿಗಳು ನಾಲ್ಕು ದಿನ ಒಂದೆಡೆ ಸೆರಿ ನಾಲ್ಕು ದಿನ ಒಂದೆಡೆ ಸೇರಿ ನಾಲ್ಕು ದಿನದ ಮಟ್ಟಿಗಾದರೂ ಕನ್ನಡವನ್ನು ಉಸಿರಾಡುತ್ತಾರೆ. ಕನ್ನಡದ ಕಂಪು ಪಸರಿಸುತ್ತಾರೆ, ಆದ್ದರಿಂದ ಕನ್ನಡ ಜಾತ್ರೆಗಳು ಬೇಕೆ ಬೇಕು.

ಸಾಹಿತ್ಯ ಸಂಸ್ಕೃತಿ, ಸಮಕಾಲೀನ ವಿದ್ಯಮಾನಗಳನ್ನು ಕುರಿತು ಚರ್ಚೆ, ವಾಗ್ವಾದ ಇವೆಲ್ಲ ಕನ್ನಡ ಪ್ರಜ್ಞೆಯನ್ನು ರೂಪಿಸುವಲ್ಲಿ, ವಅಗ್ವಾದ ಇವೆಲ್ಲ ಕನ್ನಡ ಪ್ರಜ್ಞೆಯನ್ನು ರೂಪಿಸುವಲ್ಲಿ ಪೂರಕ ಸಾದನಗಳಾಗಿವೆ. ಸಾಹಿತ್ಯದ ಜಾತ್ರೆ, ಕನ್ನಡದ ತೇರು ಮತ್ತು ಪುಸ್ತಕ ಸಂತೆಗಳು ಆಗಾಗ ನಡೆಯುತ್ತಲೇ ಇರಬೇಕು.

ಸಾಹಿತಿಗಳಲ್ಲಿ ಮಡಿವಂತಿಕೆಯನ್ನು ಕಾಣಬಹುದು. ಕನ್ನಡದಲ್ಲೂ ನೇರ, ಸರಳ ಹಾಗೂ ಆಪ್ತವಾಗಿ ಬರೆಯುವವರು ಬಹಳಷ್ಟು ಜನರಿದ್ದಾರೆ. ಅಕಾಡೆಮಿ ವಲಯದಲ್ಲಿ ಗುರುತಿಸಿಕೊಂಡವರು ಮಾತ್ರ ಏನೇ ಬರೆದರೂ ಗಂಭೀರವಾಗಿಯೇ ಆಲೋಚಿಸುತ್ತಾರೆ, ಸಾಹಿತ್ಯ, ರಅಜಕಾರಣ ಸಅಮಾಜಿಕ ಕ್ಷೋಭೆಗಳು ಹೀಗೆ ಯಾವುದರ ಬಗ್ಗೆ ಬರೆದರೂ ಒಂದು ಮಟ್ಟದ ತೂಕ ಉಳಿಸಿಕೊಂಡಿರುತ್ತಾರೆ. ಯಾವುದೇ ಬರಹ ಎಷ್ಟೇ ಸರಳವಾಗಿದ್ದರೂ ಒಂದು ಮಟ್ಟಸ ಸೂಕ್ಷ್ಮತೆ ಒಂದು ಮಟ್ಟದ ತೂಕ ಉಳಿಸಿಕೊಳ್ಳಲೇ ಬೇಕು. ಬಹಳಜನ ತೂಕ ಉಳಿಸಿಕೊಳ್ಳುವ ಭರಾಟೆಯಲ್ಲಿಓದುಗನ ತಲೆಗೆ ಬಾರ ಮಾಡುತ್ತಿದ್ದಾರೆ. ಕೆಲವರಂತೂಪದಗಳಪಾಂಡಿತ್ಯ ಪ್ರದಶಿಸಲು ಹೋಗಿ ಓದುಗರಿಗೆ ಗೊಂದಲ ಉಂಟುಮಾಡುತ್ತಾರೆ. ಕುವೆಂಪು, ಮಾಸ್ತಿ, ತೇಜಸ್ವಿ, ಶಾಂತಿನಾಥ ದೇಸಾಯಿಯವರಂಥ ಹಿರಿಯ ಬರಹಗಾರರು ತಮಗೆ ತಿಳಿಯದ ಸಂಗತಿಗಳ ಬಗ್ಗೆ ಬರೆದುಗೊಂದಲ ಸೃಷ್ಟಿಸುತ್ತಿರಲಿಲ್ಲ.

ಶುದ್ಧ ಕವಿಯಾಗಿದ್ದವನನ್ನು ಜಾಗತೀಕರಣದ ಬಗ್ಗೆ ಒಂದು ಲೇಖನ ಕೇಳಿದರೆ, ಆ ವಿಷಯ ಅರ್ಥಶಾಸ್ತ್ರಜ್ಞರಿಗೆ ಸಂಬಂಧಿಸಿದ್ದು, ಅದರ ಬಗ್ಗೆ ನಾನ್ಯಾಕೆ ತಲೆ ಕೆಡಿಸಿಕೊಳ್ಳಬೇಕು

ಎಂದರು. ಸಾಹಿತಿಯಾದವನಿಗೆ ಜಗತ್ತಿನ ಎಲ್ಲ ಜ್ಞಾನ ಶಾಖೆಗಳ ತಿಳುವಳಿಕೆ ಇರಬೇಕೆಂದು ನಿರೀಕ್ಷಿಸುವುದು ಬೇಡ.

ನಮ್ಮ ಸಾಹಿತಿಗಳು ಮಡಿವಂತಿಕೆ ತೊರೆದು, ಬದುಕಿನ ಬಗ್ಗೆ ಸಮಕಾಲೀನ ಸಮಸ್ಯೆಗಳ ಬಗ್ಗೆ ಬರೆಯುತ್ತಲೇ ಇರಬೇಕು. ಸರಳವಾಗಿ ಆಪ್ತವಾಗಿ ಬರೆದರಂತೂ ನಾಲ್ಕು ಜನರಿಗೆ ಹಿತವಾಗುತ್ತದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಇಲ್ಲಿಯವರೆಗೆ ಸಂಪುಟ ದರ್ಜೆ ಸಚಿವರಿಲ್ಲದಿರುವುದು ದುರದೃಷ್ಟಕರವಾದ ಸಂಗತಿ. ಕನ್ನಡ ಮತ್ತು ಸಂಸ್ಕೃತ ಇಲಾಖೆ ಅಧೀನದಲ್ಲಿ ಬರುವಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಹುದ್ದೆ ಸಂಪುಟ ದರ್ಜೆಯ ಸ್ಥಾನಮಾನ ಹೊಂದಿದೆ.

ಅಕಾಡೆಮಿಗಳ ಅಧ್ಯಕ್ಷರು ಹಾಗೂ ಸದಸ್ಯರ ನೇಮಕಾತಿ ಪ್ರಕ್ರಿಯೆಯನ್ನು ವಿಳಂಬ ಮಾಡಿದಷ್ಟು ಸಾಂಸ್ಕೃತಿಕ ಲೋಕವನ್ನು ಸರಕಾರವೇ ನಿಷ್ಕ್ರೀಯಗೊಳಿಸಿದಂತಾಗುತ್ತದೆ. ಅಕಾಡೆಮಿಗಳಿಗೆ ಅನುದಾನ ನೀಡುವಾಗಲೂ ಸರಕಾರ ವ್ಯಾಪ್ತಿ ಮತ್ತು ಕಾರ್ಯ ಬಾಹುಳ್ಯವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು.

"ಸಾಹಿತ್ಯ, ನಾಟಕ, ಲಲಿತಕಲಾ ಹಾಗೂ ಸಂಗೀತ ಅಕಾಡೆಮಿಗಳು ಅಖಿಲ ಕರ್ನಾಟಕವನ್ನು ಪ್ರತಿನಿದಿಸುತ್ತದೆ. ಅಕಾಡೆಮಿಗಳ ಖರ್ಚು ವೆಚ್ಚದ ಮೇಲೆ, ಸರಕಾರ ನಿಗಾ ಇಡುವುದು ಅಪೇಕ್ಷಣೀಯ. ಆದರೆ, ಕಾರ್ಯಕ್ರಮಗಳನ್ನು ಸಿದ್ಧಪಡಿಸುವಾಗ ಅಧಿಕಾರಿಗಳ ಅನಗತ್ಯ ಹಸ್ತಕ್ಷೇಪ ಇರಕೂಡದು."[೧]

ಭಾಷಾ ನೀತಿಯ ಬಗ್ಗೆ ಹತಗುಂದಿಯವರು ಹೇಳುವಾಗ – "ಕನ್ನಡ ಅನಾಥವಾಗಿದೆ ಎಂದರು. ಕರ್ನಾಟಕದಲ್ಲೇ ಕನ್ನಡ ಯಾರಿಗೂ ಬೇಡವಾಗಿದೆ. ಹೈಕೋರ್ಟ ತೀರ್ಪಿನಿಂದ ರಾಜ್ಯ ಸರಕಾರವು ಅಸಹಾಯಕವಾಗಿದೆ."[೨]

ಒಂದನೇ ತರಗತಿಯಿಂದ ಮಾತೃಭಾಷೆಯಲ್ಲೇ ಶಿಕ್ಷಣನೀಡಬೇಕೆಂಬುವುದು ರಾಜ್ಯ ಸರಕಾರದ ಭಾಷಾ ನೀತಿಯಾಗಿತ್ತು. ಈ ಕಾರಣಕ್ಕಾಗಿ ರಾಜ್ಯ ಸರಕಾರ ಇಂಗ್ಲೀಷ್ ಶಾಲೆಗಳಿಗೆ ಅನುಮತಿ

---

೧. ರಾಜಶೇಖರ ಹತಗುಂದಿ–ಎಡ ಹೊತ್ತಿನಪಯಣ–ಪು.೫೫
೨. ರಾಜಸೇಖರ ಹತಗುಂದಿ – ಎಡ ಹೊತ್ತಿನ ಪಯಣ –ಪು. ೮೨

ನೀಡುತ್ತಿರಲಿಲ್ಲ. ಆದರೆಹಲವಾರು ಶಿಕ್ಷಣಸಂಸ್ಥೆಗಳು ಕನ್ನಡದಲ್ಲೇ ಶಿಕ್ಷಣ ನೀಡುತ್ತೇವೆಂದು ಹೇಳಿ ಅನುಮತಿ ಪಡೆಯುತ್ತಿದ್ದವು. ನಂತರ ಆಂಗ್ಲ ಮಾಧ್ಯಮದಲ್ಲೇ ಶಿಕ್ಷಣ ನೀಡುತ್ತಿದ್ದವು.

ಶಿಕ್ಷಣ ಸಂಸ್ಥೆ ಅಧಿಅಕರಿಗಳು ಅಂಗ್ಲ ಶಿಕ್ಷಣಕ್ಕೆ ಅನುಮತಿಯಿಲ್ಲದಿದ್ದರೂ ಲಂಚ ರಿಷವತ್ತು ಕೊಟ್ಟು ನಿಬಾಯಿಸುತ್ತಿದ್ದರು. ಹೈಕೋರ್ಟ ಕೂಡ ಸರಕಾರದ ಭಾಷಾ ಮಾಧ್ಯಮ ನೀತಿಯನ್ನೇ ರದ್ದುಗೊಳಿಸಿ ತೀರ್ಪು ನೀಡಿದ್ದು ಬಹುದೊಡ್ಡ ದುರಂತ. ಹಯಕೋರ್ಟ ತೀರ್ಪನ್ನು ಇಟ್ಟುಕೊಂಡು ಆಂಗ್ಲ ಶಾಲೆ ತೆರೆಯಲು ಅನುಮತಿ ಕೋರುತ್ತಿರುವವರು ಮುಂದೊಂದು ದಿನ ಕನ್ನಡವನ್ನುಒಂದು ಭಾಷೆಯಾಗಿ ಕಲಿಸುವುದು ಇಷ್ಟವಿಲ್ಲ ಎಂದು ವಾದಿಸಬಹುದು.

ರಾಜ್ಯದಲ್ಲಿನ ಎಲ್ಲ ಕನ್ನಡಪರ ಸಂಘಟನೆಗಳು ಒಗ್ಗಟ್ಟಿನಿಂದ ಉಗ್ರ ಸ್ವರೂಪದ ಹೋರಾಟ ರೂಪಿಸಿದರೆ, ಆಂಗ್ಲ ಮಾಧ್ಯಮ ಶಾಲೆಗಳ ಮಾಫಿಯಾ ತತ್ತರಿಸಿ ಹೋಗುತ್ತದೆ. ಒಳ್ಳೆ ಗುಣಮಟ್ಟದ ಶಿಕ್ಷಣ ಕನ್ನಡ ಮಾಧ್ಯಮದಲ್ಲಿ ತಂದರೆ ಪಾಲಕರು ತಮ್ಮ ಮಕ್ಕಳನ್ನು ಕಳಿಸಿಯೇ ಕಳಿಸುತ್ತಾರೆ.

**೩. ಸಾಮಾಜಿಕ ವಿಚಾರಗಳು :**

"ಚಿತ್ರದುರ್ಗದಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಬಹುದೊಡ್ಡ ವಾಗ್ವಾದವೇ ಸೃಷ್ಟಿಸಿತು. ಪ್ರೊ. ಎಲ್. ಬಸವರಾಜುರವರ ಭಾಷಣ ಚರ್ಚೆಗೆ ಅವಕಾಶ ಮಾಡಿಕೊಟ್ಟಿದೆ. ಮಠ ಮಾನ್ಯಗಳಬಗೆಗಿನ ಒಟ್ಟಾರೆ ಅಭಿಪ್ರಾಯ ಚರ್ಚೆಗೊಳಪಡಿಸಿದ್ದಾರೆ."[೩]

ಈಗಿನ ಪರಿಸ್ಥಿತಿಯಲ್ಲಿ ನೋಡಿದರೆಯಾವ ರಾಜಕೀಯ ಪಕ್ಷಗಳು ಮಠ ಮಾನ್ಯಗಳನ್ನು ನಿರ್ಲಕ್ಷಿಸಿ ರಾಜಕಾರಣ ಮಾಡುವ ಸ್ಥಿತಿಯಲ್ಲಿಲ್ಲ. "ಮುಖ್ಯ ಮಂತ್ರಿ ಯಡಿಯೂರಪ್ಪನವರಂತೂ ರಾಜ್ಯದ ಬೊಕ್ಕಸದಿಂದ ಕೋಟಿಕೋಟಿ ಹಣ ದಾರೆ ಎರೆದಿದ್ದಾರೆ."[೪]

ಮಠಗಳ ಅನ್ನದಾಸೋಹ ಹಾಗೂ ಶಿಕ್ಷಣಕ್ಷೇತ್ರಕ್ಕೆ ನೀಡಿದ ಕೊಡುಗೆಗಳನ್ನು ನೋಡಿ ನೋಡಿ ಮಠಾಧೀಶರನ್ನು ಗೌರವದಿಂದ ಕಾಣಲಾಗುತ್ತದೆ. ಪ್ರೊ. ಎಲ್. ಬಸವರಾಜು ಅವರ ಮಾತುಗಳನ್ನು ಗಮನಿಸಿದರೆ ಸಾಹಿತ್ಯಕ್ಕೂ ಸರಕಾರಕ್ಕೂ ಯಾವ ಸಂಬಂದವಿಲ್ಲ. ಸರಕಾರದ ಹಂಗಿನಲ್ಲಿ ಸಾಹಿತ್ಯ ಬೆಳೆಯಬೆಕಿಲ್ಲ. ಸ್ವಾತಂತ್ರ್ಯೊಂದು ೬೦ ವರ್ಷಗಳಾದರೂ ದಲಿತರ ಸ್ಥಿತಿ

---

೩. ರಾಜಶೇಖರ ಹತಗುಂದಿ – ಎಡ ಹೊತ್ತಿನಪಯಣ – ಪು.ಸಂ. ೧೪೬

೪. ರಾಜಶೇಖರ ಹತಗುಂದಿ – ಎಡ ಹೊತ್ತಿನಪಯಣ – ಪು.ಸಂ. ೧೪೬

ದಯನೀಯವಾಗಿದೆ. ಅವರ ಮಕ್ಕಳಿಗಾಗಿವಿದ್ಯಾಭ್ಯಾಸ ಸಿಗುತ್ತಿಲ್ಲ, ತಿನ್ನಲು ಅನ್ನವಿಲ್ಲ, ಮನೆ ಇಲ್ಲ, ದಲಿತರನ್ನು ಕಡೆಗಣಿಸುವ ಸರಕಾರ ಬೇಕಿಲ್ಲ ಎಂದಿದ್ದಾರೆ.

ಪ್ರೊ. ಎಲ್. ಬಸವರಾಜು ದಲಿತರ ಕಾಳಜಿಯನ್ನು ಗಂಭೀರವಾಗಿ ಪರಿಗಣಿಸಿದ್ದಾರೆ. ಸಾಹಿತ್ಯ ಸಮ್ಮೇಳನಕ್ಕೆ ಮಠಾಧೀಶರು ಬರುವುದು ಬೇಡ ಎಂದಿದ್ದಾರೆ. ನಮ್ಮ ಸಮಾಜದಲ್ಲಿ ಅಥವಾ ಜೀವನದಲ್ಲಿಹಲವು ಸಲ ವಿಸ್ಮಯಕಾರಿ ಘಟನೆಗಳು ನಡೆಯುತ್ತವೆ. ಇದು ನನ್ನ ಗೆಳೆಯನ ಅನುಬವವೆಂದು ರಾಜಶೇಖರ ಹತಗುಂದಿಯವರು ಹೇಳುತ್ತಾರೆ. ನಿನ್ನೆ ಮೊನ್ನೆಪರಿಚಯವಾದ ಗೆಳೆಯ ನನಗಿಷ್ಟ್ಯಾಕೆ ಹತ್ತಿರವಾಗಿದ್ದಾನೆ ಎಂಬ ಪ್ರಶ್ನೆ ? "ಸುಮಾರು ೨೦ ವರ್ಷಗಳಹಿಂದೆ ನಾನು ಓದಿದ ಊರಲ್ಲೇ ಈ ಗೆಳೆಯ ಕೂಡ ಓದಿದ್ದಾನೆ. ಅತ ನಡೆದಾಡಿದ ಹೆಜ್ಜೆಗಳಲ್ಲಿ ನನ್ನ ಹೆಜ್ಜೆ ಗುರುತುಗಳಿವೆ. ಆತ ಸ್ಪರ್ಶಿಸಿದ ನೆಲ, ಜಲವನ್ನು ನಾನು ಮುಟ್ಟಿದ್ದೇನೆ. ನಾನು ಬಲ್ಲ ಅನೇಕರನ್ನು ಆತ ಸಂಪರ್ಕಿಸಿದ್ದಾನೆ. ಆ ಗೆಳೆಯ ಓದುತ್ತಿದ್ದ ಅವಧಿಯಲ್ಲಿ ನಾನು ಅಲ್ಲೆ ಓದುತ್ತಿದ್ದೆ. ಅದರೆ ಪರಿಚಯಕ್ಕೆ ಸ್ನೆಹಕ್ಕೆ ಅವಕಾಶವಿರಲಿಲ್ಲ. ನಮ್ಮಿಬ್ಬರ ಜಾತಿ ಬೇರೆಯಾಗಿದ್ದರೂ ಅಲೋಚನಾ ವಿಧಾನ ಒಂದೇ ಆಗಿತ್ತು."[೫]

ನನ್ನ ಗೆಳೆಯನ ಬದುಕಿನಲ್ಲಿ ಈ ಘಟನೆ ಸಂಭವಿಸಿದ್ದು, ನನಗೂ ಈ ಗುಂಗಿನಿಂದ ಹೊರ ಬರಲು ಅಗಲಿಲ್ಲ. ಅದೇನೆಂದರೆ, ಹೈಸ್ಕೂಲಿನಲ್ಲಿ ಗಣಿತ ಕಲಿಸಿದ ಮೇಷ್ಟ್ರು ಮೊನ್ನೆ ಸಿಕ್ಕಿದ್ದರಂತೆ ಮಹಾ ಪ್ರತಿಬಾವಂತರಂತೆ ಬಹಳ ದಿನಗಳಿಂದ ಸಿಕ್ಕ ಮೇಷ್ಟ್ರಿಗೆ ಕ್ಷೇಮ ಸಮಾಚಾರ ವಿಚಾರಿಸಿದನಂತೆ. ಮಕ್ಕಳು ಒಳ್ಳೆ ಕಡೆ ನೆಲೆಸಿದ್ದಾರೆ, ನನ್ನ ಹೆಂಡತಿಗೆ ಮಾತ್ರ ಗುಣವಾಗದ ಕಾಯಿಲೆ ನಿತ್ಯ ನರಳಾಟ ಎಲ್ಲ ಬಿಟ್ಟು ದೂರ ಎಲ್ಲೋ ಹೋಗಬೇಕೆಂಬ ತುಡಿತ ಜಾಸ್ತಿಯಾಗಿದೆ ಎಂದರು. ಮೇಷ್ಟ್ರು ಅಷ್ಟೇ ಅಲ್ಲದೇ ನನಗೊಬ್ಬ ಒಳ್ಳೆಯ ಜ್ಯೋತಿಷ್ಯಗೆ ಬೆಟಿಮಾಡಿಸು ಎಂದರು. ಗುರುಗಳ ಬೇಡಿಕೆಗೆ ಗೆಳೆಯ ಇಲ್ಲ ಹೇಗೆ ಎನ್ನುವುದು ಎಂದು ಜ್ಯೋತಿಷಿಗಳ ಬಳಿ ಕರೆದುಕೊಂಡು ಹೋದ. ಜ್ಯೋತಿಷಿಗಳಿ ಬಳಿ ಹೋದಾಗ ಮೇಷ್ಟ್ರು ಒಂದು ಪ್ರಶ್ನೆ ಕೇಳಿದರು. ಅದೇನೆಂದರೆ ನನ್ನ ಹೆಂಡ್ತಿ ಯಾವಾಗ ಸಾಯುತ್ತಾಳೆ ? ಹೇಳಿ ಎಂದರು. ಆಗ ಜ್ಯೋತಿಷಿ ಇಂಥ ಪ್ರಶ್ನೆಗಳನ್ನು ಕೇಳಬೇಡಿ ಹೊರಟುಹೋಗಿ ಎಂದು ಮೇಷ್ಟ್ರ ಗೋಳು ಒಂದೇ ಹೆಂಡ್ತಿ ಕಾಯಿಲೆಗೆ ಮದ್ದಿಲ್ಲ ಅವಳ ನರಳಾಟಕ್ಕೆ ಕೊನೆಯಿಲ್ಲ ಎಂದು ಕೊರಗುತ್ತಿದ್ದರು.

---

೫. ರಾಜಶೇಖರ ಹತಗುಂದಿ – ಎಡ ಹೊತ್ತಿನಪಯಣ ಪು.೧೮೭

"ಮರುದಿನ ಗೆಳೆಯನಿಗೆ ಮೇಷ್ಟ್ರ ಸಂಬಂಧಿಕರಿಂದ ಫೋನ ಕಾಲ ಬಂತು ಮೇಷ್ಟ್ರೂ ಹೋಗಿಬಿಟ್ಟರು..... ನೋವಿಲ್ಲ.... ನರಳಾಟವಿಲ್ಲ ಪುಣ್ಯದ ಸಾವು"[೧] ಎಂದು ಫೋನ ಕಟ್ ಮಾಡಿದರು. ಹೆಂಡತಿಯ ಸಾವು ಬಯಸಿದ ಮೇಷ್ಟ್ರು ತಾವೇ ಹೋಗಿಬಿಟ್ಟಡರೆಂದ ಗೆಳೆಯ ಆಶ್ಚರ್ಯ ಪಟ್ಟನು.

ಮನುಷ್ಯ ಸಾವನ್ನು ಬೆನ್ನ ಹಿಂದೆ ಕಟ್ಟಿಕೊಂಡು ಹೋಗುತ್ತಿದ್ದಾನೆ. ಅಧಿಕಾರದ ದಾಹ, ಹಣದಮೋಹ ಇವೆಲ್ಲ ಕ್ಷಣಿಕವಾದದ್ದು ಅದರೂ ಇಂದಿನ ಸಮಾಜದಲ್ಲಿ ಮನುಷ್ಯ ಈ ಅಸ್ತಿ-ಪಾಸ್ತಿ ನನ್ನದು ದಿನನಿತ್ಯದ ಕೊಲೆ-ಸುಲಿಗೆ, ಅತ್ಯಾಚಾರ ಇವೆಲ್ಲವುಗಳನ್ನು ನೋಡುತ್ತೇವೆ. ಒಟ್ಟಾರೆಯಾಗಿ ಹೇಳಬೇಕೆಂದರೆ, ಬದುಕು ನಿಗೂಢ..... ವಿಸ್ಮಯಗಳ ಅಗರ.

ಇಂದಿನ ಸಮಾಜದಲ್ಲಿ ನಾವು ನೋಡುತ್ತಿದ್ದೇವೆ. ಅನೇಕ ಜನ ದೇವರು, ಧರ್ಮಗಳಮೇಲೆ ದಲ್ಲಾಳಿಗಳ ಕೆಲಸ ಮಾಡುತ್ತಿದ್ದಾರೆ. ಇಲ್ಲಿ ನಾಸ್ತಿಕರಿಗಿಂತಲೂ ಅಸ್ತಿಕರ ಸಂಖ್ಯೆಯೇ ಜಾಸ್ತಿ ನಾಸ್ತಿಕರ ಮುಖವಾಡ ಹೊತ್ತ ಕೆಲವರು ಅಳದಲ್ಲಿ ದೈವ ಭಕ್ತರಾಗಿರುತ್ತಾರೆ. ದೇವರು ದರ್ಮ ಮತ್ತು ಭಕ್ತಿ ಸಮೂಹ 'ದಲ್ಲಾಳಿಗಳ' ವೈಭವಯುತವಾದ ಜೀವನಕ್ಕೆ ಸಾಧನಗಳಾಗಿವೆ.

ದೇವರಿರುವವರೆಗೂ ಜನರಲ್ಲಿ ಭಕ್ತಿ ಇರುತ್ತದೆ. ಇದು ನಿರಂತರ ಧಾರ್ಮಿಕ ದಲ್ಲಾಳಿಗಳಿಗೆ ದೇವರು ಕಾಮಧೇನು ಇದ್ದ ಹಾಗೆ ಅತ್ಯಂತ ಕುಗ್ರಾಮ ಹಳ್ಳಿಯಿಂದ ನಗರದ ಬೆಂಗಳೂರಿನವರೆಗೂ ಧಾರ್ಮಿಕ ದಲ್ಲಾಳಿಗಳು ನಾಯಿ ಕೊಡೆಗಳಂತೆ ಬೆಳೆದಿದ್ದಾರೆ. ನಾಡಿನಾದ್ಯಂತ ಹಬ್ಬಿರುವ ಮಠ ಮಾನ್ಯಗಳು, ಚರ್ಚಗಳು ಪಾದ್ರಿಗಳು, ಮಸೀದಿಯ ಮೌಲ್ಯಗಳು, ದೇವಸತಾನದ ಪೂಜಾರಿಗಳು.

"ರವಿಶಂಕರ ಗುರೂಜಿಯನ್ನು ನೋಡಿ ಈತನ ಸುದರ್ಶನಕ್ರೀಯಾ ಯೋಗ ಅಷ್ಟೇ ಈತನಿಗಿಂತ ಹೆಚ್ಚು ಪರಿಪೂರ್ಣವಾಗಿ ಕಲಿಸುವ ಗುರುಗಳು ರಾಜ್ಯಾದ್ಯಾಂತ ಇದ್ದಾರೆ. ಈತನ ಹೆಚ್ಚುಗಾರಿಕೆಯೆಂದರೆ ವ್ಯವಸ್ತಿತ ನೆಟವರ್ಕ್ ಹೊಂದಿರುವುದು ಹೊಗಳುವ ಮಾಧ್ಯಮದ್ದು, ಇವುಗಳಿಂದ ಅಂತರಾಷ್ಟ್ರೀಯ ಗುರೂಜಿ ಎನಿಸಿಕೊಂಡಿದ್ದಾರೆ. ದೇವರು ಧರ್ಮಮಾತ್ರ ಈತನ ಅಸಲಿ ಬಂಡವಾಳವಾಗಿದೆ."[೨]

---

೧. ರಾಜಶೇಖರ ಹತಗುಂದಿ – ಬಯಲು ಹುಡಿ ಪು.೮೦
೨. ರಾಜಶೇಖರ ಹತಗುಂದಿ – ಬಯಲು ಹುಡಿ ಪು.೮೧

ಒಬ್ಬ ವ್ಯಕ್ತಿ ಶ್ರೀಮಂತನಾಗಬೇಕಾದರೆ ತನ್ನದೇ ರೀತಿಯಲ್ಲಿ ಪ್ರಯತ್ನಿಸುತ್ತಾನೆ. ಅಧಿಕಾರಿಯಾಗಿದ್ದರೆ ಲಂಚ ಸ್ವೀಕರಿಸುತ್ತಾನೆ. ಗುತ್ತಿಗೆದಾರನಾಗಿದ್ದರೆ ಕಳಪೆ ಕಾಮಗಾರಿಯಾಗಿರುತ್ತಾರೆ, ಸುಳ್ಳುಬಿಲ್ ಮಾಡುತ್ತಾನೆ, ರಾಜಕಾರಣಿಯಾಗಿದ್ದರೆ 'ಕಿಕ್ ಬ್ಯಾಕ್' ಪಡೆದಿರುತ್ತಾನೆ. ವ್ಯಾಪಾರಿ ಯಾಗಿದ್ದರೆ ಕಳಪೆ ವಸ್ತುಗಳನ್ನು ಹೆಚ್ಚಿನ ಬೆಲೆಗೆ ಮಾರುತ್ತಾನೆ. ಈ ರೀತಿ ಸಮಾಜದಲ್ಲಿ ಕೊಂಡಿಯಂತೆ ನಡೆಯುತ್ತಲೇ ಬಂದಿದೆ.  ಪ್ರತಿಯೊಬ್ಬ ವ್ಯಕ್ತಿ ಪರಿಸ್ರಮ ಪಟ್ಟಿಯಿರುತ್ತದೆ. ಗೆದ್ದವನು ದೈವ ಎನ್ನುತ್ತಾರೆ ಸೋತವನು 'ಹಣೆ ಬರಹ' ಎನ್ನುತ್ತಾರೆ.

ದೇವರು ಮತ್ತು ಧರ್ಮ ನಿಮ್ಮ ನಂಬಿಕೆಯ ಭಾಗವಾಗಿರಬಹುದು ಇರಲಿ ಧರ್ಮದ ದಲ್ಲಾಳಿಗಳಿಂದ ಮಾತ್ರ ಎಚ್ಚರವಿರಿ ಎಂದರು. ಸಮಾಜದಲ್ಲಿನಾವು ಅನೇಕ ಜಾತಿಗಳನ್ನು ಕಾಣುತ್ತೇವೆ ಹಿಂದು, ಮುಸ್ಲಿಂ, ಸಿಖ್, ಇಸಾಯಿ, ಕ್ರಿಶ್ಚಿಯನ್, ಹೀಗೆ ಇದರಲ್ಲಿ ಮತ್ತೆ ಹಲವಾರುಪಂಗಡಗಳಿವೆ. ಎಸ್. ಎಲ್. ಭೈರಪ್ಪನವರು ಪ್ರಮುಖ ಕಾದಂಬರಿಕಾರರಲ್ಲಿ ಒಬ್ಬರು. "ಭೈರಪ್ಪನವರ ಕನ್ನಡ ಪರಂಪರೆಯ ಜೀವ ಸೆಲೆಯಂತಿರುವ ಪರಧರ್ಮ ಸಹಿಷ್ಣುತೆ ಹಾಗೂ ಜಾತ್ಯಾತೀತ ಮನೋಧರ್ಮದ ಕಡುವಿರೋಧಿ ಎನ್ನುವುದು ಅವರ ಕಾದಂಬರಿಗಳೇ ಸಾಬೀತುಪಡಿಸುವುದರಿಂದ ಅದನ್ನೊಂದು ಆರೋಪ ಎಂದು ಯಾರು ಭಾವಿಸಬೇಕಾಗಿಲ್ಲ."[೮] ಸೋನಿಯಾ ಗಾಂಧೀ ಕಾಂಗ್ರೆಸ್ ನೇತೃತ್ವ ವಹಿಸಿಕೊಂಡಾಗಿನಿಂದ ಮತಾಂತರ ಹೆಚ್ಚಾಗಿದೆ ಎನ್ನುತ್ತಾರೆ ಭೈರಪ್ಪನವರು.

ಸೋನಿಯಾ ಗಾಂದಿ ಸುತ್ತ ಮುತ್ತ ಅಹ್ಮದ್ ಪಟೇಲ್, ಆಸ್ಕರ ಫರ್ಡಿನಾಂಡಿಸ್, ಮಾರ್ಗರೇಟ್ ಆಳ್ವ, ಪ್ರಧಾನಿ ಮನ ಮೋಹನ ಸಿಂಗ್ ಹೀಗೆ ರಾಜಕೀಯದಲ್ಲಿ ಉನ್ನತ ಹುದ್ದೆಗಿದ್ದಾರೆ. ಬಸವಣ್ಣನವರ ಮೂಲಾಂಶ 'ವರ್ಣಸಂಕರ' ಅಸ್ಪೃಶ್ಯ ಸಮುದಾಯಗಳಿಗೆ ಸಾಮಾಜಿಕ ಸ್ಥಾನಮಾನ ಒದಗಿಸುವುದಾಗಿತ್ತು. ಕ್ರಿಶ್ಚಿಯನ್ ಮಿಷನರಿಗಳು  ಜನರ ಅಶೆ ಅವೇಶಗಳನ್ನು ಇಟ್ಟು ಮತಾಂತರ ಮಾಡಿಸಿಕೊಳ್ಳುತ್ತಿದ್ದಾರೆ. ಹಾಗೆ  ನೋಡಿದರೆ ಕ್ರಿಶ್ಚಿಯನ್ ಮಿಷನರಿಗಳು ಕರ್ನಾಟಕದಲ್ಲಿ ನೂರಾರು ವರ್ಷಗಳಿಂದ ಆಸ್ಪತ್ರೆ, ಶಾಲಾ ಕಾಲೇಜುಗಳಲ್ಲಿ ದುಡ್ಡು ವ್ಯಯ ಮಾಡಿ ಸಮಾಜ ಸೇವೆ ಮಾಡುತ್ತಿವೆ. ಅದರಲ್ಲೂ ಕ್ರೈಸ್ತ ಮತ ಪ್ರಚಾರ ಕೂಡಾ ಮಾಡುತ್ತಿದ್ದಾರೆ.

೮. ರಾಜಶೇಖರ ಹತಗುಂದಿ – ಬಯಲು ಹುಡಿ – ಪು.೯೩

ಬಸವಣ್ಣನವರು ಸಮ್ಮುಖದಲ್ಲಿ ಸಾಮೂಹಿಕ ಮತಾಂತರದಲ್ಲಿ ಬ್ರಾಹ್ಮಣರು ಸೇರಿದ್ದರು. ಬಸವಣ್ಣ ಆರಂಭಿಸಿದ ಚಳುವಳಿ ಬಹುದೊಡ್ಡ ಸಮುದಾಯ ಅಕರ್ಷಿಸಿತು. ಕ್ರಿಶ್ಚಿಯನ್ ಧರ್ಮದ ಮತಾಂತರಕ್ಕೆ ಒಳಗಾದವರೆಂದರೆ ಬಡವರು. ಕರ್ನಾಟಕದಲ್ಲಿ ಮಾದಿಗರು ಕ್ರಿಸ್ಚಿಯನ್ ಧರ್ಮಕ್ಕೆ ಮತಾಂತರಗೊಂಡರೆ, ಹೊಲೆಯರು ಬೌದ್ಧ ಧರ್ಮಕ್ಕೆ ಹೋಗುತ್ತಾರೆ. "ನಾಡಿನ ವೀರಶೈವ ಮಠಗಳು ಮತಾಂತರ ಶುರು ಮಾಡಿದರೆ ವೀರಶೈವರಾಗಲು ಸಿದ್ಧರಾಗಿದ್ದಾರೆ. ಅಷ್ಟಕ್ಕೂ ಈಗಿನ ವೀರಶೈವರು ಹನ್ನೆರಡನೆ ಶತಮಾನದ ದಲಿತ ಬಂಧುಗಳ್"[೯]

**೪. ಸಾಂಸ್ಕೃತಿಕ ಅಂಶಗಳು :**

ನಮ್ಮ ಭಾರತದಲ್ಲಿ ನಾವು ಹಲವಾರು ರೀತಿಯ ಸಂಸ್ಕೃತಿಗಳನ್ನು ನೋಡುತ್ತೇವೆ. ಅದರಲ್ಲಿ ರಾಜಶೇಖರ ಹತಗುಂದಿಯವರು ಬರೆದಂಥ ಸಾಂಸ್ಕೃತಿಕ ಸಣ್ಣತನದ ಬಗ್ಗೆ ಇಲ್ಲಿ ಬರೆದಿದ್ದಾರೆ. ಕೇಂದ್ರದಲ್ಲಿ ನಾಟಕ, ಸಂಗೀತ ಹಾಗೂ ನೃತ್ಯಕ್ಕೆ ಒಂದೇ ಅಕಾಡೆಮಿ ಇದೆ. ಕರ್ನಾಟಕದಲ್ಲೂ ಕೂಡಾ ಒಂದೇ ಅಗಿತ್ತು.ಕೆಲವು ಮಡಿವಂತರು ಸೇರಿ ಸರ್ಕಾರದ ಮೇಲೆ ಒತ್ತಡ ತಂದು ನೃತ್ಯಕ್ಕೆ ಪ್ರತ್ಯೇಕ ಅಕಾಡೆಮಿ ಮಾಡಿಸಿಕೊಂಡರು. ನೃತ್ಯಕ್ಕೆ ಪ್ರತ್ಯೇಕ ಅಕಾಡೆಮಿ ಬೇಕು ಎಂದು ಒತ್ತಾಯಿಸಿದ ಮಡಿವಂತರು ಈಗ ಮೈಸೂರಿನಲ್ಲಿ ಸ್ಥಾಪಿಸಲಾದ ಸಂಗೀತ ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯಕ್ಕೆ ಗಂಗೂಬಾಯಿ ಹಾನಗಲ್ ಹೆಸರಿಡಲು ಗದ್ದಲ ಎಬ್ಬಿಸಿದರು.

"ಗಂಗೂಬಾಯಿ ಹಾನಗಲ್ ಹೆಸರಿಟ್ಟಿರುವುದನ್ನು ವಿರೋಧಿಸುತ್ತಿರುವವರ ತರ್ಕವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಆಳದಲ್ಲಿ ಜಾತಿಯತೆ ಸಣ್ಣತನ ಇರುವುದು ಮನದಟ್ಟಾಗುತ್ತದೆ. ಗಂಗೂಬಾಯಿ ಹಾನಗಲ್‌ರು ಹಿಂದೂಸ್ಥಾನಿ ಗಾಯನ ಕ್ಷೇತ್ರದಲ್ಲಿ ಸಾದನೆ ಮಾಡಿದವರು. ಇವರು ಉತ್ತರ ಕರ್ನಾಟಕದವರು."[೧೦] ಮೈಸೂರಿನಲ್ಲಿ ಸ್ಥಾಪನೆಯಾದ ವಿಶ್ವವಿದ್ಯಾಲಯಕ್ಕೆ ಅವರ ಹೆಸರಿಟ್ಟರೆ ಈ ಭಾಗದ ಸಂಗೀತ ದಿಗ್ಗಜರಿಗೆ ಅಪಮಾನಿಸಿದಂತಾಗುತ್ತದೆ.

"ಖ್ಯಾತ ಹಿಂದೂಸ್ಥಾನಿ ಗಾಯಕಿ ಗಂಗೂಬಾಯಿ ಹಾನಗಲ್ ಹಿಂದುಳಿದ ಸಮುದಾಯಕ್ಕೆ ಸೇರಿದವರು. ಅವರು ಯಾವತ್ತೂ ಜಾತಿಯನ್ನು ಬಳಸಿಕೊಂಡವರಲ್ಲ. ನಿರಂತರ ಸಾಧನೆಯಿಂದ ಎತ್ತರಕ್ಕೆ ಎರಿದವರು. ಅವರಿಗೆ ಜಾತಿಯ ಹಿನ್ನಲೆಯಿಂದ ಕೆಲವೊಂದು ಪುರಸ್ಕಾರಗಳು ತಪ್ಪಿವೆ.

---

೯. ರಾಜಶೆಖರ ಹತಗುಂದಿ – ಬಯಲು ಹುಡಿ, ಪು.೯೫

೧೦. ರಾಜಶೇಖರ ಹತಗುಂದಿ – ಎಡ ಹೊತ್ತಿನ ಪಯಣ – ಪು.೧೭೧

ಭೀಮಸೇನ ಜೋಶಿಗಿಂತಲೂ ದೊಡ್ಡವರು ಸಾಧನೆಯಲ್ಲಿ ಎಂದು ಹಿಂದೆ ಬಿದ್ದಿಲ್ಲ. ಅವರಿಗೆ 'ಭಾರತ ರತ್ನ' ಪ್ರಶಸ್ತಿ ಎಂದೋ ಸಿಗಬೇಕಾಗಿತ್ತು ಆದರೆ ಅದು ಜೋಶಿಯವರ ಪಾಲಾಯಿತು. ಆದರೂ ಗಂಗೂಬಾಯಿಯವರು ಸಣ್ಣತನ ತೋರಲಿಲ್ಲ. ಈಗ ಮೈಸೂರು ಸಂಗೀತ ವಿಶ್ವವಿದ್ಯಾಲಯಕ್ಕೆ ಗಂಗೂಬಾಯಿ ಹಾನಗಲ್ ಹೆಸರಿಟ್ಟಿದ್ದಾರೆ."[೧೧]

ಸಾಂಸ್ಕೃತಿಕ ಲೋಕದಲ್ಲಿ ಮೊದಲಿನಿಂದಲೂ ಇರುವವರು ಉಳಿದ ಸಮುದಾಯಗಳ ಪ್ರತಿಭಾವಂತರನ್ನು ಗೌರವಿಸುವುದು ಕಲಿಯಬೇಕು. ಸರಕಾರ ಕೂಡಾ ನಾಲ್ಕು ಜನ ಮಡಿವಂತರ ಮಾತು ಕೇಳಿ ವಿಶ್ವವಿದ್ಯಾಲಯದ ಹೆಸರನ್ನು ಬದಲಾಯಿಸಬಾರದು.

ಭಾರತದಲ್ಲಿ ಧರ್ಮ ಹಾಗೂ ಸಂಸ್ಕೃತಿಗೆ ಯಾವತ್ತು ಮರುಳಾಗಿದ್ದಾರೆ. 'ಜನ ಮರುಳೋ ಜಾತ್ರೆ ಮರುಳೋ".... ಭರತದಲ್ಲಿಪ್ರತಿ ವರ್ಷ ಸಂಭವಿಸುತ್ತಲೇ ಇರುತ್ತದೆ. ದೇವರ ಸನ್ನಿಧಾನದಲ್ಲಿ ನೂರಾರು ಜನ ಭಕ್ತರು ಹುಳುಗಳಂತೆ ಸಾಯುತ್ತಿರುತ್ತಾರೆ.

ಉತ್ತರ ಭಾರತ ಯಾತ್ರಾ ಸ್ಥಳಗಳಿಗೆ ಹೆಸರುವಾಸಿಯಾಗಿದೆ. ಹಾಗೆ ಕಾಲ್ತುಳಿದ ಸಾವಿಗೂ ಉತ್ತರ ಭಾರತದ ಕೇದರನಾಥದಲ್ಲಿ ಕೂಡಾ ಮೊನ್ನೆ ನೆರೆ ಹಾವಳಿ ಪೂರ ಬಂದು ಸಾವಿರಾರು ಜನ ಮರಣವನ್ನಪ್ಪಿದರು. ಹಿಮಾಚಲ ಪ್ರದೇಶದ ನೈನಾದೇವಿ ದೇವಾಲಯದಲ್ಲಿ ನೂರಾ ಐವತ್ತಕ್ಕೂ ಹೆಚ್ಚು ಜನ ಕಾಲ್ತುಳಿದತಲ್ಲಿ ಮರಣವನ್ನಪ್ಪಿದರು.

ಭಕ್ತಿ ಮತ್ತು ಜಾತಿ ಭಾರತದಲ್ಲಿ ಮಾತ್ರ ಮಿತಿಮೀರಿ ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ. "ಭಾರತೀಯ ಅಧ್ಯಾತ್ಮ, ತತ್ವಜ್ಞಾನ ಹಾಗೂ ಧರ್ಮವನ್ನು ಪ್ರಖರ ವೈಚಾರಿಕೆತೆಯ ಬೆಳಕಿನಲ್ಲಿಜಗತ್ತಿಗೆ ಸಾರಿ ಹೇಳಿದವರು ಸ್ವಾಮಿ ವಿವೇಕಾನಂದರು"[೧೨], ಬುದ್ದ, ವಿವೇಕಾನಂದರ ವೈಚಾರಿಕತೆ ಜನ ಸಾಮಾನ್ಯರಲ್ಲಿ ಬೆರೆತು ಹೋಗಿದ್ದರೆ ಉನ್ಮಾದತೆ ಕಡಿಮೆಯಾಗುತ್ತೇನೋ ಎನ್ನುವರು ಹತಗುಂದಿಯವರು.

ದಕ್ಷಿಣ ರಾಜ್ಯಗಳ ಸಾಮಾಜಿಕ, ರಾಜಕೀಯ, ಆರ್ಥಿಕ ಸ್ಥಿತಿಗತಿ ಪೆರಿಯಾರ, ಬಸವ, ಅಂಬೇಡ್ಕರ್ ಹಾಗೂ ಕಮ್ಯುನಿಸ್ಟ್ ಚಳುವಳಿಯ ಪ್ರಭಾವಲಯ ಭಕ್ತಿಯ ಸ್ವರೂಪದ ಮೇಲೆಪರಿಣಾಮ

---

೧೧. ರಾಜಶೇಖರ ಹತಗುಂದಿ – ಎಡ ಹೊತ್ತಿನ ಪಯಣ – ಪು.೧೭೩.
೧೨. ರಾಜಶೇಖರ ಹತಗುಂದಿ – ಎಡ ಹೊತ್ತಿನ ಪಯಣ –ಪು. ೧೫೧.

ಬೀರಿದಂತಿದೆ. ಉತ್ತರದ ರಾಜ್ಯಗಳಿಗೆಹೋಲಿಸಿದರೆ, ದಕ್ಷಿಣ ರಾಜ್ಯಗಳ ಬದುಕು, ಹರಿಯುವ ನದಿಗಳ ಭೋರ್ಗರತೆ ಬಡತನಪ್ರಮಾಣ ಎಲ್ಲವೂ ಸಮಾಧಾನವಾಗಿದೆ. ಉತ್ತರ ಭಾರತದಲ್ಲಿ ಇವರ ವಿರುದ್ಧ ಇದ್ದ ಕಾರಣ ಹತಾಶಯವಾದ ಮನಸ್ಸು ಭಕ್ತಿಯ ಉನ್ಮಾದಕತೆಗೆ ಮೊರೆ ಹೋಗುತ್ತದೆ.

ಜನರಲ್ಲಿ ಆತ್ಮ ವಿಸ್ವಾಸದ ಕೊರತೆ, ಮೌಢ್ಯತೆ ತಪ್ಪಿಸಲೆಂದೇ ಬಸವಣ್ಣನವರು ಎನ್ನ ಕಾಲೇ ಕಂಬ, ದೇಹವೇ ದೇಗುಲ, ಶಿರವೇ ಹೊನ್ನ ಕಳಸವೆಂದು ಹೊಸ ಸಿದ್ಧಾಂತವೊಂದು ಪ್ರತಿಪಾದಿಸಿದರು. ಭಕ್ತ ಸಮೂಹದ ವೈಚಾರಿಕ ನೆಲೆ ವಿಸ್ತರಿಸಲು ಹೆಚ್ಚೆಚ್ಚು ಪ್ರಯತ್ನಿಸಿದಾಗ ಕಾಲ್ತುಳಿತಕ್ಕೆ ಸಾಯುವ ಘಟನೆಗಳು ಕಡಿಮೆಯಾಗುತ್ತಾ ಹೋಗುತ್ತದೆ.

ಭಾರತ ಸಾಂಪ್ರದಾಯಿಕ ಒಂದು ರಾಷ್ಟ್ರ ಎನ್ನಲಾಗುತ್ತಿತ್ತು. ಜನ ಪಾಶ್ಚಿಮಾತ್ಯ ಪದ್ಧತಿಗೆ ಮಾರು ಹೋಗುತ್ತಿದ್ದಾರೆ. ಬ್ರಿಟಿಷರು ಇಂಗ್ಲೀಷ್ ಭಾಷೆ, ಸಂಸ್ಕೃತಿ, ಉಡುಗೆ, ತೊಡುಗೆ, ಟೀ, ಕಾಫಿ,ಹೀಗೆ ಹಲವಾರು ವಿಷಯಗಳನ್ನು ಭಾರತೀಯರು ಸಂಭ್ರಮದಿಂದ ಅನುಕರಿಸಿದರು. "ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕರೂ ಬ್ರಿಟಿಷರ ಜೀವನ ಪದ್ಧತಿಯನ್ನು ಯಥಾವತ್ತಾಗಿ ಉಳಿಸಿಕೊಂಡು ಭಾರತ ಸರಕಾರವೂ ಪರೋಕ್ಷ 'ವಸಾಹತು' ಪ್ರಜ್ಞೆಯನ್ನು ಆಧುನಿಕವಾದುದು ಎಂದು ಬೆಂಬಲಿಸಿತು."[೧೩]

"ಹೋಮ-ಹವನ ನಡೆಸುವ ಸಂಸ್ಕೃತಿ ನಮ್ಮ ಗರ್ಭಗುಡಿಯಲ್ಲಿದೆ. ಆದರೆ ಯಡಿಯೂರಪ್ಪನವರು ವಿದಾನ ಸಭೆಯಲ್ಲಿಯೇ ಹೋಮ ಹವನ ಮಾಡಿಸಿದ್ದಾರೆ. ಯಡಿಯೂರಪ್ಪನವರು ಸಂವಿದಾನವನ್ನು ಮಾತ್ರವಲ್ಲ, ಜನಪರವಾಗಿರುವ ಎಲ್ಲಮವಲ್ಯಗಳನ್ನು ಧಿಕ್ಕರಿಸಿದ್ದಾರೆ ಎಂದಿದ್ದಾರೆ."[೧೪] ಪೂಜೆ ಪುನಸ್ಕಾರಗಳು ಮನೆಗೆ ಮಾತ್ರ ಸೀಮಿತವಿರಬೇಕೆ ಹೊರತು ಸಾರ್ವಜನಿಕ ಸ್ಥಳಗಳಲ್ಲಿ ಅಲ್ಲ.

**೫. ವ್ಯಕ್ತಿ ಚಿತ್ರಣ :**

ರಾಜಶೇಖರ ಹತಗುಂದಿಯವರು ತಮ್ಮ ಅಂಕಣ ಸಾಹಿತ್ಯದಲ್ಲಿ ವ್ಯಕ್ತಿ ಚಿತ್ರಣವನ್ನು ತುಂಬಾ ಮಾರ್ಮಿಕವಾಗಿ ನೀಡಿದ್ದಾರೆ.

---

೧೩. ರಾಜಶೇಖರ ಹತಗುಂದಿ – ಬಯಲು ಹುಡಿ – ಪು. ೪೮.
೧೪. ರಾಜಶೇಖರ ಹತಗುಂದಿ – ಬಯಲು ಹುಡಿ – ಪು. ೧೦೦.

ಲೋಕಸಭೆ ಚುನಾವಣೆ ಇನ್ನು ಆರೇಳು ದಿನಗಳಿದಾಗ ಕಾಂಗ್ರೆಸ್ಸಿನಹಿರಿಯ ಮುಖಂಡ ಖರ್ಗೆಯುವರನ್ನು ಸಂದರ್ಶನ ಮಾಡಲು ಗುಲಬರ್ಗಾಕ್ಕೆಹೋಗಿದ್ದೆ ಚುನಾವಣೆ ಸಂದರ್ಭವಾಗಿದ್ದರಿಂದ ವಾಹನದಲ್ಲೇ ಸಂದರ್ಶನ ಮಾಡಲು ಅನುಮತಿನೀಡಿದರು. ಹತಗುಂದಿಯವರು ಖರ್ಗೆಯವರ ಮನೆಯಾದ ಲುಂಬಿಣಿನಿವಾಸಕ್ಕೆ ಹೋದರು ಗಾಡಿ ರೇಡಿಇತ್ತು ಎಲ್ಲರು ಗಾಡಿಹತ್ತಿದರು. ವಾಹನ ಜೇವರ್ಗಿಕಡೆ ಸಾಗುತ್ತಿತ್ತು.

ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಸೋಲಿಸಲು ಕೋಮು ಶಕ್ತಿ ಯಾವ ಪ್ರಭಾವ ಬೀರಿದೆ ಎಂಬುದನ್ನು ಹೆಚ್ಚು ಮಾತನಾಡಿದರು. ಮಲ್ಲಿಕಾರ್ಜುನ ಖರ್ಗೆಯವರ ಜೊತೆಗೆ ಅಲ್ಲಂ ಪ್ರಭುಪಾಟೀಲರು ಪರಪ್ರಚಾರಕ್ಕಾಗಿ ಬಂದ ಇನ್ನೊಬ್ಬರು ಬೆಂಗಳೂರಿನಿಂದ ಎಂ.ಬಿ. ರಾಜಶೇಖರನಾಂತ.

ಜೇವರ್ಗಿ ಬಂತು ಖರ್ಗೆಯವರುಹತಗುಂದಿಯವರನ್ನು 'ಚಹಾ' ಕುಡಿದು ಹೋಗಿರಿ ಎಂದು ಒತ್ತಾಯಿಸಿದರು. ಕಾಂಗ್ರೆಸ್ ಕಾರ್ಯಕರ್ತರ ಅಂಗಡಿಗೆ ಹೋದರು ರಾಜಶೇಖರನ್, ಹತಗುಂದಿಯವರೊಂದಿಗೆ  ಮಾತಿಗಿಳಿದರು. ಕಾಂಗ್ರೆಸ್ ಹಾದಿತಪ್ಪುತ್ತಿರುವ ಬಗೆಯ ಬಗ್ಗೆ ಮಾತನಾಡಿದರು. ಉತ್ತರ ಕರ್ನಾಟಕದಲ್ಲಿ ಮುಖ್ಯವಾಗಿ ಬಿ.ಜೆ.ಪಿ.ನೆಲೆ ಏಕೆ ಗಟ್ಟಿಯಾಗುತ್ತದೆ ಕಾಂಗ್ರೆಸ್ಸಿನವರುಎಲ್ಲಿ ಎಡವುತ್ತಿದೆದಾರೆ ಎಂಬ ಸಂಗತಿ ಕುರಿತು ಮಾತನಾಡಿದರು. ರಾಜಶೇಖರನ ಪ್ರಚಾರಕ್ಕಾಗಿ ಹೋಗಬೇಕು ಬೆಂಗಳೂರಿನಲ್ಲಿಬಿಡುವಾದಾಗ ಬನ್ನಿ ಎಂದು ವಿಜಿಟಿಂಗ್ಕಾರ್ಡ ಕೊಟ್ಟು ಹೋದರು  ಮುಂದೆ ರಾಜಶೆಖರನ್ನರು ಹತಗುಂದಿಯವರಿಗೆ ಒಂದು ಪತ್ರ ಬರೆದರು.ಜೇವರ್ಗಿಯಲ್ಲಿನ ಭೇಟಿ, ಚರ್ಚೆ ನೆನಪಿಸಿಕೊಂಡು ಪತ್ರ ಬರೆದಿದ್ದರು. ಅವರ ಸೌಜನ್ಯ ಸಜ್ಜನಿಕೆಗೆ ಹತಗುಂದಿ ಬೆರಗಾದರು.

'ಪ್ರಜಾಸತ್ತಾತ್ಮಕ ಮೌಲ್ಯಗಳ ರಕ್ಷಣೆಗಾಗಿ ಮಾಧ್ಯಮಗಳ ಪಾತ್ರ ಪ್ರಮುಖವಾದುದು" ಎಂದು ರಾಜಶೆಖರನ ಪತ್ರ ಬರೆದಿದ್ದರು. ಎಂ.ವಿ. ರಾಜಶೇಖರನ್ ಕೇಂದ್ರ ಮಂತ್ರಿಯಾಗಿದ್ದರು. ಹಣ ಮತ್ತು ಅಧಿಕಾರ ವ್ಯಕ್ತಿಯ ನಡವಳಿಕೆಯನ್ನು ಬದಲಾಯಿಸಿ ಬಿಡುತ್ತದೆ. ಆದರೆ ರಾಜಶೇಖರನ ಅವರಸರಳತೆ ಮೌಲಿಕವಾದದ್ದು.  ಮಹಾತ್ಮಾ ಗಾಂಧಿ ತತ್ವಾದರ್ಶಗಳಲ್ಲಿ ನಂಬಿಕೆ ಇರಿಸಿರುವ ಅವರು ನುಡಿದಂತೆ ನಡೆದು ತೋರಬಲ್ಲ ಹೃದಯವುಳ್ಳವರು. ಎಂ.ವಿ. ರಾಜಶೇಖರನ ಸರಳ,

ಸಜ್ಜನಿಕೆ, ಶಿಸ್ತು ಉಳ್ಳವರು ಇವರು ಕಾಂಗ್ರೆಸ್ಸಿಗಷ್ಟೇ ಅಲ್ಲ ಸಾರ್ವಜನಿಕರ ಬದುಕಿಗೂ ಮಾದರಿಯಾಗಿದ್ದಾರೆ.

ಜನಪ್ರೀಯತೆ ಗಳಿಸಿಕೊಂಡಿದ್ದ ಎಚ್.ಡಿ. ಕುಮಾರ ಸ್ವಾಮಿಯವರು  ಸದ್ಯ ಜನತೆಯ ಕಣ್ಣಲ್ಲಿ ಸಣ್ಣವರಾಗಿ ಕಾಣುತ್ತಿದ್ದಾರೆ.  ಗ್ರಾಮೀಣ ಸಮುದಾಯದಲ್ಲಿ ದಿನನಿತ್ಯದ ವ್ಯವಹಾರಗಳ ಆರಂಭ ಮತ್ತು ಅಂತ್ಯ ಕೊಟ್ಟ ಮಾತಿಗೆ ತಪ್ಪಬಾರದು ಎನ್ನುವ ನೀತಿ ಸಂಹಿತೆಯ ಮೇಲೆಯೇನಿಂತಿದೆ. ಕೊಟ್ಟ ಮಾತಿಗೆ ತಪ್ಪಿ ನಡೆದರೆ ಮೆಚ್ಚನಾ ಪರಮಾತ್ಮನು ಎಂಬ ಗೋವಿನ ಹಾಡಿನ ಈ ಸಾಲುಗಳು ಸಮುದಾಯಗಳ ನಂಬಿಕೆಯ ಭಾಗವಾಗಿಬಿಟ್ಟಿವೆ.

ಸ್ಪೀಕರ ಹುದ್ದೆ ದೊಡ್ಡದು ಎನ್ನುವುದು ಎಲ್ಲರಿಗೂ ಗೊತ್ತಿದೆ. ಅದರೆ ಅದು ಲಾಭದಾಯಕವಲ್ಲ ಎಂಬ ಕಾರಣಕ್ಕೆ ಎಲ್ಲರೂಮಂತ್ರಿಯಾಗಲು ಹಪಹಪಿಸುತ್ತಾರೆ. ಸ್ಪೀಕರ್ ಸ್ಥಾನದ ಘನತೆ ತಗ್ಗಿಸುವಲ್ಲಿ ಮಾಧ್ಯಮದವರ ಪಾತ್ರವೂ ಬಹಳ ದೊಡ್ಡದಿದೆ. ಹಾಗೆಯೇ ಕೆಲ ಖಾತೆಗಳ ಬಗ್ಗೆಯೂ ತಾತ್ಸಾರದ ಮಾತುಗಳುಕೆಳಿಬರುತ್ತವೆ.  ಮಲ್ಲಿಕಾಜುನ ಖಗೆಯವರಿಗೆಕಾಮಿಕ ಖಾತೆನೀಡಿದಾಗ ಮಾಧ್ಯಮದವರು ಕೆಲಸಕ್ಕೆ ಬಾರದ ಖಾತೆ ನೀಡಲಾಗಿದೆ ಎಂದು ಟೀಕಿಸಿದರು... ಅದರರ್ಥ ಕಮಾಯಿ ಇಲ್ಲದ ಖಾತೆ ಎಂದು ಮೂದಲಿಸಿದಂತೆ.

ಈ ಹಿಂದೆ ಅರಸು, ರಾಮಕೃಷ್ಣ ಹೆಗಡೆಯವರ ಸಂಪುಟದಲ್ಲಿ ಮಂತ್ರಿಯಾಗಿದ್ದ ಹಲವರ ಕಮಾಯಿ ಇಲ್ಲದ ಖಾತೆಗಳಲ್ಲಿದ್ದೇ ಹೆಸರು ಮಾಡಿದ್ದರು. ದೇವರಾಜು ಅರಸು ಅವರು ಮೊದಲ ಬಾರಿಗೆ ಸಚಿವರಾದಾಗ ಕಾಮಿಕ ಖಾತೆ ನೀಡಲಾಗಿತ್ತು. ಅವರ ಅ ಖಾತೆಯಲ್ಲೇ ಜನ ಮೆಚ್ಚುವ ಕೆಲಸ ಮಾಡಿ ತೋರಿಸಿದರು. ಅಬ್ದುಲ ನಜೀರ್ ಸಾಬರು ಖಾತೆಯಲ್ಲೇ ಜನ ಮೆಚ್ಚುವ ಕೆಲಸ ಮಾಡಿ ತೋರಿಸಿದರು.

ಸ್ಪೀಕರ ಹುದ್ದೆ ಬೇಡ, ಜವಳಿ ಖಾತೆ ಬೇಡ ಎಂದೆಲ್ಲ ಹೇಳುವವರ ಮನಸ್ಸಲ್ಲಿ ಸಮಾಜ ಸೇವೆ ಮಾಡುವ ಇರಾದೆಯೇ ಇರುವದಿಲ್ಲ. ಕಮಾಯಿ ತರುವ ಮಂತ್ರಿಗಿರಿಪಡೆದು ಲೂಟಿ ಹೊಡೆಯುವುದೇ ಅವರ ಗುರಿಯಾಗಿರುತ್ತದೆ. ಸಮಾಜವಾದಿ ಹಿನ್ನಲೆಯಿಂದ ಬಂದ ಎಂ.ಪಿ. ಪ್ರಕಾಶ್‌ರ ಅರೋಗ್ಯ ಸರಿಯಿಲ್ಲ ಎಂದು ಗೆಳೆಯರು ಹೆಳಿದಾಗ ಒಂದು ಕ್ಷಣ ನಂಬಲಾಗಲಿಲ್ಲ. ಯಾರಿಗೂ, ಯಾವತ್ತೂ ಕೆಡುಕನ್ನು ಬಯಸದ ಎಂ.ಪಿ. ಪ್ರಕಾಶ್ ನಿಜಾರ್ಥದಲ್ಲಿ

ಅಜಾತಶತ್ರುವಾಗಿದ್ದರು. ಸಮಾಜವಾದಿ ಆಂದೋಲನದ ಮೂಲಕ ರಾಜಕೀಯ ಪ್ರವೇಶಿಸಿದ ಪ್ರಕಾಶ್ ರಂಗಭೂಮಿಯ ಬಗ್ಗೆ ಒಲವುಳ್ಳ ಸಂವೇದನಾಶೀಲ ವ್ಯಕ್ತಿ.

೧೯೮೩ ರಲ್ಲಿ ಹೂವಿನ ಹಡಗಲಿ ಕ್ಷೇತ್ರದಿಂದ ಸಾಸಕರಾಗಿ ಗೆದ್ದು ಬಂದ ಪ್ರಕಾಶ ಕಾಂಗ್ರೆಸ್ ವಿರೋದಿ ರಅಜಕಾರಣ ಮಾಡುತ್ತಾ ಬಂದವರು. ಜನತಾ ಪರಿವಾರದ ಮುಖಂಡದಲ್ಲಿನ ಒಳಜಗಳಗಳಿಂದ ಬೇಸತ್ತ ಅವರು ಕಳೆದ ವಿದಾನ ಸಭೆ ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ಸೇರಿಕೊಂಡರು. ಪ್ರಕಾಶ್‌ರಿಗೆ ಸೋಲು–ಗೆಲವು ಹೊಸದಾಗಿರಲಿಲ್ಲ. ಅಧಿಕಾರ ಇದ್ದಾಗ, ಇಲ್ಲದಾಗ ಅವರು ಪ್ರಾಮುಖ್ಯತೆ ಉಳಿಸಿಕೊಂಡವರು. ಕರುಣಾಕರ ರೆಡ್ಡಿಯ ವಿರುದ್ಧ ಪ್ರಕಾಶ ಸೋತಾಗ ನಾಡಿನ ಎಲ್ಲ ಪ್ರಗತಿಪರರು ನೊಂದುಕೊಂಡಿದ್ದರು.

ಮೊದಲ ಬಾರಿಗೆ ರಾಮಕರಷ್ಣ ಹೆಗಡೆಯವರ ಮಂತ್ರಿಮಂಡಲದಲ್ಲಿ ಮಂತ್ರಿಯಾದ ಎಂ.ಪಿ.ಪ್ರಕಾಶ ರಾಜ್ಯಕ್ಕೆ ಮಾದರಿ ಎನಿಸುವ ಆಡಳಿತ ನೀಡಿದವರು. ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಬಗ್ಗೆ ಸಾಹಿತಿಗಳಷ್ಟೇ ಅಧೀಕೃತವಾಗಿ ಮಾತಾಡುವ ಅವರು ನಮ್ಮನಡುವಿನ ಅಪರೂಪದ ರಾಜಕಾರಣಿಯಾಗಿದ್ದರು.

ಕನ್ನಡ ವಿಸ್ವವಿದ್ಯಾಲಯದ ಸ್ಥಾಪನೆಯಿಂದ ಹಿಡಿದು ಅಲ್ಲಿಗೆ ಕುಲಪತಿ, ಸಿಂಡಿಕೇಟ್ ಸದಸ್ಯರ ನೇಮಕ ಮಾಡುವವರೆಗೂ ಪ್ರಕಾಶ್ ನಿಗಾ ವಹಿಸುತ್ತಿದ್ದರು. ಎಂ.ಪಿ.ಪ್ರಕಾಶ್ ಯಾವುದೇ ಖಾತೆಯ ಮಂತ್ರಿಯಾಗಿದ್ದರೂ, ವಿವಿಧ ಅಕಾಡೆಮಿಗಳ ಅಧ್ಯಕ್ಷ ಮತ್ತು ಸದಸ್ಯರ ನೇಮಕಾತಿ ಹೊಣೆಗಾರಿಕೆಯನ್ನು ಅವರಿಗೆ ವಹಿಸಿಕೊಡಲಾಗುತ್ತಿತ್ತು.

ಸಾರಿಗೆ ಮಂತ್ರಿಯಾಗಿ ಹಳ್ಳಿ ಹಳ್ಳಿಗಳಿಗೆ ಬಸ್ ಹೋಗುವಂತೆ ಮಾಡಿದರು. ಕಂದಾಯ ಪಂಚಾಯತ್ ರಾಜ್ ಹಾಗೂ ಗೃಹ ಖಾತೆಗಳಲ್ಲೂ ಪ್ರಕಾಶ್ ಗಮನಾರ್ಹ ಸಾಧನೆಗೈದವರು. ಪ್ರಕಾಶ ಅವರಿಗಿರುವ ತಿಳುವಳಿಕೆ, ತಾಳ್ಮೆ, ಹಾಗೂ ಸಜ್ಜನಿಕೆಯ ಕಅರಣಕ್ಕೆ ಪ್ರಾಮುಖ್ಯತೆ ದೊರೆಯುತ್ತಿತ್ತು. ಪ್ರಕಾಶ್ ಸಂದಾನಕ್ಕೆ ಹೋಗಿದ್ದಾರೆಂದರೆ ಸಮಸ್ಯೆ ಬಗೆಹರಿಯುತ್ತದೆಯೆಂದೇ ಭಾವಿಸುತ್ತಿದ್ದರು. ಅಂಥವರು ಇನ್ನೂ ನಾಲ್ಕು ಕಾಲ ಬಾಳಿ ಬದುಕಿ ಮೆರೆದು ಹೋಗಿರುವ ರಾಜಕಾರಣಕ್ಕೆ ಶುದ್ಧಿ ಮಅಡಬೇಕಿದೆ. ಪ್ರಕಾಶ್‌ರಂಥ ರಾಜಕೀಯ ಮುತ್ಸದ್ದಿ ಚೇತರಿಸಿಕೊಂಡು ಯುವ ಸಮುದಾಯಕ್ಕೆ ಮಾರ್ಗದಶ್ನ ನೀಡುವಂತಾಗಲಿ.

ಬಡತನ, ನಿರುದ್ಯೋಗ, ಜಾತೀಯತೆ, ಸ್ತ್ರೀ ವಿರೋಧಿ ಆಶಯಗಳು ಜೀವಂತವಿರುವುದೆಂದರೆ; ಎಲ್ಲರೂ ಕೊಟ್ಟ ಮಾತಿಗೆ ತಪ್ಪಿ ನಡೆದಿದ್ದಾರೆಂದೇ ಅರ್ಥ. ಯಡಿಯೂರಪ್ಪ, ಕುಮಾರಸ್ವಾಮಿ,ಮ ಅನಂತಕುಮಾರ ಮುಂತಾದವರು ಪುಣ್ಯಕೋಟಿ ಕಥೆಯಮೌಲ್ಯದ ಬಗ್ಗೆ ಮಾತಾಡದಷ್ಟು ಅಪ್ರಾಮಾಣಿಕರೆಂದು ಒಂದು ಬಾರಿ 'ಮೌಲ್ಯ' ವೆಂದು ಸ್ವೀಕರಿಸಿದ್ದನ್ನು ಎಲ್ಲ ಸ್ಥರಗಳಲ್ಲಿ ಅನ್ವಯಿಸಿ ನೋಡುವವ ಮಾತ್ರ ಅಮವಲ್ಯದ ಪಾವಿತ್ರ್ಯತೆಯನ್ನು ಎತ್ತಿ ಹಿಡಿಯಬಲ್ಲ.

ಕೊಟ್ಟ ಮಾತಿಗೆ ತಪ್ಪಬಾರದೆನ್ನುವುದು ಜನತಂತ್ರದ ಬಹುದೊಡ್ಡ ಮೌಲ್ಯ. ಆ ಮೌಲ್ಯವನ್ನು ರಾಜಕಾರಣಿಗಳು ತಮ್ಮ ಬೇಳೆ ಬೇಯಿಸಿಕೊಳ್ಳಲು ಬಳಸಿಕೊಳ್ಳುತ್ತಿರುವಾಗ ನಾವು ನೀವೆಲ್ಲ ಅನಗತ್ಯ ಬಾವಾವೇಶಕ್ಕೆ ಒಳಗಾಗದೇ ಪ್ರತಿಕ್ರೀಯಿಸಬೇಕು.

ಹಿರಿಯ ಜೀವ ಶಾಂತರಸರ ಅಗಲಿಕೆ ನಮಗೆಲ್ಲ ಅಪಾರ ನೋವು ತಂದಿದೆ. ಶಾಂತರಸರು ಅಗ್ನಿಯನ್ನು ಅದರಲ್ಲಿನ ಬರಹಗಳನ್ನು ಬಹಳ ಪ್ರೀತಿಸುತ್ತಿದ್ದರು. ನನ್ನನ್ನಂತೂ ಹೆಚ್ಚೇ ಹಚ್ಚಿಕೊಂಡಿದ್ದರು. ಅವರ ಒಡನಾಟದ ನೆನಪು ಹಾಗೂ ಅಗಲಿಕೆ ನನ್ನಗಂಟಲ ನರ ಬಿಗಿಯುವಂತೆ ಮಾಡಿದೆ. ದುಃಖ ಉಮ್ಮಳಿಸಿ ಬರುತ್ತಿದೆ.ನನ್ನ ನಯಂತ್ರಣ ಮೀರಿ ಕಣ್ಣು ಹನಿಸುತ್ತಿವೆ ಭಾವುಕತೆ ನನ್ನ ಬಿಗಿದಪ್ಪಿದೆ; ಶಾಂತರಸರ ನಿಷ್ಕಲ್ಮಶ ಪ್ರೀತಿಯಂತೆ ಎಂದು ಹತಗುಂದಿಯವರು ಹೇಳಿದ್ದಾರೆ.

ಹತಗುಂದಿಯವರು ಅಗ್ನಿ ಪತ್ರಿಕೆಯ ಸಂಪಾದಕನಾಗಿದ್ದೆನೆ ಎಂದು ಗೊತ್ತಾದಾಗ ಶಾಂತರಸರಷ್ಟು ಖುಷಿಪಟ್ಟವರು ಬೇರೊಬ್ಬರಿಲ್ಲ. ಕನ್ನಡದ ಅನೇಕ ಪ್ರತಿಬಾವಂತರು ಶಾಂತರಸರಪ್ರೀತಿಯ ಮಾತುಗಳಿಂದ, ಅವರ ಪ್ರೋತ್ಸಾಹದಿಂದ ಅರಳಿದ್ದಾರೆ. ನಳನಳಿಸಿದ್ದಾರೆ. ಎತ್ತರೆತ್ತಕ್ಕೆ ಬೆಳೆದು ನಿಂತಿದ್ದಾರೆ. ನಾಡಿನ ಅಸಂಖ್ಯಾತ ಯುವ ಬರಹಗಾರರನ್ನು ಇದೇ ರೀತಿ ಕಾಣುತ್ತಿದ್ದರು.

ಶಾಂತರಸರು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾಗಿದ್ದಾಗಿನ ಮಾತಿದು. ಕಲಬುರ್ಗಿ ವಿ.ವಿ.ಯ ಪ್ರಾಧ್ಯಾಪಕ ಡಾ. ವೀರಣ್ಣ ದಂಡೆಯವರ 'ಜನಪದ ಸಾಹಿತ್ಯ ಸಿದ್ಧಾಂತ' ಪುಸ್ತಕ ಬಿಡುಗಡೆ ಕಾರ್ಯಕ್ರಮ. ಶಾಂತರಸರೇ ಆ ಪುಸ್ತಕವನ್ನು ಬಿಡುಗಡೆ ಮಾಡಬೇಕಿತ್ತು. ನಾನು ಆ ಕೃತಿಯ ಕುರಿತು ಮಾತಾಡಬೇಕೆಂದು ದಂಡೆಯವರು ಸೂಚಿಸಿದ್ದರು. ಭಾಷಣ ಗೊತ್ತಿಲ್ಲದ ನಾನು ಅ ಕೃತಿಯ ಕುರಿತು ಬರೆದ ಸುಮಾರುಇಪ್ಪತ್ತು ಪುಟದ ವಿಮರ್ಶಾ ಲೇಖನ ಓದಿದೆ.

ಶಾಂತರಸರಿಗೆ ನನ್ನ ಬರಹಿಷ್ಟವಾಗಿತ್ತು. ಕಾರ್ಯಕ್ರಮ ಮುಗಿದಕೂಡಲೇ ನನ್ನ ಬಳಿ ಬಂದು ಮೈದಡವಿದರು. ಬೆನ್ನು ತಟ್ಟಿದರು. ನನ್ನ ಹಿನ್ನೆಲೆ ಮುನ್ನೆಲೆ ವಿಚಾರಿಸತೊಡಗಿದರು. ಇಷ್ಟು ಭಲೋ ವಿಮರ್ಶಾ ಬರಿಯೋರು ನಮ್ಮ ಭಾಗದಲ್ಲಿದ್ದಿರಲ್ಲ ಎಂದು ಉಬ್ಬಿ ಹೋದರು.

ಶಾಂತರಸರು ಕನ್ನಡ ನಾಡು ನುಡಿಯನ್ನು ಅಪಾರವಾಗಿ ಗೌರವಿಸಿದವರು. ಕರ್ನಾಟಕದ ಏಕೀಕರಣದ ಪರ ದನಿ ಎತ್ತಿದವರು. ಆದರೆ ಹೈದ್ರಾಬಾದ ಕರ್ನಾಟಕ ಪ್ರದೇಶಕ್ಕೆ ಅನ್ಯಾಯವಾದಾಗಲೆಲ್ಲ ಉಗ್ರವಾಗಿಪ್ರತಿಭಟಿಸುತ್ತಿದ್ದರು. ಕನ್ನಡ  ಸಾಂಸ್ಕೃತಿಕ ಲೋಕ ಹೈ.ಕ. ಭಾಗದ ಸಾಹಿತಿ, ಕಲಾವಿದರನ್ನು ಮುಖ್ಯವಾಹಿನಿಯೊಂದಿಗೆ ಸೇರಿಸಿಕೊಳ್ಳುತ್ತಿಲ್ಲ ಎಂದು ವಾದಿಸುತ್ತಲೇ ಇದ್ದರು. ಅವರ ವಾದವನ್ನು ಸಂಕುಚಿತ ನೆಲೆಯದು ಎಂದು ಆಡಿಕೊಂಡವರೂ ಇದ್ದಾರೆ. ಪಿ.ಲಂಕೇಶರು 'ಅಕ್ಷರ ಹೊಸಕಾವ್ಯ' ಪ್ರಕಟಿಸಿದಾಗ ಹೈ.ಕ. ಭಾಗದ ಒಬ್ಬ ಕವಿಯ ಕವನವೂ ಸೇಪ್ಡೆಯಾಗಿರಲಿಲ್ಲ. ಅದಕ್ಕೆ ಪ್ರತಿಭಟನೆಯಾಗಿ 'ಬೆನ್ನ ಹಿಂದಿನ ಬೆಳಕು' ಆಯ್ದ ಕವನ ಸಂಕಲನವನ್ನು ಪ್ರಕಟಿಸಿದರು.

ಶಾಂತರಸರು ದಲಿತ, ಹಿಂದುಳಿದ ಹಾಗೂ ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿದ ಬರಹಗಾರರಲ್ಲಿ ಅತ್ಮವಿಸ್ವಾಸ ಮೂಡಿಸಲು ಯತ್ನಿಸುತ್ತಿದ್ದರು. 'ಪ್ರತಿಭೆ' ಯಾರ ಸೊತ್ತಲ್ಲ ಎನ್ನುವುದು ಶಾಂತರಸರ ನಂಬುಗೆಯಾಗಿತ್ತು.  ಶಾಂತರಸರ ನೇರ ನಿಷ್ಠುರ ನಡೆ ನುಡಿಯನ್ನು ಕೆಲವರು 'ಜಮದಗ್ನಿಯ'ಕೋಪವೆಂದು  ವ್ಯಾಖ್ಯಾನಿಸಿದ್ದೂ ಇದೆ. ಸಿಟ್ಟುಮತ್ತು ಖುಷಿಯನ್ನು ಎದೆಯಲ್ಲಿ ಅವಿತಿಟ್ಟುಕೊಳ್ಳುವುದು ಶಾಂತರಸರ ಸಹಜ ಸ್ವಭಾವಕ್ಕೆ ವಿರುದ್ಧವಾದದ್ದು. ಸಿಟ್ಟು, ಖುಷಿ ಹಾಗೂ ಮನದಾಳದ ಇನ್ನಾವುದೇ ಭಾವಕ್ಕೆ ಮಾತಿನ ರೂಪ ಕೊಟ್ಟಾಗಲೇ ಅವರಿಗೆ ಸಮಾಧಾನ. ಇಂತಹ ಧೀಮಂತ ವ್ಯಕ್ತಿತ್ವದ ಶಾಂತರಸರು ನಿಮ್ಮನ್ನು, ನನ್ನನ್ನು ಅಗಲಿ ಹೋದದ್ದು. ಸರಳವಾಗಿ ಬದುಕಿ ತೋರಬಹುದಾದ 'ಮಾದರಿ' ವ್ಯಕ್ತಿತ್ವ, ಶಾಂತರಸರದು ಅಪ್ಪಟ್ಟ ಜೀವಂತ ಮನುಷ್ಯರಂತಹದ್ದು.

ನಾನು ಬಳ್ಳಾರಿಗೆ ಹೋದ ಮೊದಲ ದಿನ ಗೆಳೆಯರ ರೂಮಿನಲ್ಲಿದ್ದೆ. ವಸತಿಗೆ ವ್ಯವಸ್ಥೆ ಮಾಡಿಕೊಳ್ಳಲೇ ಬೇಕಿತ್ತು. ಪಾಲಿಟೆಕ್ನಿಕ್ ಹಾಸ್ಟೆಲ್ದುಬಾರಿಯದು. ಅಗ್ಗದ ಹಾಸ್ಟೆಲ್‌ಗೆ ಹುಡುಕುವುದು ಅನಿವಾರ್ಯವಾಗಿತ್ತು.

ಯಾರೋ ಪುಣ್ಯಾತ್ಮರು ಸಕ್ಕರಿ ಕರೆಡಪ್ಪ ಹಾಸ್ಟೆಲ್‌ನ ವಿಳಾಸ ಬರೆದುಕೊಟ್ಟರು. ಕಷ್ಟಪಟ್ಟು ಹುಡುಕಿದೆ.... ಆದರೆ ಹಾಸ್ಟೆಲ್ ಸೀಟ್ ಭರ್ತಿಯಾಗಿ ಹದಿನೈದು ದಿನಗಳು ಕಳೆದಿದ್ದವು. ಅಲ್ಲಿದ್ದ

ಒಬ್ಬ ವಿದ್ಯಾರ್ಥಿ ಸಲಹೆ ನೀಡಿದ... ಹಾಸ್ಟೆಲ್ ಅಡಳಿತ ಮಂಡಳಿಯ ಬಸವರಾಜ ಗಣಾಚಾರಿಯವರನ್ನು ಭೆಟಿಯಾಗಿ ಎಂದು... ಅಂಜುತ್ತಾ ಅಳಕುತ್ತಾ ಸಮೀಪದಲ್ಲೇ ಇರುವ ಅವರ ಮನೆಗೆ ಹೋದೆ. ಎಸ್.ಎಸ್.ಎಲ್.ಸಿ., ಪಿ.ಯು.ಸಿ. ಮಾರ್ಕ್ಸ್ ಕಾರ್ಡ್ ತೋರಿಸಿದೆ. ಪ್ರವೇಸ ನೀಡಲು ಬಿಲ್‌ಕುಲ್ ಸಮ್ಮತಿಸಲಿಲ್ಲ. ನಾನು ಅಗೀಗ ಕಲಬುರ್ಗಿ ಅಕಾಶವಾಣಿಗೆ ಕತೆ ಕವನ ವಾಚನ ಕಾರ್ಯಕ್ರಮ ನೀಡಿದ್ದೆ. ಆಕಾಶವಾಣಿಯವರು ನೀಡಿದ ಕಾಂಟ್ರ್ಯಾಕ್ಟ್ ಪತ್ರಗಳು ನನ್ನಲ್ಲಿದ್ದವು. ಆ ಪತ್ರಗಳಮೇಲೆಕಣ್ಣಾಡಿಸಿದ ಬಸವರಾಜ ನಿಮಗೆ ಸಾಹಿತ್ಯದಲ್ಲಿ ಆಸಕ್ತಿ ಅದಾ ಏನ್ರಿ ? ಎಂದು ಕೇಳಿದರು. ಹೂಂ ಎಂದಿದ್ದೆ ತಡ... ಹಾಸ್ಟೆಲ್ ಅಡ್ಮಿಷನ್ ಪಕ್ಕಾ ಆಯಿತು. ಊಟ ವಸತಿ ಸೇರಿ ವರ್ಷಕ್ಕೆ ರೂ. ೬೨೫.... ಮೊದಲ ಕಂತಾಗಿ ರೂ. ೩೨೫ ಕೊಡಬೇಕು. ಅಷ್ಟೂ ನನ್ನ ಹತ್ತಿರ ಇರಲಿಲ್ಲ.

ಪ್ರವೇಶ ಕೊಡಿಸಲು ಬಸವರಾಜ ಅದೆಷ್ಟುಉತ್ಸುಕರಾಗಿದ್ದರೆಂದರೆ ;ಅವಸರದಲ್ಲಿ ಬಟ್ಟೆ ಹಾಕಿಕೊಂಡು ಹೋಗೋಣ ನಡೀರಿ ಎಂದರು. ಹಾಸ್ಟೆಲ್ ಅಧ್ಯಕ್ಷರೊಂದಿಗೆ ಮಾತನಾಡಿ ನಾನೊಬ್ಬ ಮಹಾನ ಕತೆಗಾರನೆಂಬಂತೆ ಬಿಂಬಿಸಿದರು. ಅಷ್ಟೆಯಲ್ಲ ನನ್ನಿಂದ ಎರಡು ಮೂರು ಕಥಾ ಸಂಕಲನಗಳು ಬಂದಿವೆ ಎಂದುಸುಳ್ಳು ಬರೆಸಿ ಹೆಳಿದರು. ನನಗೋ ಹಾಸ್ಟೆಲ್ ಪ್ರವೇಶ ಸಿಕ್ಕರೆ ಸಾಕೆನಿಸಿತು. ಮುನ್ನೂರು ರೂಪಾಯಿ ಕೈಯಿಂದ ಕಟ್ಟಿ ಹಾಸ್ಟೆಲ್‌ಗೆ ಸೇರಿಸಿದರು. ಅಷ್ಟೇ ಅಲ್ಲ ಈತ ಬರಹಗಾರ ಅಂತ ಡಂಗೂರ ಸಾರಿದರು. ಮರುದಿನದಿಂದ ವಿಶೇಷ ಉಪಚಾರ ಸುರುವಾಯಿತು. ಬೆಳಗಿನ ಪ್ರಾರ್ಥನೆಗೆ ತಪ್ಪಿಸಿದರು ಮಾಫಿ ಸಿಗತೊಡಗಿತು. ಸಾಹಿತ್ಯದ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ತಡವಾಗಿ ಬಂದರೂ ಶಿಕ್ಷೆ ನೀಡುತ್ತಿರಲಿಲ್ಲ.

ಈ ನಡುವೆ ಮತ್ತೊಂದು ಘಟನೆ ನಡೆಯಿತು. ಹತಗುಂದಿ ಬರೆದನಾಟಕವೊಂದು ಕಲಬುರ್ಗಿ ಆಕಾಶವಾಣಿಯಿಂದ ಪ್ರಸಾರವಾಯಿತು. ಹಾಸ್ಟೆಲ್ ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು ಹಾಗೂ ವಿದ್ಯಾಥಿಗಳು ಆನಾಟಕವನ್ನು ಆಲಿಸಿದರು. ಹಾಸ್ಟೆಲ್ ವಾರ್ಷಿಕ ವರದಿಯಲ್ಲಿ ಅದನ್ನೊಂದು ವಿಶೆಷ ಸಂಗಿತಿಯೆನ್ನುವಂತೆ ದಾಖಲಿಸಿದರು. ಆರಂಭದಲ್ಲಿ ದಬಾಯಿಸುತ್ತಿದ್ದ, ಜೋರು ಮಾಡುತ್ತಿದ್ದ ಹಿರಿಯ ವಿದ್ಯಾರ್ಥಿಗಳು ಅನುನಯದಿಂದ ನಡೆದುಕೊಳ್ಳತೊಡಗಿದರು.

# ಅಧ್ಯಾಯ–5

# ಆಧುನಿಕ ಅಂಕಣ ಸಾಹಿತ್ಯಕ್ಕೆ ಹತಗುಂದಿಯವರ ಕೊಡುಗೆ

# ಅಧ್ಯಾಯ – ೫

## ಆಧುನಿಕ ಅಂಕಣ ಸಾಹಿತ್ಯಕ್ಕೆ ಹತಗುಂದಿಯವರ ಕೊಡುಗೆ

ಕನ್ನಡ ಸಾಹಿತ್ಯ ಚರಿತ್ರೆಯ ಪರಂಪರೆಯನ್ನು ನೋಡುತ್ತಾ ಬಂದಾಗ ಪೂರ್ವದ ಹಳೆಗನ್ನಡ, ಹಳೆಗನ್ನಡ, ನಡುಗನ್ನಡ, ಹೊಸಗನ್ನಡ ಮುಂದುವರೆಯುತ್ತಾ ಬಂದಂತೆ ಆಧುನಿಕ ಕನ್ನಡ ಎಂದು ಹೀಗೆ ರೂಪಿಸಲಾಗಿದೆ. ಈ ಕನ್ನಡ ಸಾಹಿತ್ಯವನ್ನು ಕಾಲಘಟ್ಟಗಳ ಅಧಾರದ ಮೆಲೆ ರೂಪಿಸಲಾಗಿದೆ. ಅವುಗಳು ಈ ಕೆಳಗಿನಂತಿವೆ.

ನವೋದಯ

ಪ್ರಗತಿಶೀಲ

ನವ್ಯ

ದಲಿತ ಬಂಡಾಯ.

ಈ ರೀತಿಯಾಗಿ ಹೊಸಗನ್ನಡ ಸಾಹಿತ್ಯದ ಹಲವು ರೂಪಗಳನ್ನು ಕಾಣುತ್ತೇವೆ. ಅವುಗಳೆಂದರೆ,ಕಾವ್ಯ,ಕಥೆ,ಕಾದಂಬರಿ,ನಾಟಕ, ಪ್ರವಾಸ ಕಥನ, ಜೀವನ ಚರಿತ್ರೆ ಲಲಿತ ಪ್ರಬಂಧ, ಪ್ರಬಂಧ, ಇತ್ಯಾದಿ ಪ್ರಕಾರಗಳನ್ನು ಕಾಣುತ್ತೇವೆ. ಇವುಗಳಲ್ಲಿ ಪ್ರಬಂಧದ ಒಡಲಿನಿಂದ ಹುಟ್ಟಿಕೊಂಡ ಬಂದಂಥ ರೂಪವೇ ಅಂಕಣ ಸಾಹಿತ್ಯ. ಇದೊಂದು ಹೊಸಗನ್ನಡ ಸಾಹಿತ್ಯದಲ್ಲಿ ಇತ್ತೀಚೆಗೆ ಬೆಳೆದುಕೊಂಡು ಬಂದಂಥ ಪ್ರಕಾರವಾಗಿದೆ. ಇದು ಪತ್ರಿಕಾ ವಿಭಾಗದಲ್ಲಿ ನಾವು ಹೆಚ್ಚಾಗಿ ನೋಡುತ್ತೇವೆ. ಬಂಡಾಯ ಸಾಹಿತ್ಯದ ಅರಂಭದ ಕಾಲವನ್ನು ನೋಡುತ್ತಾ ಬಂದಾಗ ಅಲ್ಲಿ ಅನೇಕ ಬಂಡಾಯ ಸಾಹಿತಿಗಳನ್ನು ನೋಡುತ್ತೇವೆ. ಅದ್ದರಲ್ಲಿ ಸಿದ್ದಲಿಂಗಯ್ಯ, ಬರಗೂರು ರಾಮಚಂದ್ರ, ಚನ್ನಣ್ಣ ವಾಲಿಕಾರ, ಗೀತಾ ನಾಗಭೂಷಣ, ಬಿ.ಟಿ.ಲಲಿತಾನಾಯಕ ಇನ್ನು ಮುಂತಾದವರು.

ಇನ್ನು ಬಂಡಾಯೋತ್ತರ ಸಾಹಿತಿಗಳನ್ನು ನೋಡಲು ಕುಳಿತರೆ ಅನೇಕ ಸಾಹಿತಿಗಳನ್ನು ನೋಡುತ್ತೇವೆ.ಅವರಲ್ಲಿ ಡಾ. ರೆಹಮತ್ ತರಿಕೆರಿಯವರು, ಡಾ. ಎಚ್.ಟಿ. ಪೋತೆ, ಡಾ. ಶ್ರೀಶೈಲ್ ನಾಗರಾಳ, ಮಹಿಪಾಲರೆಡ್ಡಿ ಮುನ್ನೂರು, ವಿಕ್ರಮ ವಿಸಾಜಿಯವರು, ಕೆ. ನೀಲಾ, ಇನ್ನೂ ಹಲವಾರು ಜನರನ್ನು ನಾವು ಕಾಣುತ್ತೇವೆ. ಇವರ ಸಾಹಿತ್ಯ ಬರವಣಿಗೆಯಲ್ಲಿ ಪ್ರಮುಖವಾಗಿ ಸಾಮಾಜಿಕ, ರಾಜಕೀಯ, ಆರ್ಥಿಕ, ಸಾಹಿತ್ಯಿಕ ಕಲೆ, ವ್ಯಕ್ತಿ ವೈಶಿಷ್ಟ್ಯವನ್ನು, ಸಂಸ್ಕೃತ, ಜಾಗತೀಕರಣ ಇವೆಲ್ಲವುಗಳನ್ನು ತಮ್ಮ ಬರವಣಿಗೆ ಮೂಲಕ ಅಭಿವ್ಯಕ್ತಿಪಡಿಸುತ್ತಿದ್ದಾರೆ ಎಂದು ಹೇಳಬಹುದು.

ಈ ಸಾಹಿತ್ಯಗಳಲ್ಲಿ ಅಂಕಣ ಸಾಹಿತ್ಯವು ಒಂದು ಪ್ರಮುಖ ಸಾಹಿತ್ಯವಾಗಿ ಬೆಳಕಿಗೆ ಬಂದಿದೆ. ಎಂದು ಹೇಳುತ್ತೇವೆ. ಅಂಕಣ ಸಾಹಿತ್ಯದ ಪರಂಪರೆಯನ್ನು ನೋಡಿದಾಗ ಇದು ಬ್ರಿಟಿಷರು ಭಾರತಕ್ಕೆ ತಮ್ಮ ಕ್ರೈಸ್ತ ಧರ್ಮದ ಮತ ಪ್ರಚಾರಕ್ಕಾಗಿ ಬಂದಾಗ ಅವರುಜನರಿಗೆ ಭಾಷೆ ತಿಳಿಯಲೆಂದು ಅಲ್ಲಿಯ ಪ್ರಾಂತೀಯ ಭಾಷೆಗಳನ್ನು ಬಳಸಲಾರಂಭಿಸಿದರು. ಮಂಗಳೂರಿನ ಮಿಷನರಿಗಳು ಮುದ್ರಣ ಯಂತ್ರಗಳನ್ನು ಬಳಸುವುದರ ಮುಖಾಂತರ ಕನ್ನಡ ಅಕ್ಷರದ ಅಚ್ಚನ್ನು (ಮುದ್ರಣವನ್ನು) ಹಾಕಲು ಪ್ರಾರಂಬಿಸಿದರು. “ಮಂಗಳೂರು ಸಮಾಚಾರ” ಪತ್ರಿಕೆ ಮೂಲಕ ಹೊರಬಂತು. ಹತ್ತೊಂಬತ್ತನೆ ಶತಮಾನದಲ್ಲಿ ಸ್ವಾತಂತ್ರ್ಯ ಸಂಗ್ರಾಮ ಪ್ರಾರಂಭವಾಗಿತ್ತು. ಅಗ ಪತ್ರಿಕೆಗಳ ಪಾತ್ರ ಇಲ್ಲಿ ಮಹತ್ವತೆಯನ್ನು ಎತ್ತಿ ತೋರಿಸಿದವು.

ಪತ್ರಿಕೆಗಳ ಮುಖಾಂತರ ಅನೇಕ ಪ್ರಜೆಗಳಲ್ಲಿ ಸ್ವಾತಂತ್ರ್ಯ ಹೋರಾಟದ ಬಗ್ಗೆ ಪ್ರಜ್ಞೆ ಬಂದಿತು. ಪತ್ರಿಕೆಗಳು ಸ್ವಾತಂತ್ರ್ಯ ಹೋರಾಟಗಾರರ ವೇದಿಕೆಯಂತೆ ಕೆಲಸ ಮಾಡುತತಿದ್ದವು. ಮುಂದೆ ಪತ್ರಿಕೆಗಳಲ್ಲಿ ಹಲವಾರು ವಿಷಯಗಳನ್ನು ಕುರಿತು ಬರೆಯಲು ಪ್ರಾರಂಭಿಸಿದರು. ಸಾಹಿತ್ಯ ಘಟ್ಟಗಳನ್ನಾಧರಿಸಿ ಸಮಕಾಲೀನ ಪ್ರೇರಣೆಗಳಿಂದ ಅಂಕಣಗಳನ್ನು ಬರೆಯಲು ಪ್ರಾರಂಬಿಸಿದರು. ಈ ಅಂಕಣಕಾರರಲ್ಲಿ ಮೊಟ್ಟ ಮೊದಲಿಗೆ ಸಿದ್ದವನ ಹಳ್ಳಿ ಕೃಷ್ಣ ಶರ್ಮರನ್ನು ಕಾಣುತ್ತೇವೆ. ಇವರನ್ನು ಅಂಕಣಕಾರರ ಪಿತಾಮಹನೆಂದು ಕರೆಯಲಾಗುತ್ತದೆ. ಮುಂದೆ ಇದನ್ನು ವ್ಯವಸ್ಥಿತ ಹಾಗೂ ಯೋಗ್ಯ ರೂಪದಲ್ಲಿ ಜೋಡಿಸಿ ಚಿಕ್ಕ ಹಾಗೂ ಚೊಕ್ಕ ರೀತಿಯಲ್ಲಿ ಬಳಸಿಕೊಂಡು ಡಾ.ಹಾ.ಮಾ.ನಾಯಕರು ಈ ಅಂಕಣ ಬರವಣಿಗೆಗೆ ರೂಪ ಕೊಟ್ಟರು.

ಡಾ.ಹಾ.ಮಾ.ನಾಯಕರ ನಂತರ ಅನೇಕ ಪ್ರಮುಖ ಅಂಕಣಕಾರರು ಬೆಳಕಿಗೆ ಬಂದರು.ಪ್ರಮುಖರೆಂದರೆ ಟಿ.ಎಸ್.ರಾಮಚಂದ್ರರಾವ ಖಾದ್ರಿ ಶಾಮಣ್ಣ, ವೈ.ಎನ್ಕೆ, ಜಿ.ಪಿ. ರಾಜರತ್ನಂ, ಕು.ಶಿ. ಹರಿದಾಸ ಭಟ್ಟ, ಹಾ.ಮಾ.ನಾಯಕ, ಎಚ್ಚೆಸ್ಕೆ, ಬಿ.ವಿ. ವೈಕುಂಠರಾಜು, ಪಿ.ಲಂಕೇಶ, ಸಿಂಪಿಲಿಂಗಣ್ಣ, ವೀರಣ್ಣದಂಡೆ, ಸಿದ್ಧಲಿಂಗ ಪಟ್ಟಣಸೆಟ್ಟಿ, ರವಿ ಬೆಳಗೆರೆ, ಮುಂತಾದವರು ಇವರೆಲ್ಲ ತಮ್ಮದೇ ಆದ ಸಾಹಿತ್ಯದ ರೂಪವನ್ನು ಕೊಟ್ಟು ಕಾಲ ಮಾನಕ್ಕೆ ತಕ್ಕಂತೆ ಅಂಕಣ ಬರೆಯುತ್ತಾ ಬಂದಿದ್ದಾರೆ.

ಇತ್ತೀಚಿನ ದಿನಗಳಲ್ಲಿ ನಾವು ಹೈದ್ರಾಬಾದ ಕರ್ನಾಟಕದ ಪ್ರಮುಖ ಅಂಕಣಕಾರರಲ್ಲಿ 'ಅಗ್ನಿ' ವಾರ ಪತ್ರಿಕೆಯ ಸಂಪಾದಕರು ಹಾಗೂ ಅಂಕಣಕಾರರಾದ ರಾಜಶೇಖರ ಹತಗುಂದಿಯವರನ್ನು ಕಾಣುತ್ತೇವೆ. ಅಂಕಣ ಬರಹಗಳು ಪತ್ರಿಕೆಗಳ ಅನಿವಾರ್ಯ ಅಂಗ. ಹತಗುಂದಿಯವರು ಮೊದಲು ಅಗ್ನಿಪತ್ರಿಕೆಯ ವರದಿಗಾರರಾಗಿ ಹೈದ್ರಾಬಾದ ಕರ್ನಾಟಕ ವರದಿಗಳನ್ನು ಸಲ್ಲಿಸುತ್ತಿದ್ದರು. ತದನಂತರ. ೨೦೦೭ ರಿಂದ ಅವರು 'ಅಗ್ನಿ' ಪತ್ರಿಕೆಯ ಸಂಪಾದಕರಾಗಿ ಬೆಂಗಳೂರಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. 'ಬಯಲು ಹುಡಿ' ಎಂಬ ಶಿರೋನಾಮೆಯಡಿಯಲ್ಲಿ ಪತ್ರಿಕೆಯಲ್ಲಿ ಅಂಕಣಗಳನ್ನು ಹೊರತರುತ್ತಾರೆ. ಹಲವಾರು ವಿಷಯಗಳನ್ನು ಕುರಿತು ಅಂಕಣ ಬರೆದಿದ್ದಾರೆ. ಅವುಗಳೆಂದರೆ ಪ್ರಮುಖವಾಗಿ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಸಾಹಿತ್ಯಿಕ ಹಾಗೂ ವ್ಯಕ್ತಿ ಚಿತ್ರಣವನ್ನು ನೀಡುವುದರೊಂದಿಗೆ ವಿಷಯಗಳನ್ನು ಹರವುತ್ತಾರೆ. ಇವರ ಕನ್ನಡ ಸಾಹಿತ್ಯದ ವಿಚಾರ, ಅದರ ರೂಪ, ಬರೆಯುವ ಧಾಟಿ, ವೈಚಾರಿಕ ಪ್ರಜ್ಞೆ, ಇವೆಲ್ಲವುಗಳನ್ನು ಮೈಗೂಡಿಸಿಕೊಂಡು ಅರ್ಥಪೂರ್ಣವಾದ ಅಂಕಣಗಳನ್ನು ಹೊರ ತರುತ್ತಿದ್ದಾರೆ.

ಅಂಕಣ ಬರಹಗಳ ಭಾಷೆ ಶೈಲಿ ನೋಡಿದಾಗ ತುಂಬಾ ಸರಳ ಹಾಗೂ ಸೂಕ್ಷ್ಮವಾಗಿ ಅರ್ಥಗರ್ಭಿತವಾಗಿ ರೀತಿಯಲ್ಲಿ ಹೇಳುತ್ತಾರೆ.

ಪತ್ರಕರ್ತರಿಗೆ ಅಥವಾ ಅಂಕಣಕಾರರಿಗೆ ಭಾಷಾ ಜ್ಞಾನ ಚೆನ್ನಾಗಿರಬೇಕು. ವ್ಯಾಕರಣ ತಿಳಿದಿರಬೇಕು. ನಮ್ಮ ಭಾಷೆ ಕನ್ನಡ ಆದರೆ ಹಲವಾರು ಪ್ರದೇಶಗಳಲ್ಲಿ ಅದು ಬಾಷೆ ರೂಢಿಯಲ್ಲಿದೆ.

ಉದಾ: ಹೈದ್ರಾಬಾದ ಕರ್ನಾಟಕವೆಂದೆ ಪ್ರಸಿದ್ಧವಾದ ಕಲಬುರ್ಗಿ, ರಾಯಚೂರು, ಬೀದರ, ಕೊಪ್ಪಳ, ಯಾದಗಿರಿ,ಇವೆಲ್ಲ ಮೊದಲು ನಿಜಾಮರ ಅಡಳಿತಕ್ಕೆ ಒಳಪಟ್ಟಿದ್ದರಿಂದ ಉರ್ದು ಹೆಚ್ಚಾಗಿ ಬಳಸುತ್ತಾರೆ. ಅದೇ ರೀತಿ ಬೆಳಗಾವಿಯಲ್ಲಿ ಕನ್ನಡ, ಮರಾಠಿ ಮಿಶ್ರಿತ, ಮಂಗಳೂರು ತುಳು ಮಿಸ್ರಿತ ಅದರೆ ಪತ್ರಿಕೆಗಳು ಅಯಾ ಪ್ರದೇಶದ ಆಡು ನುಡಿ ಬಳಸುವಂತಿಲ್ಲ, ಕನ್ನಡದ ಶಿಷ್ಟ ಬಾಷೆ ಅಂದರೆ ಗ್ರಂಥ ರೂಪದ್ದು ಇದೆ ಬಳಸುತ್ತಾರೆ. ರಾಜಶೇಖರ ಹತಗುಂದಿಯವರು ಸಹ ಒಳ್ಳೆ ಭಾಷಾ ಜ್ಞಾನ ಹಾಗೂ ಭಾಷಾ ಶೈಲಿಯನ್ನು ಹೊಂದಿದವರಾಗಿದ್ದಾರೆ. ಇವರ ಬರವಣಿಗೆ ಶೈಲಿ ಸರಳವಾಗಿದ್ದು, ಜನಸಾಮಾನ್ಯರಿಗೆ, ಹಸಿಗೋಡೆಯಲ್ಲಿ ಹರಳಿದ್ದಂತೆ ನಿಖರವಾಗಿ ಹಾಗೂ ಕಠೋರವಾಗಿ ಬರೆಯುತ್ತಾರೆ. ಇವರು ಬರೀ ಅಂಕಣಕಾರರಷ್ಟೇ ಅಲ್ಲ ಅನೇಕ ಕಥೆಗಳನ್ನು, ಪ್ರವಾಸ ಕಥನ, ಹಾಗೂ ಅನೇಕ ಪುಸ್ತಕಗಳು ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಪಠ್ಯ ಪುಸ್ತಕಗಳಾಗಿ ಹೊರಬಂದಿದೆ.

ಹತಗುಂದಿಯವರ ಭಾಷೆ, ಶೈಲಿ ಬರವಣಿಗೆ ಪದ್ಧತಿ ಅದ್ಬುತವಾಗಿದೆ. ಇವರು ಒಬ್ಬೊಬ್ಬ ರಾಜಕಾರಣಿಗಳನ್ನು ಕುರಿತು ಮಾತಾಡುತ್ತಿದ್ದರೆ, ಅವರನ್ನು ಎದಿರು ಬಂದು ಅಲುಗಾಡಿಸಿದ ಹಾಗೇ ಅಗುತ್ತದೆ. ಇವರಬರವಣಿಗೆಯನ್ನು ಕಂಡು ಅನೇಕ ದೊಡ್ಡ ದೊಡ್ಡ ವಿದ್ವಾಂಸರು ಕೂಡಾ ಹಾಡಿ ಹೊಗಳಿದ್ದಾರೆ. ಇವರ ಅಂಕಣಗಳಲ್ಲಿ ಅಡಕವಾದ ಪ್ರಮುಖ ಅಂಶಗಳನ್ನು ನೋಡುತ್ತಾ ಬಂದರೆ ಅವುಗಳಲ್ಲಿ ಮೊದಲನೆದಾಗಿ ರಾಜಕೀಯ ವಿಷಯಗಳನ್ನು ಕುರಿತು ರಾಜಕೀಯದಲ್ಲಿ ಕಾಂಗ್ರೆಸ್ ಪಕ್ಷದ ಬಗ್ಗೆ ಹೆಚ್ಚಿಗೆ ಮಾತನಾಡಿದ್ದಾರೆ.ಬಿ.ಜೆ.ಪಿ. ಸರಕಾರದ ದುರಾಡೀತ, ಭ್ರಷ್ಟಾಚಾರ ರಾಜಕೀಯ ವ್ಯಕ್ತಿಗಳನ್ನು ಕುರಿತು ಅಂಕಣಗಳನ್ನು ಬರೆದಿದ್ದಾರೆ. ರಾಜಕೀಯದಲ್ಲಿ ಮಹಿಳೆಯರ ಸ್ಥಾನಮಾನ, ಮೀಸಲಾತಿ,ಇವುಗಳನ್ನೆಲ್ಲ ಕುರಿತು ಮಹಿಳೆಯರಿಗೆ ಚುನಾವಣೆಯಲ್ಲಿ ಸ್ಪರ್ಧಿಸುವ ಸ್ವಾತಂತ್ರ್ಯ ಕೊಡಬೇಕು. ಇಂದಿಗೂ ಅನೇಕ ಮಹಿಳೆಯರು ತಮ್ಮ ಸ್ವ ಸಾಮರ್ಥ್ಯದಿಂದ ಮೇಲಕ್ಕೆ ಬಂದಿದ್ದಾರೆ. ದಲಿತ, ಹಿಂದುಳಿದ, ಅಲ್ಪ ಸಂಖ್ಯಾತರ ಮಹಿಳೆಯರ ಬಗ್ಗೆ ಮೀಸಲಾತಿಕುರಿತು ಬರೆದಿದ್ದಾರೆ.

ಲಾಲೂರ ಬಜೆಟ್ ಮಂಡನೆ ಅವುಗಳನ್ನು ಸೂಕ್ಷ್ಮವಾಗಿ ಪರಿಸೀಲಿಸಿ ಎಷ್ಟರ ಮಟ್ಟಿಗೆಲಾಭದಾಯಕವಾಗಿವೆ. ಜನ ಸಾಮಾನ್ಯರ ಮೇಲೆ ಯಾವ ಪರಿಣಾಮವಾಗುತ್ತದೆ ಎಂಬೆಲ್ಲ ಅಂಶಗಳನ್ನು ಗಮನಿಸುತ್ತಾ ಬರೆಯುತ್ತಾರೆ.

ಭ್ರಷ್ಟ ಅಧಿಕಾರಿಗಳ ಮೇಲೆ ಲೋಕಾಯುಕ್ತರ ದಾಳಿ ಅವರ ಅವ್ಯವಹಾರ ಎಲ್ಲವನ್ನು ಬಯಲಿಗೆಳೆದು ಜನರ ಮುಂದಿಡುತ್ತಾರೆ. ಚುನಾವಣಾ ಸಮೀಕ್ಷೆಗಳು ಅವು ಎಷ್ಟರ ಮಟ್ಟಿಗೆ ನಿಜವಾಗಿವೆ ಎಂಬುದನ್ನು ತಿಳಿಸುತ್ತಾರೆ.

ಇಲ್ಲಿಯವರೆಗೂ ಹಿಂದುಳಿದ ಜಾತಿಯ ಯಾವುದೇ ವ್ಯಕ್ತಿಗೂ ಮಂತ್ರಿ ಸ್ಥಾನವನ್ನು ಕೊಟ್ಟಿಲ್ಲ ಹಿರಿಯರಾದ ಕಾಂಗ್ರೆಸ್ ಅಧಿಕಾರಿ ಮಲ್ಲಿಕಾರ್ಜುನ ಖರ್ಗೆ ಅವರ ರಾಜಕೀಯ ಅನುಭವವನ್ನು ಹೇಳುತ್ತಾ ರಾಜ್ಯದ ಬಿ.ಜೆ.ಪಿ. ಸರ್ಕಾರ ಖಜಾನೆಯಲ್ಲಿನ ಹಣವನ್ನು ವೀರಶೈವದ ಮಠ ಮಾನ್ಯಗಳಿಗೆ ಹಂಚುತ್ತಿರುವ ಬಗ್ಗೆ ಸರಕಾರದ ಬೊಕ್ಕಸ ಖಾಲಿ ಅದಾಗ ಜನರ ಮೇಲೆ ಹೇರುವ ತೆರಿಗೆಗಳನ್ನು ಕುರಿತು ಹೇಳಿದ್ದಾರೆ. ಮಠಗಳಿಗೆ ಅನುದಾನ ನೀಡಿ ಅವುಗಳ ಗೌರವಕ್ಕೆ ಕುಂದು ತರುತ್ತಿರುವ ಯಡಿಯೂರಪ್ಪನವರ ಬಗೆಗೂ ಕೂಡಾ ಹೇಳಿದ್ದಾರೆ.

ಕನ್ನಡ ಸಾಹಿತ್ಯದ ಬಗ್ಗೆ ನೋಡಿದಾಗ ಸಾಹಿತ್ಯ ಪರಿಷತ್ತು ಜನ ವಿರೋಧಿಯಾಗಿ ನಡೆದುಕೊಂಡಾಗ ಅದನ್ನು ಬೆತ್ತಲೆಗೊಳಿಸುವುದು ಪ್ರಜ್ಞಾವಂತರ ಕರ್ತವ್ಯ. ಬಂಡಾಯ ಸಾಹಿತ್ಯ ಹುಟ್ಟು ಪಡೆದಿರೋದು ಕನ್ನಡ ಸಾಹಿತ್ಯ ಪರಿಷತ್ತಿನ ಜನವಿರೋಧಿ ನಿಲುವನ್ನು ಪ್ರತಿಭಟಿಸುವ ಗಳಿಗೆಯಲ್ಲಿ ಗ್ರಾಹಕರ ಸಾಂಸ್ಕೃತಿಕ ಅಬ್ಬರದಲ್ಲಿ ಪುಸ್ತಕ ಪ್ರೀತಿ ದಿನೆ ದಿನೇ ಕಡಿಮೆ ಅಗ್ತಾ ಇದೆ. ಸಾಹಿತ್ಯ ಸಮ್ಮೇಳನಗಳು ಜನಾಕರ್ಷಣೆಯ ಕೇಂದ್ರಗಳಾಗಿವೆ.

ಸಾಹಿತ್ಯ, ಸಂಸ್ಕೃತಿ, ಸಮಕಾಲೀನ ವಿದ್ಯಮಾನಗಳನ್ನು ಕುರಿತು ಚರ್ಚೆ ಕೈಗೊಂಡಾಗ ಕನ್ನಡ ಪ್ರಜ್ಞೆ ಮೂಡಿಸಲು ಸಾಧ್ಯವೆಂದು ಹೇಳುತ್ತಾರೆ. ಇಂದಿನ ಸಮಾಜದಲ್ಲಿ ದೇವರು,ದರ್ಮಗಳ ಮೇಲೆ ದಲ್ಲಾಳಿ ಕೆಲಸ ಮಾಡುತ್ತಿದ್ದಾರೆ. ದೇವರು, ಧರ್ಮ ಮತ್ತು ಭಕ್ತಿ ಸಮೂಹ ಹೆಚ್ಚಾದಂತೆಲ್ಲ ದಲ್ಲಾಳಿಗಳ ವೈಭವಯುತ ಜೀವನದ ಬಗ್ಗೆ ಹೇಳಿದ್ದಾರೆ.

ದೇವರಿರುವವರೆಗೂ ಜನರಲ್ಲಿ ಭಕ್ತಿ ಇರುತ್ತದೆ. ಇದು ಧಾರ್ಮಿಕ ದಲ್ಲಾಳಿಗಳಿಗೆ ಕಾಮಧೇನು ಇದ್ದ ಹಾಗೆ ಕುಗ್ರಾಮ ಹಳ್ಳಿಯಿಂದ ನಗರದವರೆಗೂ ಧಾರ್ಮಿಕ ದಲಾಳಿಗಳು ನಾಯಿ ಕೊಡೆಗಳಂತೆ

ಬೆಳೆದಿದ್ದಾರೆ. ಒಬ್ಬ ವ್ಯಕ್ತಿ ಶ್ರೀಮಂತನಾಗಬೇಕೆಂದರೆ ಬೇರೆ ಬೇರೆ ರೀತಿ ಪ್ರಯತ್ನಿಸುತ್ತಾನೆ. ಲಂಚ ಸ್ವೀಕರಿಸುವುದು, ಗುತ್ತಿಗೆಯಲ್ಲಿ ಕಳಪೆ ಕಾಮಗಾರಿತನ ಮಾಡುವುದು ಸುಳ್ಳು ಬಿಲ್ ಮಾಡುವುದು.

ರಾಜಕೀಯ ಹುದ್ದೆಗಳಲ್ಲಿ ಸೋನಿಯಾಗಾಂಧಿ, ಅಹಮ್ಮದ ಪಟೇಲ್, ಆಸ್ಕರ ಫರ್ಡಿನಾಂಡಿಸ್, ಮನಮೋಹನಸಿಂಗ್ ಹೀಗೆ ಎಲ್ಲರು ಉನ್ನತ ಹುದ್ದೆಯಲ್ಲಿದ್ದಾರೆ. ಕ್ರಿಶ್ಚಿಯನ್ ಮಿಷನರಿಗಳು ಕರ್ನಾಟಕದಲ್ಲಿ ಆಸ್ಪತ್ರೆ, ಶಾಲಾ ಕಾಲೇಜುಗಳಿಗೆ ದುಡ್ಡು ವ್ಯಯ ಮಾಡಿ ಸೇವೆ ಸಲ್ಲಿಸುತ್ತಿದ್ದಾರೆ. ಕೆಲವೊಂದು, ಆಸೆ ಆಮಿಷ, ತೋರಿಸಿ ಬಡ ಜನರನ್ನು ಮತಾಂತರಕ್ಕೆ ಒಳಪಡಿಸುತ್ತಿದ್ದಾರೆ. ಹತಗುಂದಿಯವರ ಅಂಕಣಗಳಲ್ಲಿ ಸಾಂಸ್ಕೃತಿಕ ಅಂಶಗಳನ್ನೊಳಗೊಂಡ ಅಂಕಣಗಳನ್ನು ನೋಡುತ್ತೇವೆ. ಕೇಂದ್ರದಲ್ಲಿ ನಾಟಕ,ಸಂಗೀತ ಹಾಗೂ ನೃತ್ಯಕ್ಕೆ ಒಂದೇ ಅಕಾಡೆಮಿಯಿದೆ. ಕರ್ನಾಟಕದಲ್ಲೂ ಕೂಡಾ ಒಂದೇ ಅಗಿತ್ತು ಕೆಲವು ಮಡಿವಂತರು ಸೇರಿ ನೃತ್ಯಕ್ಕೆ ಪ್ರತ್ಯೇಕ ಅಕಾಡೆಮಿ ಬೇಕು ಎಂದು ಮೈಸೂರಿನಲ್ಲಿ ಸ್ಥಾಪಿಸಿದ ಸಂಗೀತ ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯಕ್ಕೆ ಗಂಗೂಬಾಯಿ ಹಾನಗಲ್‌ರ ಹೆಸರಿಡಲು ಸೂಚಿಸಿದಾಗ ಕೆಲವರು ಗದ್ದಲ ಎಬ್ಬಿಸಿದರು.

ಗಂಗೂಬಾಯಿ ಹಾನಗಲ್‌ರ ಜಾತಿಯತೆ ಕುರಿತು ಮೇಲಾಗಿ ಅವರು ಹೈದ್ರಾಬಾದ ಕರ್ನಾಟಕದವರು ಮೈಸೂರಿನ ಭಾಗದವರಿಗೆ ಅಪಮಾನ ಮಾಡಿದಂತಾಗುತ್ತದೆಂದು ವಿರೋಧಿಸಿದರು.

ಉತ್ತರ ಭಾರತದಲ್ಲಿ ಅನೇಕ ಯಾತ್ರಾ ಸ್ಥಳಗಳಿವೆ ಅವುಗಳಲ್ಲಿ ಸೈನಾದೇವಿ ತುಂಬಾ ಪ್ರಸಿದ್ಧ ಅಲ್ಲಿ ಜನ ಕಾಲ್ತುಳಿತಕ್ಕೆ ಒಳಗಾಗಿ ನೂರಾ ಐವತ್ತಕ್ಕೂ ಹೆಚ್ಚು ಜನ ಕಾಲ್ತುಳಿತಕ್ಕೆ ಒಳಗಾಗಿದ್ದಾರೆ. ಜನರಿಗೆ ಅಂಧಶ್ರದ್ಧೆ ಎಲ್ಲಿಯವರೆಗಿರುತ್ತದೆ ಹಾಗೂ ಶಿಸ್ತು ಬರುವದಿಲ್ಲ. ಅಲ್ಲೆಲ್ಲ ಇದೆ ರೀತಿ ಆಗುವುದು. ಭಾರತೀಯ ಅಧ್ಯಾತ್ಮಕ ತತ್ವಜ್ಞಾನ ಹಾಗೂ ಧರ್ಮವನ್ನು ಪ್ರಖರ ವೈಚಾರಿಕೆಯ ಬೆಳಕಿನಲ್ಲಿ ಜಗತ್ತಿಗೆ ಸಾರಿ ಹೇಳಿದವರು ಸ್ವಾಮಿ ವಿವೇಕಾನಂದರು.

# ಅಧ್ಯಾಯ–6

# ಸಮಾರೋಪ

# ಅಧ್ಯಾಯ – ೬

## ಸಮಾರೋಪ

'ರಾಜಶೇಖರ ಹತಗುಂದಿಯವರ ಅಂಕಣ ಸಾಹಿತ್ಯ' ಎಂಬ ಶೀರ್ಷಿಕೆಯಡಿಯಲ್ಲಿ ನಾನು ಕೈಗೊಂಡಿರುವ ಈ ಸಂಶೋಧನಾ ಲಘು ಪ್ರಬಂಧದಲ್ಲಿ ಹೈದ್ರಾಬಾದ ಕರ್ನಾಟಕದ ಅಂಕಣ ಸಾಹಿತಿಗಳಲ್ಲಿ ಇವರು ಪ್ರಮುಖರು ಹತಗುಂದಿಯವರು 'ಅಗ್ನಿ' ಪತ್ರಿಕೆಯ 'ಬಯಲು ಹುಡಿ' ಶೀರ್ಷಿಕೆಯಡಿಯಲ್ಲಿ ಅಂಕಣವನ್ನು ಬರೆದಿದ್ದಾರೆ.

ರಾಜಶೇಖರ ಹತಗುಂದಿಯವರು ಅಗ್ನಿ ಪತ್ರಿಕೆಗೆ ಹೈದ್ರಾಬಾದ ಕರ್ನಾಟಕ ಬಾಗದ ವರದಿಗಾರರಾಗಿ ನಂತರ ಅದೇ ಪತ್ರಿಕೆಗೆ ಸಂಪಾದಕರಾಗಿ ಸಧ್ಯ ಬೆಂಗಳೂರಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಹತಗುಂದಿಯವರು 'ಅಗ್ನಿ' ಪತ್ರಿಕೆಯಲ್ಲಿ ಸಂಪಾದಕರಾಗಿ ಹೈದ್ರಾಬಾದ ಕರ್ನಾಟಕ ಭಾಗದ ರಾಜಕೀಯ, ಸಾಮಾಜಿಕ ಸಾಹಿತ್ಯಿಕ, ಸಾಂಸ್ಕೃತಿಕ, ಇವೆಲ್ಲ ವಿಷಯಗಳನ್ನುಕುರಿತು ಈಗಾಗಲೇ ಹಲವಾರು ಅಂಕಣಗಳನ್ನು ಬರೆದಿದ್ದಾರೆ. ಇವರು ಬರೆದ ಅಂಕಣಗಳನ್ನು ಎರಡು ಕೃತಿಗಳಲ್ಲಿಬಿಡುಗಡೆಯಾಗಿವೆ. ಅವುಗಳೆಂದರೆ (೧) ಬಯಲು ಹುಡಿ ಮತ್ತು (೨) ಎಡ ಹೊತ್ತಿನ ಪಯಣ ಕೃತಿಗಳಲ್ಲಿ ಪ್ರಕಟಿತವಾಗಿವೆ.

ರಾಜಶೇಖರ ಹತಗುಂದಿಯವರ ತಂದೆ ಚಿದಂಬರರಾವ, ತಾಯಿ ಕಸ್ತೂರಿ ಬಾಯಿಇವರ ಜೇಷ್ಠ ಸುಪುತ್ರನಾಗಿ ೧೯೬೬ ರಲ್ಲಿ ಹತಗುಂದಿಯಲ್ಲಿ ಜನಿಸಿದರು. ಇದರ ಕುಟುಂಬ ಬಹಳ ಬಡತನದಿಂದ ಕೂಡಿತ್ತು. ತಂದೆ ಯಾವ ಕೆಲಸವೂ ಮಾಡುತ್ತಿರಲಿಲ್ಲ ತಾಯಿಯೇ ಸಾಕಿ ಇವರನ್ನು ದೊಡ್ಡವರನ್ನಾಗಿ ಮಾಡಿದರು.

ರಾಜಶೇಖರ ಹತಗುಂದಿಯವರು ೧ನೇ ತರಗತಿಯಿಂದ ೪ನೇ ತರಗತಿಯವರೆಗೆ ಹತಗುಂದಿಯ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಓದಿದರು. ೫ನೇ ತರಗತಿಯಿಂದ ೯ನೇ

ತರಗತಿಯವರೆಗೆ ಸಾವಳಗಿ ಸರಕಾರಿ ಶಾಲೆಯಲ್ಲಿ ಓದಿದರು. ೧೦ನೇ ತರಗತಿಯನ್ನು ಭಂಕೂರಿನಲ್ಲಿ ಓದಿದರು. ಪಿ.ಯು.ಸಿ.ಯನ್ನು ಶಹಾಬಾದನ ಮರಗೋಳ ಕಾಲೇಜಿನಲ್ಲಿ ವಿಜ್ಞಾನ ವಿಭಾಗದಲ್ಲಿ ಮುಗಿಸಿ ನಂತರ ಡಿಪ್ಲೋಮಾ ಸಿವಿಲನ್ನು ಬಳ್ಳಾರಿಯ ಸರಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಮುಗಿಸಿದರು.

ಡಿಪ್ಲೋಮಾ ಓದುತ್ತಿರುವಾಗ ಅವರಿಗೆ ಬಳ್ಳಾರಿಯಲ್ಲಿ ಅನೇಕ ಪ್ರಮುಖ ವಿದ್ವಾಂಸರನ್ನು ಭೇಟಿಯಾಗಿ ಸಾಹಿತ್ಯಕ್ಕೆ ಚರ್ಚೆಯಲ್ಲಿ ಭಾಗಿಯಾಗುತ್ತಿದ್ದರು. ಇವರು ಮೊದಲಿನಿಂದಲೂ ಕನ್ನಡ ಸಾಹಿತ್ಯದ ಬಗ್ಗೆ ಒಲವು ಇತ್ತು. ಕನ್ನಡ ಸಾಹಿತ್ಯದ ಪುಸ್ತಕಗಳನ್ನು ಓದುವುದು ಸತತವಾದ ಚರ್ಚೆ ಇವೆಲ್ಲವುಗಳನ್ನು ಮೈಗೂಡಿಸಿಕೊಂಡಿದ್ದರು. ಹಠವಾದಿಗಳಾಗಿರುವುದರಿಂದ ಹಿಡಿದ ಕಾರ್ಯ ಪೂರ್ತಿಗೊಳಿಸುವವರೆಗೆ ಬಿಡುತ್ತಿರಲಿಲ್ಲ. ಮೊದಲ ದೈನಿಕ ಪತ್ರಿಕೆಯಾದ ಕಲಬುರ್ಗಿ ವಾಣಿಯಲ್ಲಿ ೧೯೮೭ ರಿಂದ ೧೯೯೮ ರವರೆಗೆ ಸೇವೆ ಸಲ್ಲಿಸಿ ೧೯೯೮ ರಿಂದ 'ಜನ ವಾಹಿನಿ'ಗೆ ಸೇರಿಕೊಂಡು ಕೆಲಸ ಮಾಡಿದರು. ೧೯೯೯ ರಿಂದ ೨೦೦೭ ರವರೆಗೆ ಹೈದ್ರಾಬಾದ ಕರ್ನಾಟಕದ ವರದಿಗಾರರಾಗಿ ಅಗ್ನಿ ಪತ್ರಿಕೆಯಲ್ಲಿ ಕೆಲಸ ಮಾಡಿದರು. ನಂತರ ೨೦೦೭ ರಿಂದ ಬೆಂಗಳೂರಿನಲ್ಲಿ 'ಅಗ್ನಿ' ವಾರ ಪತ್ರಿಕೆಯಲ್ಲಿ ಕಾರ್ಯನಿರ್ವಹಿಸಿದರು.

ಪತ್ರಿಕಾ ಬರಹದಲ್ಲಿ ಅಂಕಣ ಬರಹವು ತುಂಬಾ ಮುಖ್ಯವಾದ ಪತ್ರವನ್ನು ವಹಿಸುತ್ತದೆ. ಹತಗುಂದಿಯವರು ಗಧ್ಯ ರೂಪದಲ್ಲಿ ಅಂಕಣಗಳನ್ನು ಬರೆಯುತ್ತಾರೆ. ಕನ್ನಡದ ಗಧ್ಯ ಇವರ ಕೈಯಲ್ಲಿ ಒಂದು ಪ್ರಬುದ್ಧತೆಯನ್ನು ಪಡೆದಿದೆ ಎಂದು ಹೇಳಬಹುದು. ಸಂದರ್ಭ ಸನ್ನಿವೇಶ ಗಳಿಗನುಗುಣವಾಗಿ ಅಂಕಣಗಳನ್ನು ಬರೆದಿದ್ದಾರೆ.

ಹತಗುಂದಿಯವರ ಅಂಕಣಗಳು, ರಾಜಕೀಯ, ಸಾಂಸ್ಕೃತಿಕ, ಸಾಮಾಜಿಕ, ಕಲೆ ಹಾಗೂ ವ್ಯಕ್ತಿತ್ವ ಚಿತ್ರಣಗಳನ್ನು ನೋಡಬಹುದು. ಅಂಕಣ ಬರಹಗಾರರು ವಿಷಯಕ್ಕಾಗಿ ನಡೆಸಿದ ಶೋಧಗಳು, ಬೇರೆಯವರಿಂದ ಮಾಹಿತಿ ಪಡೆದರೂ ಅದನ್ನು ತನ್ನದೇ ಆದ ಚಿಂತನೆಯ ಕುಲುಮೆಯಲ್ಲಿ ಅದ್ದಿ ಹೊಸ ರೂಪ, ಹೊಸ ಆಕಾರ ಹಾಗೂ ಹೊಸ ತಾಜಾತನದೊಂದಿಗೆ ಹೊರಬರುತ್ತದೆ.

ಹತ್ತು ಪದಗಳಲ್ಲಿ ಹೇಳಬೇಕಾದ ವಿಷಯವನ್ನು ಒಂದು ಪದದಲ್ಲಿ ಹತ್ತು ವಾಕ್ಯಗಳಲ್ಲಿ ಹೇಳಬೇಕಾದುದು ಒಂದು ವಾಕ್ಯದಲ್ಲಿ ಹೀಗೆ ಚಿಕ್ಕದಾಗಿ ಚೊಕ್ಕವಾಗಿ ಬರೆಯುತ್ತಿರುವ ಇವರ ಅಂಕಣ ಬರಹಗಳನ್ನು ಕಂಡು ಅನೇಕ ವಿದ್ವಾಂಸರು ಇವರನ್ನು ಪ್ರೀತಿ ಹಾಗೂ ವಿಶ್ವಾಸದಿಂದ ಕಂಡು ಗೌರವಿಸುತ್ತಾರೆ. ಇವರ ಬರವಣಿಗೆ ಶೈಲಿ ಅಷ್ಟೊಂದು ಹರಿತ ಹಾಗೂ ಪ್ರಭಾವಶಾಲಿಯಾಗಿದೆ.

ಹಿರಿಯ ಸಾಹಿತಿಗಳಾದ ಶಾಂತರಸರು ಓದಿ 'ನಿನ್ನ ಅಂಕಣ ಭಾಳ ಛಂದ ಆದ' ಎಂದು ಹೇಳುತ್ತಿದ್ದರು. ಹಾಗೂ ಸ್ಫೂರ್ತಿಯನ್ನು ತುಂಬುತ್ತಿದ್ದರು. 'ಅಗ್ನಿ' ಪತ್ರಿಕೆಗೆ ಸಂಪಾದಕರಾದಾಗ ಶಾಂತರಸರಷ್ಟು ಸಂತೋಷಪಟ್ಟ ವ್ಯಕ್ತಿ ಬೇರೊಬ್ಬರಿಲ್ಲ ಎಂದು ಹೇಳಬಹುದು.

ರಾಜಶೇಖರ ಹತಗುಂದಿ 'ಬಯಲು ಹುಡಿ' ಎಂಬ ಶೀರ್ಷಿಕೆಯಲ್ಲಿ ಅಂಕಣ ಬರೆಯುತ್ತಾರೆ. 'ಬಯಲು ಹುಡಿ ಎಂಬುದು ಒಂದು ರೂಪಕ ನುಡಿಗಟ್ಟು ಅಲ್ಲಮ ಪ್ರಭುವಿನ ವಚನಗಳಲ್ಲಿ ತೇಲಿ ಬರುತ್ತದೆ. ಹುಡಿಯ ಅರ್ಥ ಗಂಧಗಮಲು ಸುವಾಸನೆಗೆ ಸಂಬಂಧಿಸಿದೆ."[೧]

ಹತಗುಂದಿಯವರು ಜನಪರ ಚಳುವಳಿಯಿಂದ ಬಂದವರು ಇವರೊಬ್ಬ ಕತೆಗಾರ, ಸೂಕ್ಷ್ಮ ಸಂವೇದನಾಶೀಲ ವ್ಯಕ್ತಿ,ಪುಸ್ತಕ ರಾಜಕೀಯ ವಿಷಯಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ನಿಜಾಂಶದೊಂದಿಗೆ ನೇರ ನಿಷ್ಟುರ ಬರವಣಿಗೆಯನ್ನು ಇವರ ಅಂಕಣಗಳಲ್ಲಿ ಕಾಣಬಹುದು. ತಾವು ಬರೆದ ಅಂಕಣಗಳನ್ನು ಕುರಿತು ಸಾರ್ವಜನಿಕ ಅಬಿಪ್ರಾಯ ಮೂಡಿಸುವ ಕಡೆಗೆ ಹೆಚ್ಚಿನ ಗಮನ ಕೊಡುತ್ತಾರೆ. ಸಾಹಿತ್ಯಿಕವಾಗಿ ಬರೆದ ಒಳ್ಳೆ ಭಾಷಾ ಶೈಲಿ ಹೊಂದಿದ ಹತಗುಂದಿಯವರ ಅಂಕಣಗಳು ಇಂದಿನ ಸಮಾಜಕ್ಕೆ ಮತ್ತು ದೇಶಕ್ಕೆ ತುಂಬಾ ಉಪಯುಕ್ತವಾಗಿವೆ ಎಂದು ಹೇಳ ಬಯಸುತ್ತೇನೆ.

---

೧. ರಾಜಶೇಖರ ಹತಗುಂದಿ-ಬಯಲು ಹುಡಿ ಪು.೧೦.

# ಅನುಬಂಧಗಳು

# ಅನುಬಂಧ

೧. ರಾಜಶೇಖರ ಹತಗುಂದಿಯವರ ಪ್ರಕಟಿತ ಗ್ರಂಥಗಳು.

೨. ರಾಜಶೇಖರ ಹತಗುಂದಿಯವರ ಜೀವನದ ಘಟನಾವಳಿಗಳು.

೩. ರಾಜಶೇಖರ ಹತಗುಂದಿಯವರಿಗೆ ಸಂದ ಪ್ರಶಸ್ತಿ ಮತ್ತು ಪುರಸ್ಕಾರಗಳು

೪. ಭಾವಚಿತ್ರಗಳು.

೫. ಆಕರ ಗ್ರಂಥಗಳು.

## ಅನುಬಂಧ–೧

## ರಾಜಶೇಖರ ಹತಗುಂದಿಯವರ ಪ್ರಕಟಿತ ಗ್ರಂಥಗಳು

೧. **ಸಣ್ಣ ಕಥೆಗಳು**

* ಕಾಳ ಬೆಳದಿಂಗಳ ಸಿರಿ.

೨. **ಪ್ರವಾಸ ಕಥನ**

* ಬುದ್ಧನ ನಾಡಿನಲ್ಲಿ
* The Land of Budha

೩. **ಅಂಕಣ ಬರಹ :**

* ಬಯಲು ಹುಡಿ
* ಎಡಹೊತ್ತಿನ ಪಯಣ.

೪. **ಸಂಪಾದನೆ :**

* ಕಲಬುರ್ಗಿ ಜಿಲ್ಲಾ ದರ್ಶನ.

೫. **ಕಥೆಗಳ ಪ್ರಕಟಣೆ**

* ಕಾಳ ಬೆಳದಿಂಗಳ ಸಿರಿ ಪ್ರಜಾವಾಣಿ ವಿಶೇಷಾಂಕ ರಾಜ್ಯ ಮಟ್ಟದ ಕಥಾ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ.
* ಗುಲಬರ್ಗಾ ವಿಶ್ವವಿದ್ಯಾಲಯದ ಬಿ.ಎ. ಪ್ರಥಮ ಸೆಮಿಸ್ಟರ್ ಕನ್ನಡ ಬೇಸಿಕ್ ತರಗತಿಗೆ ಇವರ 'ಪೊರೆ ಕಳಚುವ ಪರಿ' ಸಣ್ಣ ಕತೆ ಪಠ್ಯವಾಗಿತ್ತು.
* ಇಂಗ್ಲೀಷ್ ಅನುವಾದಗೊಂಡ ಸಣ್ಣ ಕಥೆಗಳು.

  ೧. The Land of Budha

  ೨. ಕ್ರಾಂತಿಗೊಂದು ಪತ್ರ

  ೩. ಅನಿಕೇತನ ಇಂಗ್ಲೀಷ್ ನಿಯತ ಕಾಲಿಕೆ

## ಅನುಬಂಧ–೨

## ರಾಜಶೇಖರ ಹತಗುಂದಿಯವರ ಜೀವನದ ಘಟನಾವಳಿಗಳು

೧. ಜನನ – ೧೬.೧೧.೧೯೬೬.

೨. ಹುಟ್ಟೂರು – ಗುಲಬರ್ಗಾ ತಾಲ್ಲೂಕಿನ ಹತಗುಂದಿ ಗ್ರಾಮ.

೩. ತಂದೆ – ಶ್ರೀ ಚಿದಂಬರರಾವ್, ತಾಯಿ – ಶ್ರೀಮತಿ ಕಸ್ತೂರಿಬಾಯಿ.

೪. ಪ್ರಾಥಮಿಕ ಶಾಲೆ – ೧ ರಿಂದ ೪ನೇ ತರಗತಿಯವರೆಗೆ ಸರಕಾರಿ ಶಾಲೆ ಹತಗುಂದಿ.

೫. ಮಾಧ್ಯಮಿಕ ಶಾಲೆ – ೫ ರಿಂದ ೯ ರ ವರೆಗೆ ಸರಕಾರಿ ಶಾಲೆ ಸಾವಳಗಿ ತಾ.ಗುಲಬರ್ಗಾ.

೬. ಕಾಲೇಜು ಶಿಕ್ಷಣ – ಪಿ.ಯು.ಸಿ. ಪ್ರಥಮ ಮತ್ತು ದ್ವಿತೀಯ ಎಸ್.ಎಸ್. ಮುರಗೋಳ,ಕಾಲೇಜು, ಶಹಾಬಾದ.

೭. ವೃತ್ತಿ ಕೋರ್ಸ – ಸರಕಾರಿ ಪಾಲಿಟೆಕ್ನಿಕ್ ಕಾಲೇಜು, ಬಳ್ಳಾರಿ.

೮. ವಿವಾಹ – ೧೯೯೧ ದಿನಾಂಕ : ೨೩.೦೫.೧೯೯೧. ಪತ್ನಿ – ಗಂಗಮ್ಮ

೯. ವೃತ್ತಿ – ಸರಕಾರಿ ಪ್ರಾತಮಿಕ ಶಾಲೆ, ರೋಜಾ (ಬಿ), ತಾ.ಜಿ.ಗುಲಬರ್ಗಾ

೧೦. ಮಕ್ಕಳು – (೧) ರಶ್ಮಿ (೨) ರಕ್ಷಿತ.

೧೧. ಎಂ.ಎ. ಕನ್ನಡ ಸಾಹಿತ್ಯ – ಮುಕ್ತ ವಿಶ್ವವಿದ್ಯಾಲಯ, ಮೈಸೂರು.

೧೨. ವೃತ್ತಿ ಜೀವನ ಪ್ರಾರಂಭ – ಕೆ.ವಿ. ಶೆಟ್ಟಿ ಕಂಪನಿ, ಶಹಾಪೂರ.

೧೩. ಕೃತಿಗಳು – ಎಡಹೊತ್ತಿನ ಪಯಣ ಮತ್ತು ಬಯಲು ಹುಡಿ

೧೪. 'ಅಗ್ನಿ' ವಾರ ಪತ್ರಿಕೆಯ – ಸಂಪಾದಕರು ಬೆಂಗಳೂರು.

೧೫. ಕಥಾ ಸಂಕಲನ – ಕಾಳು ಬೆಳದಿಂಗಳ ಸಿರಿ.

೧೬. ಪ್ರಧಾನ ಕಥನ – ಬುದ್ಧನ ನಾಡಿನಲ್ಲಿ (ಬಿ.ಕಾಂ. ನಾಲ್ಕನೇ ಸೆಮಿಸ್ಟರ್ ಪಠ್ಯಪುಸ್ತಕವಾಗಿದೆ)

೧೭. ಸಂಪಾದನೆ – ಕಲಬುರ್ಗಿ ಜಿಲ್ಲಾ ದರ್ಶನ.

–೦–

## ಅನುಬಂಧ–೩

## ರಾಜಶೇಖರ ಹತಗುಂದಿಯವರ ಪುರಸ್ಕಾರಗಳು

೧. ಪ್ರಜಾವಾಣಿ ದೀಪಾವಳಿ ಕಥಾ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ.

೨. ಜಯತೀರ್ಥ ರಾಜಪುರೋಹಿತ ದತ್ತಿ ಕಥಾ ಸ್ಪರ್ಧೆ – ಚಿನ್ನದ ಪದಕ ಮತ್ತು ನಗದು ಬಹುಮಾನ.

೩. ಹುನಗುಂದ ಸಾರಂಗ ಮಠದ ಪ್ರತಿಷ್ಠಾನದಿಂದ ಬಹುಮಾನ.

–oOo–

# ಅನುಬಂಧ-೪

## ಭಾವಚಿತ್ರಗಳು



ರಾಜಶೇಖರ ಹತಗುಂದಿಯವರೊಂದಿಗೆ ಸಂಶೋಧಕರ ಸಂದರ್ಶನ



ಡಾ. ಬಸವರಾಜ ಸಬರದವರೊಂದಿಗೆ ಸಂಶೋಧಕರ ಸಂದರ್ಶನ







ಡಾ. ಚನ್ನಣ್ಣ ವಾಲಿಕಾರವರೊಂದಿಗೆ ಸಂಶೋಧಕರ ಸಂದರ್ಶನ



ಕೆ. ನೀಲಾ ಅವರೊಂದಿಗೆ  ಸಂಶೋಧಕರ ಸಂದರ್ಶನ



ಪತ್ರಕರ್ತ ಬಿ.ವಿ. ಚಕ್ರವರ್ತಿಯವರೊಂದಿಗೆ ಸಂಶೋಧಕರ ಸಂದರ್ಶನ



ರಾಜಶೇಖರ ಹತಗುಂದಿಯವರು ಅವರ ಪತ್ನಿ ಮತ್ತು ಮಕ್ಕಳೊಂದಿಗೆ







ಸಾಹಿತ್ಯ ಸಮ್ಮೇಳನದ ಸದಸ್ಯರಾಗಿ ರಾಜಶೇಖರ ಹತಗುಂದಿಯವರು



ಗು.ವಿ.ಗು.ದಲ್ಲಿ ನಡೆದ ಸಮಾರಂಭವೊಂದರಲ್ಲಿ ಪ್ರಶಸ್ತಿಯನ್ನು ಸ್ವೀಕರಿಸುತ್ತಿರುವ ರಾಜಶೇಖತ ಹತಗುಂದಿಯವರು.





## ಅನುಬಂಧ–೫

## ಆಕರ ಗ್ರಂಥಗಳು


| ಕ್ರ.ಸಂ. | ಲೇಖಕರ ಹೆಸರು | | ಪುಸ್ತಕದ ಹೆಸರು /ಪ್ರಕಾಶನ & ವರ್ಷ |
|---|---|---|---|
| ೧. | ಕೀರ್ತಿನಾಥ ಕುರ್ತಕೋಟಿ | : | ಉರಿಯ ನಾಲಗೆ, ಮನೋಹರ ಗ್ರಂಥಮಾಲೆ ಧಾರವಾಡ, ೨೦೦೧. |
| ೨. | ಕೀರ್ತಿನಾಥ ಕುರ್ತಕೋಟಿ | : | ರಾಜಸ್ಪರ್ಶ :ಮನೋಹರ ಗ್ರಂಥಮಾಲೆ ಲಕ್ಷ್ಮೀಬವನ, ಸುಭಾಸ ರಸ್ತೆ, ಧಾರವಾಡ, ೧, ೧೯೯೬ |
| ೩. | ಕು.ಶಿ. ಹರಿದಾಸ ಭಟ್ಟ | : | ಲೋಕಾಭಿರಾಮ ಸಂಪುಟ–೧ ಗೀತಾ ಬುಕ್ ಹೌಸ್ ಬೆಂಗಳೂರು,೧೯೭೧. |
| ೪. | ಕು.ಶಿ.ಹರಿದಾಸಭಟ್ಟ | : | ಲೋಕಾಭಿರಾಮ ಸಂಪುಟ–೨ ಗೀತಾ ಬುಕ್ ಹೌಸ್, ಮೈಸೂರು, ೧೯೭೭ |
| ೫. | ಕೃಷ್ಣಸ್ವಾಮಿ ಎಚ್.ಎಸ್. | : | ಅಂಕಣ ಬರಹ ಕರ್ನಾಟಕ ಮಾಧ್ಯಮ ಅಕಾಡೆಮಿ, ಬೆಂಗಳೂರು ೨೦೦೪. |
| ೬. | ಕೃಷ್ಣಸ್ವಾಮಿ ಎಚ್.ಎಸ್. | : | ಬೆಳಕು ಚೆಲ್ಲಿದ ಬದುಕು. ಟಿ.ಎಸ್. ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ ಮೈಸೂರು, ೧೯೯೮. |
| ೭. | ಕೃಷ್ಣಸ್ವಾಮಿ ಎಚ್.ಎಸ್ | : | ಮಾನ್ಯರು–ಸಾಮಾನ್ಯರು ಟಿ.ಎಸ್. ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೯೯. |
| ೮. | ಗಿರಡ್ಡಿ ಗೋವಿಂದರಾಜ | : | ಸಮಗ್ರ ವಿಮರ್ಶೆ, ಸಪ್ನಾ ಬುಕ್ ಹೌಸ್, ಬೆಂಗಳೂರು, ೨೦೦೧. |
| ೯. | ನಿರಂಜನ | : | ರಾಜಧಾನಿಯಿಂದ ರಶ್ಮಿ ಪ್ರಕಾಶನ, ಬೆಂಗಳೂರು, ೧೯೭೨. |

೧೦. ನಿರಂಜನ ವಾನಳ್ಳಿ : ಕನ್ನಡದಲ್ಲಿ ಕಲೆ, ಸಾಹಿತ್ಯ, ಪತ್ರಿಕೆಗಳು
ಶಿವರಾಮ ಕಾರಂತ ಅಧ್ಯಯನ ಕೇಂದ್ರ
ವಿವೇಕಾನಂದ ಕಾಲೇಜು, ಪುತ್ತೂರು, ೨೦೦೧.

೧೧. ಮಾನಪ್ಪ ನಾಯಕ (ಸಂ) : ಹಾರೋಗದ್ದೆ : ಸಾಹಿತ್ಯ ಸಲ್ಲಾಪ
ಸುರುಚಿ ಪ್ರಕಾಸನ, ಸರಸ್ವತಿಪುರಂ, ಮೈಸೂರು.
೧೯೭೨.

೧೨. ರಾಮಚಂದ್ರಪ್ಪ ಬರಗೂರು (ಪ್ರ.ಸಂ) : ಕನ್ನಡ ಸಾಹಿತ್ಯದಲ್ಲಿ ಮನುಷ್ಯನ ಪರಿಕಲ್ಪನೆ
ಕರ್ನಾಟಕ ಸಾಹಿತ್ಯ ಅಕಾಡೆಮಿ, ನೃಪತುಂಗ ರಸ್ತೆ,
ಬೆಂಗಳೂರು, ೧೯೯೩.

೧೩. ರಾಜರತ್ನಂ ಜಿ.ಪಿ. : ಸ್ವಾರಸ್ಯ
ಸಾಕ್ಷ್ಯ ಸಾಹಿತ್ಯ ಮಂಟಪ ಮಲ್ಲೇಶ್ವರಂ
ಬೆಂಗಳೂರು, ೧೯೭೦.

೧೪. ಲಂಕೇಶ ಪಿ. : ಟೀಕೆ ಟಿಪ್ಪಣೆ
ಪತ್ರಿಕೆ ಪ್ರಕಾಶನ, ಬಸವನಗುಡಿ, ಬೆಂಗಳೂರು
೧೯೯೧.

೧೫. ಲಂಕೇಶ ಪಿ. : ಟೀಕೆ ಟಿಪ್ಪಣೆ–೧–೨
ಪತ್ರಿಕೆ ಪ್ರಕಾಶನ, ಬಸವನ ಗುಡಿ, ಬೆಂಗಳೂರು.
೧೯೯೮.

೧೬. ವಸಂತಕುಮಾರ ಪೆರ್ಲ : ವರ್ತಮಾನ,
ಸಾಹಿತ್ಯ ಸಂಘ ಬದಿಯಡ್ಕ ಕಾಸರಗೋಡು,
ಕೇರಳ, ೧೯೯೫.

೧೭. ವೀರಣ್ಣ ದಂಡೆ : ಕಲರವ
ಸಿದ್ಧಲಿಂಗೇಶ್ವರ ಬುಕ್ ಡಿಪೋ ಮತ್ತು ಪ್ರಕಾಶನ,
ಕಲಬುರ್ಗಿ–೧, ೧೯೯೮.

೧೮. ವೈಕುಂಠ ರಾಜು ಬಿ.ವಿ. : ಸಂಪಾದಕೀಯ ಡೈರಿ ೧೯೮೪, ೧೯೮೫,೧೯೮೬
ಸನತ ಪ್ರಕಾಶನ, ಶ್ರೀರಾಮಪೂರಂ, ಬೆಂಗಳೂರು.
೧೯೮೮.

೧೯. ಶಂಕರಪಾಟೀಲ : ಸಾಹಿತಿ ಸಾನಿಧ್ಯ
ಸುರುಚಿ ಪ್ರಕಾಶನ, ಮೈಸೂರು,೧೯೯೭.

| | | | |
|---|---|---|---|
| ೨೦. | ಶಾಮಣ್ಣ ಖಾದ್ರಿ | : | ಅರ್ಪಣ<br>ಖಾದ್ರಿ ಶಾಮಣ್ಣ ಸ್ಮಾರಕ ಟ್ರಸ್ಟ್,<br>ದೇಶಿಕ, ಕೃಪೆ, ಜೆ.ಪಿ.ನಗರ, ಬೆಂಗಳೂರು,<br>೭೮೯, ೧೯೯೩. |
| ೨೧. | ಶ್ರೀಧರ ಬಿ.ಎ. | : | ಪತ್ರಿಕೋದ್ಯಮ<br>ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೦. |
| ೨೨. | ಸರೋಜನಿ ಚಲವಾರ | : | ಸನೂತನ<br>ವಿವೇಕ ಪ್ರಕಾಶನ, ಜಯಪ್ರಕಾಶ ನಗರ, ಹುಬ್ಬಳ್ಳಿ,<br>೧೯೯೪. |
| ೨೩. | ಸಿದ್ಧಲಿಂಗ ಪಟ್ಟಣಶೆಟ್ಟಿ | : | ಚಹಾದ ಜೋಡಿ<br>ಅನನ್ಯ ಪ್ರಕಾಶನ, ವಿದ್ಯಾಗಿರಿ, ಧಾರವಾಡ,೧೯೯೭. |
| ೨೪. | ಸಂತೋಷ ಕುಮಾರ ಗುಲ್ವಾಡಿ | : | ಪತ್ರಕರ್ತ ಮಹಾತ್ಮಾ ಗಾಂಧೀಜಿ<br>ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧. |
| ೨೫. | ರಾಜಪ್ಪ ದಳವಾಯಿ | : | ಕನ್ನಡ ಸಾಹಿತ್ಯ ಕೋಶ<br>ದಳವಾಯಿ ಪ್ರಕಾಶನ, ಬೆಂಗಳೂರು,೧೯೯೬. |
| ೨೬. | ನಾಡಿಗ ಕೃಷ್ಣ ಮೂರ್ತಿ | : | ಭಾರತೀಯ ಪತ್ರಿಕೋದ್ಯಮ<br>ಮೈಸೂರು ವಿಶ್ವವಿದ್ಯಾಲಯ, ೨೦೦೬. |
| ೨೭. | ಜಿ.ಎನ್. ರಂಗನಾಥ | : | ಕಾಮಧೇನು<br>ಪುಸ್ತಕ ಭವನ, ಬೆಂಗಳೂರು-೨೦೦೯. |
| ೨೮. | ರಾಜಶೇಖರ ಹತಗುಂದಿ | : | ಎಡ ಹೊತ್ತಿನ ಪಯಣ<br>ಪಲ್ಲವ ಪ್ರಕಾಶನ, ಬೆಂಗಳೂರು-೨೦೧೦. |
| ೨೯. | ರಾಜಶೇಖರ ಹತಗುಂದಿ | : | ಬಯಲು ಹುಡಿ<br>ಪಲ್ಲವ ಪ್ರಕಾಶನ, ಬೆಂಗಳೂರು-೨೦೦೯. |

-oOo-